A.—Sri H. M. CHANNABASAPPA (Minister for Industries).—

(*a*) The population figures of these two places as per 1951 Census are as follows:—

Solur	...	2,019
Gudemaranahalli	...	2,115

(*b*) This is a matter of opinion.

(*c*) No.

9-30 A.M.

BUDGET FOR 1956-57—DEMANDS FOR GRANTS.

Mr. SPEAKER.—We have got four Demands—Nos. 8, 37, 39A and 40. All of them can be taken up together.

DEMAND No. 8—IRRIGATION

18. OTHER REVENUE EXPENDITURE FINANCED FROM ORDINARY REVENUE.

Mr. SPEAKER.—Motion moved:

"That a sum not exceeding Rs. 77,96,000 be granted to the Government to defray the charges which will come in course of payment during the year ending 31st day of March 1957, in respect of 'Other Revenue Expenditure financed from Ordinary Revenue'."

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಈ ಹಿಂದೆ ಕೆರೆಗಳ ಮತ್ತು ನಾಲೆಗಳ ದುರಸ್ತಿ ಕಾಂಗಾರಿಯನ್ನು ರೆವಿನ್ಯೂ ಇಲಾಖೆಯವರ ಮೂಲಕ ನಡೆಸಿಕೊಂಡು ಬರಲಾಗುತ್ತಿತ್ತು. ಆ ಪದ್ಧತಿಗನುಗುಣವಾಗಿ ಒಂದು ಟ್ಯಾಂಕ್ ಪಂಚಾಯಿತಿ ಎಂಬುದೂ ಕೂಡ ಜಾರಿಯಲ್ಲಿತ್ತು. ಆದರೆ ಅವುಗಳೆಲ್ಲಾ ಈ ದಿವಸ ಇವೆಯೋ ಅಥವಾ ಇಲ್ಲವೋ ಅಥವಾ ಆ ಕೋಡನ್ನೇ revise ಮಾಡಿದ್ದಾರೋ ಒಂದೂ ನನಗೆ ಗೊತ್ತಾಗುತ್ತಿಲ್ಲ. ಈ ಹಿಂದೆ ಆ ಹಳ್ಳಿ ಜನರಿಗೆ ಈ ಕೆರೆಗಳಲ್ಲಿರತಕ್ಕ ಹೂಳನ್ನೂ ಗೋಡನ್ನೂ ತೆಗೆಯುವುದಕ್ಕೂ ಮತ್ತು ಏರಿಗಳನ್ನು ದುರಸ್ತಿ ಮಾಡುವುದಕ್ಕೂ ಒಂದು ಅವಕಾಶ ಕೊಟ್ಟು ಆ ಬಗ್ಗೆ ಜನರಿಗೆ ಆಯಾಯ ಕೆರೆಗಳಲ್ಲಿ ಉಚಿತವಾಗಿ ಮೀನು ಹಿಡಿಯತಕ್ಕಂಥ ಒಂದು ಅವಕಾಶವನ್ನು ಕೊಡುತ್ತಿದ್ದರು. ಅದಕ್ಕಾಗಿ ಆ ದಿವಸ ರೈತರೆಲ್ಲಾ ವರ್ಷದಲ್ಲಿ ಒಂದು ಕಾಲವನ್ನು ಕ್ಲುಪ್ತಮಾಡಿಕೊಂಡು ಆ ವೇಳೆಗೆ ಸರಿಯಾಗಿ ಆ ಕೆರೆಯ ಹೂಳು ತೆಗೆಯುವುದು ಮತ್ತು ಏರಿ ಪೇರಿ ಇತ್ಯಾದಿ ಕೆಲಸಗಳನ್ನು ನಡೆಸಿಕೊಂಡು ಬರತಕ್ಕಂಥ ಒಂದು ಪದ್ಧತಿ ಬಹಳಕಾಲದವರೆಗೂ ಜಾರಿಯಲ್ಲಿತ್ತು. ಆದರೆ ಈ ಹೊತ್ತು ಈ ಪದ್ಧತಿಯಂತೂ ನಮ್ಮ ಕಡೆ ಮಾಯವಾಗಿಹೋಗಿದೆ.

ಇನ್ನು ಹಿಕ್ಕಲ್‌ಗಳನ್ನು ರಕ್ಷಿಸಿಕೊಂಡು ಬರುವ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಈ ಹಿಕ್ಕಲ್‌ಗಳನ್ನು ಒಂದು ಕ್ರಮದಲ್ಲಿ ರಿಪೇರಿ ಮಾಡುತ್ತಿದ್ದರೆ ನೀರು ಲುಕ್ಸಾನಾಗುವುದಕ್ಕೆ ಅವಕಾಶವಿರುವುದಿಲ್ಲ. ಜನರಿಗೆ ನೀರು ಸರಬರಾಯಿ ಮಾಡಲು ಯಾವ ತೊಂದರೆಯೂ ಇರುವುದಿಲ್ಲ. ಹೀಗೆ ಇಷ್ಟು ಅನುಕೂಲವಿದೆ. ಆದುದರಿಂದ ಸರ್ಕಾರದವರು ಹಿಕ್ಕಲುಗಳನ್ನು ಮತ್ತು ಕೆರೆಗಳನ್ನು ದುರಸ್ತಿ ಮಾಡಲು ಸಾಕಷ್ಟು ಹಣವನ್ನು ಉದಾರವಾಗಿ ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ. ಆದರೆ ಈ ವರ್ಷದ ಕಾರ್ಯಕ್ರಮಗಳಲ್ಲಿ ಇಂಥ ಒಂದು ಬಾಬನ್ನೂ ತಾವು ಸೇರಿಸಿರುವಂತೆ ಕಂಡುಬರುವುದಿಲ್ಲ. ಇನ್ನು ಚಾನಲ್‌ಗಳ ಮತ್ತು ಕೆರೆಗಳ ಬಗ್ಗೆ ರಿಪೇರಿ ನಡೆಸುವ ಸಂದರ್ಭಗಳಲ್ಲಿ ಕಂಟ್ರಾಕ್ಟರುಗಳೂ ಮತ್ತು ಸಬ್-ಓವರ್‌ಸೀಯರುಗಳೂ ಸರಿಯಾದ ಕಾರ್ಯಕ್ರಮಗಳನ್ನು ಕೈಗೊಂಡು ಕೆಲಸ ನಡೆಸುತ್ತಿಲ್ಲ. ಇನ್ನು ಮುಂದೆ ಆದರೂ ತಾವು ಕಂಟ್ರಾಕ್ಟರುಗಳಿಗೆ ಆಫೀಸರು ಬಿಲ್ಲನ್ನು ಪಾಸ್ ಮಾಡುವ ವೇಳೆಯಲ್ಲಿ ನಾಲೆ ರಿಪೇರಿಗಳನ್ನು ಸರಿಯಾಗಿ ನಡೆಸಿದ್ದಾರೆಯೋ ಅಥವಾ ಇಲ್ಲವೋ ಎಂಬುದನ್ನು ಪರಿಶೀಲನೆ ನಡೆಸಿದನಂತರ ಹಣವನ್ನು ಪಾವತಿ ಮಾಡುವಂತೆ ಒಂದು ನಿಬಂಧನೆಯನ್ನು ಮಾಡಿ, ರೈತರಿಗೆ ಅನುಕೂಲ ಒದಗಿಸುವುದರ ಜೊತೆಗೆ ನೀರೂ ಸಹ ಲುಕ್ಸಾನಾಗದಂತೆ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲ್).—ಸ್ವಾಮಿ, ಪ್ರಥಮ ಪಾಂಚವಾರ್ಷಿಕ ಯೋಜನೆಯಲ್ಲಿ ಕೆಲವು ಮೈನರ್ ಟ್ಯಾಂಕುಗಳ ರೆಸ್ಟೊರೇಷನನ್ನು ಮಾಡಿದ್ದೇವೆಂದು ತಿಳಿಸಿದ್ದಾರೆ. ಇಷ್ಟೇ ಅಲ್ಲದೆ ಇದರ ಜೊತೆಗೆ ಕೆಲವು ಮೇಜರ್ ಕೆರೆಗಳ ರಿಪೇರಿಯನ್ನೂ ಸಹ ಮಾಡಿದ್ದೇವೆಂದು ಹೇಳಿ ಆ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಕೂಡ ತಿಳಿಸಿದ್ದಾರೆ. ಇಷ್ಟಾಗಿದ್ದರೂ ವರ್ಷ ವರ್ಷ ಈ ಕೆರೆಗಳ ರಿಪೇರಿ ಜಾಸ್ತಿ ಆಗುತ್ತಿದೆಯೇ ವಿನಾ ಅದೇನೂ ಇಳಿಮುಖವಾಗುತ್ತಿಲ್ಲ. ಹಿಂದೆ ಡಿಸ್ಟ್ರೆಸ್ ರಿಲೀಫ್ ಕಾಂಗಾರಿಗಳನ್ನು ನಡೆಸುತ್ತಿದ್ದಂಥ ಕಾಲದಲ್ಲಿ ಜನರಿಗೆ ಜೀವನಕ್ಕೆ ಮಾರ್ಗವಿಲ್ಲದೆ ಇದ್ದುದರಿಂದ ಅವರಿಗೆ ಕೂಲಿನಾಲಿಗಳನ್ನು ಕೊಡಬೇಕಾದ ಸಂದರ್ಭಗಳು ಉಂಟಾದ್ದರಿಂದ ಈ ರೀತಿಯಾಗಿ ಕೆಲವು ಕೆರೆಗಳ ರಿಪೇರಿ ಇತ್ಯಾದಿ ಕಾರ್ಯಗಳನ್ನು ಕೈಗೊಳ್ಳಲಾಗಿತ್ತು. ಅಂಥ ಕೆಲಸಗಳನ್ನೇ ಈ ದಿವಸ ಸರ್ಕಾರದವರು ಲೆಕ್ಕಕ್ಕೆ ತೆಗೆದುಕೊಂಡು ನಾವು ಕೆರೆಗಳ ರೆಸ್ಟೋರೇಷನ್ ಕಾರ್ಯವನ್ನು ಮುಗಿಸಿದ್ದೇವೆ ಎಂದು ತಿಳಿಸಿದ್ದಾರೆ. ಈ ಬಗ್ಗೆ ಬಡ್ಜೆಟ್ಟಿನಲ್ಲೂ ಕೂಡ ತೋರಿಸಿದ್ದಾರೆ. ಆದರೆ ಈ ರೆಸ್ಟೊರೇಷನ್ ಎಂದರೆ ಇದರ ಬಗ್ಗೆ ಏನೇನು ಕೆಲಸಗಳು ನಡೆಯಬೇಕಾಗಿತ್ತು, ಏನೇನು ಕೆಲಸಗಳು ಪೂರೈಸಿದ್ದರೆ ಅದನ್ನು ರೆಸ್ಟೊರೇಷನ್ ಎಂದು ಕರೆಯಲು ಅವಕಾಶವಾಗುತ್ತಿತ್ತು ಎನ್ನುವ ಅಂಶಗಳಿಗೊಂದಕ್ಕೂ ಇವರು ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. ಎಲ್ಲೋ ಅಲ್ಲೊಂದು ಕಡೆ-ಇಲ್ಲೊಂದು ಕಡೆ ಸ್ವಲ್ಪ ಮಣ್ಣನ್ನೆತ್ತಿ ಏರಿಗೆ ಹಾಕಿದ್ದನ್ನೂ ಸಹ ಲೆಕ್ಕಕ್ಕೆ ತೆಗೆದುಕೊಂಡು ಇದನ್ನೂ ಕೆರೆ ರಿಪೇರಿ ಎಂದು ಕರೆದಿದ್ದಾರೆ. ಆದರೆ ಮೊದಲು ಆ ಕೆರೆಯಲ್ಲಿ ನೀರು ಎಷ್ಟು ನಿಲ್ಲುತ್ತಿತ್ತು, ರಿಪೇರಿ ನಡೆಸಿದ್ದರಿಂದ ಎಷ್ಟು ನೀರು ಹೆಚ್ಚಾಗಿ ನಿಲ್ಲುತ್ತದೆ ಎಂಬುದನ್ನೇನೂ ಇವರು ಲೆಕ್ಕಹಾಕಿದಂತೆ ಕಂಡುಬರುವುದಿಲ್ಲ. ಅಂತೂ ಲೆಕ್ಕಕ್ಕೆ ಮಾತ್ರ ಆ ಕೆರೆಗೆ 10 ಸಾವಿರ ಖರ್ಚು ಮಾಡಿದ್ದೇವೆ, ಈ ಕೆರೆಗೆ ಐದು ಸಾವಿರ ರೂಪಾಯಿಗಳನ್ನು ಖರ್ಚು

(ಶ್ರೀ ಟಿ. ಎನ್. ಮುಡಲಗಿರಿಗೌಡ.)

ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಇದನ್ನು ಕೆರೆಗಳ ಜೀರ್ಣೋದ್ಧಾರವೆಂದು ಕರೆದರೆ ಅದು ಅರ್ಥವಿಲ್ಲದ ಮಾತು. ಆದರೆ ಈ ದಿವಸ ಇವರು ಯಾವ್ಯಾವ ಕೆರೆಗಳನ್ನು ಹೇಗೆ ಜೀರ್ಣೋದ್ಧಾರ ಮಾಡಿದ್ದಾರೋ ಆ ಕೆರೆಗಳಲ್ಲೆಲ್ಲಾ ಮೊದಲು ನೀರು ನಿಲ್ಲುತ್ತಿದ್ದುದಕ್ಕಿಂತ ಈ ದಿವಸ ಜಾಸ್ತಿ ನೀರೇನೂ ನಿಲ್ಲಲು ಅವಕಾಶ ಮಾಡಿಲ್ಲ. ಆ ಹಳೆ ಕೆರೆಗಳ ಹಿಂದೆ ಇದ್ದ ಅಚ್ಚುಕಟ್ಟು ಪ್ರದೇಶದಲ್ಲಿ ಸರಿಯಾಗಿ ಸಾಗುವಳಿ ಆಗುತ್ತಿಲ್ಲ. ಕಾಲು ಭಾಗ ಜಮೀನುಗಳಿಗೆ ವರ್ಷಾಖೈರಿನಲ್ಲಿ ನೀರು ಸಾಲದೆ ಬಂದು ಅವುಗಳಲ್ಲೆಲ್ಲಾ ಪೀಕು ಸುಕಿ ಆಗುತ್ತಿದೆ; ಏನೋ ಅವರ ಪುಣ್ಯಕ್ಕೆ ಸರಿಯಾಗಿ ಅಪ್ಪಿತಪ್ಪಿ ಒಂದೆರಡು ಹದ ಮಳೆಯೇನಾದರೂ ಆಖೈರಿನಲ್ಲಿ ಬಿದ್ದರೆ ಆಗ ಬೆಳೆಗಳು ಸರಿಯಾಗಿ ಆಗುತ್ತವೆ. ಆದುದರಿಂದ ಕೆರೆ ತುಂಬಿದೆಯೆಂಬ ಆಧಾರದ ಮೇಲೆ ಈ ದಿವಸ ಎಲ್ಲ ಅಚ್ಚುಕಟ್ಟಿನಲ್ಲೂ ಪೂರ್ತಿ ಬೆಳೆಯನ್ನು ತೆಗೆಯುತ್ತೇವೆಂಬ ಭರವಸೆ ಯಾವ ಕೆರೆಯ ಕೆಳಗೂ ಇಲ್ಲ. ಹೀಗಿರುವಾಗ ನಾವು ಪ್ರಥಮ ಪಾಂಚವಾರ್ಷಿಕ ಯೋಜನೆಯಲ್ಲಿ ಕೆರೆಗಳ ರಿಪೇರಿ ಕಾರ್ಯ ನಡೆಸಿದ್ದೇವೆಂದು ಹೇಳುವುದಕ್ಕೂ ಒಂದು ಅರ್ಥವಿರಬೇಕು. ರಿಪೇರಿ ಮಾಡಿದನಂತರ ಆ ಕೆರೆಗಳಿಗೆ ಇಷ್ಟಿಷ್ಟು ಕ್ಯಪ್ಯಾಸಿಟಿ (capacity) ಯನ್ನು ಹೆಚ್ಚಿಸಿದ್ದೇವೆಂದು ಹೇಳಿದರೆ ಅದಕ್ಕೆ ಒಂದು ಅರ್ಥವಿದೆ. ಆದರೆ ಆ ರೀತಿ ಏನೂ ಈ ದಿವಸ ಕೆಲಸ ನಡೆದಿಲ್ಲ. ಈಗ ನಾವು ಮೇಜರ್ ಕೆರೆಗಳ ವಿಚಾರ ತೆಗೆದುಕೊಳ್ಳೋಣ. ಈ ಕೆರೆಗಳ ರೆಸ್ಟೋರೇಷನ್‌ಗಳ ವಿಚಾರದಲ್ಲಿ ಆ ಕೆರೆಗಳ ಅಂದಾಜು 10-15 ವರ್ಷಗಳಾದರೂ ಮಂಜೂರಾಗಿ ಬರುತ್ತಿಲ್ಲ. ತುಂಬ ನಿಧಾನವಾಗುತ್ತಿದೆ. ಕಾಂಗಾರಿಗಳ ಎಸ್ಟಿಮೇಟನ್ನು ತಯಾರಿಸಿದ್ದ ಕಾಲದಲ್ಲಿ ಇದ್ದ ರೇಟಿಗೂ, ಕಾಂಗಾರಿಯನ್ನು ಕೈಕೊಂಡ ಕಾಲದಲ್ಲಿದ್ದ ರೇಟಿಗೂ ವಿಶೇಷ ವ್ಯತ್ಯಾಸವಿದ್ದು ಈ ದಿವಸ ಆ ಕೆಲಸಗಳನ್ನು ನಡೆಸಬೇಕೆಂದರೆ ಅದು ಖಂಡಿತ ಸಾಧ್ಯವಾಗುವುದಿಲ್ಲ. ರೇಟುಗಳು ದಿನದಿನಕ್ಕೂ ಬದಲಾವಣೆ ಆಗುತ್ತಿರುತ್ತವೆ. ಅದಕ್ಕಾಗಿ ಆ ಅಂದಾಜುಗಳನ್ನು ಪುನಃ ಪರಿಶೀಲನೆಗಾಗಿ ಕಳುಹಿಸಿದರೆ ಆ ವೇಳೆಯಲ್ಲಿ ಈಗಿನ ರೇಟುಗಳ ಪ್ರಕಾರ ಈ ಕೆಲಸವನ್ನು ಕೈಗೊಳ್ಳಲು ಬಹಳ ಹಣ ಬೇಕಾಗುತ್ತದೆ; ಆದ್ದರಿಂದ ಈ ಕೆಲಸ ಸಾಧ್ಯವಲ್ಲ, ವರ್ಕಬಲ್ ಅಲ್ಲ ಎಂದು ಹೇಳಿ ಆ ಕೆಲಸವನ್ನೇ ಕೈಬಿಟ್ಟುಬಿಡುತ್ತಿದ್ದಾರೆ. ಸರ್ಕಾರಕ್ಕೆ ಈ ಕೆಲಸಗಳನ್ನು ಕೈಗೊಳ್ಳಲು ಎಷ್ಟು ಪರ್ಸೆಂಟ್ ಇವರಿಗೆ ಬರಬೇಕೋ ಅಷ್ಟು ಬಂದರೇನೇ ಕೆಲಸವನ್ನು ಕೈಗೊಳ್ಳಲಾಗುತ್ತದೆ, ಇಲ್ಲದಿದ್ದರೆ ಸಾಧ್ಯವಿಲ್ಲವೆಂದು ಹೇಳತಕ್ಕದ್ದು ಅನೇಕ ಸಂದರ್ಭಗಳಲ್ಲಿ ವ್ಯಕ್ತಪಟ್ಟಿರುತ್ತದೆ. ಈ ವಿಚಾರದಲ್ಲಿ ನಾವು ಎಷ್ಟೋ ವೇಳೆ ಈ ಸಭೆಯ ಮುಂದೆ ಈ ವಿಚಾರಗಳನ್ನೆಲ್ಲಾ ಹೇಳಿದ್ದೇವೆ. ಆದರೆ ಕೆಲಸಗಳೇನೂ ಉತ್ತಮಗೊಂಡಿಲ್ಲ.

ಹೀಗಾಗಿ ಪರಿಸ್ಥಿತಿ ಏನಾಗಿದೆ ಎಂದರೆ, ನಮ್ಮ ಕೆರೆಗಳ ಜೀರ್ಣೋದ್ಧಾರ ಮಾಡಬೇಕಾಗಿದ್ದರೆ, ಅದನ್ನು ಸರಿಯಾದ ಪರಿಸ್ಥಿತಿಯಲ್ಲಿ ತರಬೇಕಾಗಿದ್ದರೆ ಯಾವ ರೀತಿಯಾಗಿ ಸರ್ಕಾರದಲ್ಲಿ ಪ್ರಯೋಗ ಶಾಲೆಯನ್ನು ನಡೆಸಬೇಕು, ಯಾವ ರೀತಿ ಮಾಡಿದರೆ ಕೆರೆ ಜೀರ್ಣೋದ್ಧಾರವಾದೀತು ಎಂದು ಹೇಳಿ ಜನಗಳು ಅಲೆದಾಡುತ್ತಿರುವುದಾಗಿದೆ. ಯಾವುದಾದರೂ ಒಂದು ಕೆರೆಯ ಜೀರ್ಣೋದ್ಧಾರವಾಗಬೇಕಾಗಿದ್ದರೆ ಅದರ ಅಂದಾಜು ಮಂಜೂರಾಗಿ ಬರಲು ಅದರ ಹಿಂದೆಯೇ ತಿರುಗಬೇಕು. ಆ ಕಾಗದ ಎಲ್ಲಿ ಹೋಯಿತು, ಎಲ್ಲಿ ಇದೆ, ಏನು ಕ್ವೆರಿ ಹಾಕಿದ್ದಾರೆ, ಏನು ಸಮಾಧಾನ ಹೇಳಬೇಕು ಎಂದು ಹೇಳಿ ಆಸಕ್ತಿವುಳ್ಳವರು ಆ ಎಸ್ಟಿಮೇಟಿನ ಹಿಂದೆಯೇ ಪ್ರವೇಶ ಮಾಡಿದ್ದೇ ಆದರೆ ಆ ಎಸ್ಟಿಮೇಟು ಏನಾದರೂ ಒಂದು ರೂಪಕ್ಕೆ ಬರುತ್ತದೆಯೇ ಹೊರತು ಇಲ್ಲದೆ ಹೋದರೆ ಅದು ಅತ್ಯುತ್ತಮವಾದ ರಿಟರ್ನ್ಸ್ ಹೆಚ್ಚಿಗೆ ಬರತಕ್ಕ ಅಂದಾಜಾಗಿದ್ದರೂ ಕೂಡ ಒಂದು ನಿಗದಿ ಆದಂಥ ಕಾಲದಲ್ಲಿ ಮಂಜೂರಾಗಿ ಬರುತ್ತದೆ ಎಂದು ಇಲ್ಲವೇ ಇಲ್ಲ. ಇದು ಅನೂಚಾನವಾಗಿ ಬಂದಿರತಕ್ಕದ್ದು. ಇವತ್ತು ಹಾಗೆಯೇ ನಡೆದುಕೊಂಡು ಹೋಗುತ್ತ ಇದೆ. ಹೀಗಾಗಿ ಈ ಕೆರೆಗಳ ಜೀರ್ಣೋದ್ಧಾರ ಕಾರ್ಯ ಯಾವುದೋ ಕಾಲದಲ್ಲಿ ನಡೆದಂಥಾ ಕೆಲಸಗಳನ್ನು ಇವತ್ತು ನಮ್ಮ ಮುಂದೆ ಇಡುತ್ತಾ ಇದ್ದಾರೆಯೇ ಹೊರತು ಮೂರು ನಾಲ್ಕು ವರ್ಷಗಳಿಂದ ವ್ಯವಸ್ಥಿತವಾದ ಒಂದು ಪ್ಲಾನ್ ಹಾಕಿಕೊಂಡ ಇಷ್ಟೇ ವರ್ಷಗಳ ಕಾಲದಲ್ಲಿ ಇಂಥಿಂಥ ಕಾಲದಲ್ಲಿ ಇಂಥಿಂಥಾ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಇಷ್ಟಿಷ್ಟು ಮೈನರ್ ಕೆರೆಗಳು ಮತ್ತು ಮೇಜರ್ ಕೆರೆಗಳನ್ನು ರೆಸ್ಟೋರ್ ಮಾಡಿದ್ದೇವೆ ಎಂದು ಧೈರ್ಯವಾಗಿ ಹೇಳುವಷ್ಟು ಅಂಕಿ ಅಂಶ ಅವರಲ್ಲಿ ಈ ದಿನ ಇಲ್ಲ ಎಂದು ಹೇಳುತ್ತೇನೆ. ಮೇಜರ್ ಕೆರೆಗಳಲ್ಲಿ ಜಮೀನಿಗೆ ಸಾಕಾಗುವಷ್ಟು ಸಂಪೂರ್ಣವಾಗಿ ನೀರು ಇದ್ದು ಅವಕಾಶವಿದ್ದರೂ ಕೂಡ ಇವತ್ತಿನ ದಿವಸ ಏನಾಗಿದೆ ಎಂದರೆ ಅವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳತಕ್ಕ ಏರ್ಪಾಡು ಮಾಡದೇಯಿರುವುದರಿಂದ ಆ ನೀರು ಜಮೀನಿನ ಉಪಯೋಗಕ್ಕೆ ಬರುವುದರ ಬದಲು ಹಳ್ಳಗಳಿಗೆ ಹರಿದು ಹೊರಟು ಹೋಗಿ ನೀರು ಸಾಲುವುದಿಲ್ಲ ಎನ್ನತಕ್ಕ ಪರಿಸ್ಥಿತಿ ಬಂದಿದೆ. ಇದನ್ನು ನಾವು ಬಹಳ ವರ್ಷಗಳಿಂದಲೂ ಹೇಳುತ್ತಾ ಇದ್ದೇವೆ. ಮೇಜರ್ ಕೆರೆಗಳಲ್ಲಿರತಕ್ಕ ನೀರನ್ನು ಸದುಪಯೋಗಪಡಿಸಿಕೊಳ್ಳಲಿಕ್ಕೆ ಒಂದು ಏರ್ಪಾಡನ್ನು ಮಾಡಬೇಕು. ಕಾಲುವೆಗಳು, ಮಡಬಾಯಿಗಳಿಂದ ನೀರು ಹರಿದು ಹೋಗಿ ಹಳ್ಳಕ್ಕೆ ಬೀಳದಂತೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಬಹಳ ದಿವಸಗಳಿಂದ ಹೇಳುತ್ತಾ ಇದ್ದೇವೆ. ಆ ಕಡೆಗೆ ಗಮನ ಕೊಟ್ಟಿಲ್ಲ. ಯಾವ ಒಂದು ಮೇಜರ್ ಕೆರೆಯನ್ನು ನೋಡಿದರೂ ಕೂಡ ಅದಕ್ಕೆ ಸರಿಯಾದ ಒಂದು ಕಾಲುವೆ ಆಗಲಿ, ಮಡಬಾಯಿ ಆಗಲೀ ಇಲ್ಲ. ಪೂರ್ವದಲ್ಲಿ ಯಾರೋ ಮಹನೀಯರು ಕಟ್ಟಿಸಿದ ಕೆರೆ, ಆ ಕೆರೆಯ ನೀರನ್ನು ಆ ಕಾಲಕ್ಕೆ ಉಪಯೋಗಿಸಿಕೊಳ್ಳಲಿಕ್ಕೆ ತಕ್ಕ ಒಂದು ಕಾಲುವೆ, ಯಾವುದು ಮಾಡಲಾಗಿತ್ತೋ ಅದು ಇವತ್ತೂ ಉಪಯೋಗದಲ್ಲಿದೆ. ಅದೇ ರೀತಿ ವ್ಯವಸಾಯ ಮಾಡುತ್ತಾ ಇದ್ದೇವೆ. ಸರ್ಕಾರದವರು ಕಂದಾಯವನ್ನು ಮಾತ್ರ ಏರಿಸಿ ವಸೂಲು ಮಾಡಿಕೊಂಡು ಬರುತ್ತಾ ಇದ್ದಾರೆ. ಮೊನ್ನೆ ನಾಗವಲ್ಲಿ ಮೇಜರ್ ಕೆರೆಯನ್ನು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಬಂದು ನೋಡಿದರು. ನೋಡಿದಂಥಾ ಕಾಲದಲ್ಲಿ ಅಲ್ಲಿ ಹೇಗೆ ನೀರು ತೂಬಿನಿಂದ ಬಿಟ್ಟರೆ ಅದರ ಪಕ್ಕದಲ್ಲಿದ್ದ ಹಳ್ಳಕ್ಕೆ ಹೋಗುತ್ತ ಇತ್ತು ಎಂಬುದು ಅವರ ಗಮನಕ್ಕೆ ಬಂದಿದೆ. ಹೀಗೆ ಪ್ರತಿಯೊಂದು ಮೇಜರ್ ಕೆರೆಯ ಕೆಳಗೂ ಕೂಡ ನೀರು ಸಿಕ್ಕಿದ ಕಡೆಯಲ್ಲಿ ಹರಿದು ಹೋಗುತ್ತಾ ಇದೆ. ಹೊಸದಾಗಿ ಕಟ್ಟಿದಂಥಾ ಯಾವ ಕೆರೆಗಳು ಮತ್ತು ರಿಸರ್ವಾಯರುಗಳಿವೆಯೋ ಅವನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಯವರು ತಾವಾಗಿಯೇ ನೇರವಾಗಿ ತೆಗೆದುಕೊಂಡು ಅಡ್ಮಿನಿಸ್ಟರ್ ಮಾಡತಕ್ಕಂಥ, ಕೆಲವು ಕೆರೆಗಳನ್ನು ಬಿಟ್ಟರೆ ಬಾಕಿ ಎಲ್ಲಾ ಕೆರೆಗಳೂ ಕೂಡ ಇವತ್ತಿನ ದಿವಸ ಬಹಳ ದುರುಪಯೋಗವಾದ ಮತ್ತು ಅಷ್ಟೇ ನಿಷ್ಪ್ರಯೋಜಕವಾದ ಪರಿಸ್ಥಿತಿಯಲ್ಲಿ ಇವೆ. ಅದಕ್ಕೆ

ಸರ್ಕಾರದವರು ಎಲ್ಲಾ ಮೇಜರ್ ಕೆರೆಗಳನ್ನೂ ಎಂದರೆ 300 ಎಕರೆ ಅಂತಲಾದರೂ ಮಾಡಿ, 400 ಎಕರೆ ಅಂತಲಾದರೂ ಮಾಡಿ, ಯಾವುದಾದರೂ ಒಂದು ನಿರ್ದಿಷ್ಟಮಾಡಿ, 300 ಅಥವಾ 400 ಎಕರೆಗಳಿಗಿಂತ ಮೇಲ್ಪಟ್ಟ ಅಚ್ಚುಕಟ್ಟು ಇರುವ ಎಲ್ಲಾ ಕೆರೆಗಳನ್ನೂ ಮೇಜರ್ ಕೆರೆಗಳು ಎಂದು ಭಾವಿಸಿ ಆ ಮೇಜರ್ ಕೆರೆಗಳ ನೀರನ್ನು ಹಂಚಿಕೆ ಮಾಡುವುದು, ಕೆರೆಗಳನ್ನು ಮೇಂಟೇನ್ (maintain) ಮಾಡುವುದು ಇದೆಲ್ಲವನ್ನು ಕೂಡ ಪಬ್ಲಿಕ್‌ವರ್ಕ್ಸ್ ಇಲಾಖೆಯವರೇ ತೆಗೆದುಕೊಳ್ಳಬೇಕು. 2000 ಎಕರೆ ಜಮೀನು ಸಾಗುವಳಿ ಇದ್ದರೂ ಕೂಡ ಅದು ರೆವಿನ್ಯೂ ಅಡ್ಮಿನಿಸ್ಟ್ರೇಷನ್‌ನಲ್ಲಿ ಇದೆ ಎಂದು ಹೇಳುತ್ತಾರೆ. ಅವರು ಹತ್ತಾರು ವರ್ಷಗಳಾದರೂ ಕೂಡ ಅದು ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಕಣ್ಣಿನಿಂದ ನೋಡಿರುವುದಿಲ್ಲ. ಹೀಗಿರುವಾಗ ರೆವಿನ್ಯೂ ಅಡ್ಮಿನಿಸ್ಟ್ರೇಷನ್‌ನಲ್ಲಿದೆ ಎಂದು ಹೇಳುವುದು ಏಕೆ? ಅದನ್ನು ಮೇಂಟೇನ್ ಮಾಡುವುದು ರೈತರಿಗೆ ಸೇರಿದ್ದು. ಅದನ್ನು ಮೇಂಟೇನ್ ಮಾಡಿಸತಕ್ಕ ಜವಾಬ್ದಾರಿ ರೆವಿನ್ಯೂನವರಿಗೆ ಸೇರಿದ್ದು ಎಂದು ಹೇಳಿ ಪಿ.ಡಬ್ಲ್ಯೂ.ಡಿ. ನವರು ಹೇಳಿಕೊಂಡು ಬರುತ್ತಾ ಇದ್ದಾರೆ. ಇದನ್ನು ಹೀಗೆಯೇ ಏನಾದರೂ ಮುಂದು ವರೆಸಿಕೊಂಡು ಬರುವುದಾದರೆ ನೂರಾರು ವರ್ಷಗಳ ಕೆಳಗೆ ನಮ್ಮ ಪೂರ್ವಿಕರು ಕಟ್ಟಿಸಿದ ಕೆರೆಗಳು ಯಾವುವು ಇವೆಯೋ ಅವುಗಳಲ್ಲಿ ಶೇಕಡ 50 ರಷ್ಟು ಕೆರೆಗಳಾದರೂ ನಿಷ್ಪ್ರಯೋಜಕವಾಗುವುದರಲ್ಲಿ ಯಾವ ಅನುಮಾನವೂ ಇಲ್ಲ. ಈ ಹಿಂದೆ ಪೂರ್ವಿಕರು ಕಟ್ಟಿಸಿರತಕ್ಕ ಕೆರೆಗಳನ್ನು ಜೀರ್ಣೋದ್ಧಾರ ಮಾಡುವ ಕೆಲಸ ಇವರ ಕೈಯಿಂದ ಆಗಿಲ್ಲ. 1,000 ರೂಪಾಯಿ, 2,000 ರೂಪಾಯಿಗಳ ಕೆಲಸ ಆಗಬೇಕಾಗಿದ್ದರೆ ಅದರಲ್ಲಿ ಬಹುಭಾಗ ಪಿಕ್‌ಅಪ್ ಹಾಕುವುದು, ಕಾಲುವೆ ಮಾಡಬೇಕು ಎಂದು ಏನಾದರೂ ಕೇಳಿದರೆ ಕೂಡಲೆ ನಿಮ್ಮ ಕಾಂಟ್ರಿಬ್ಯೂಷನ್ ಏನು ಎಂದು ಕೇಳುತ್ತಾರೆ. ಪ್ರತಿಯೊಂದು ಐಟಂಗೂ ಕೂಡ ಮೊದಲನೆ ರಾಗವಾಗಿ ನಿಮ್ಮ ಕಾಂಟ್ರಿಬ್ಯೂಷನ್ ಏನು, ನಿಮ್ಮ ಭಾಗದ ಹಣ ಎಷ್ಟು ಕೊಡುತ್ತೀರಿ ಎಂದು ಕೇಳುವುದು ಪದ್ಧತಿಯಾಗಿಬಿಟ್ಟಿದೆ. ಈ ರಾಗ ತಪ್ಪಬೇಕು, 8 ಆಣೆ ಅಥವಾ 1 ರೂಪಾಯಿ ಏಕರೇಜ್ ಮೇಲೆ ಒಂದು ಸೆಸ್ ಆದರೂ ಹಾಕಿ ಎಲ್ಲಾ ಮೇಜರ್ ಕೆರೆಗಳನ್ನೂ ಕಡ್ಡಾಯವಾಗಿ ತಮ್ಮ ಸ್ವಾಧೀನಕ್ಕೇ ತೆಗೆದುಕೊಳ್ಳಬೇಕು. ಸುಮ್ಮನೆ ಸ್ವಾಧೀನಕ್ಕೆ ತೆಗೆದುಕೊಂಡರೆ ಸಾಲದು. ಈಗ ನಮ್ಮ ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ ನೋಡಿ, ಕುಣಿಗಲ್ ಕೆರೆ ಬಹಳ ದೊಡ್ಡಕೆರೆ 14 ಚದರ ಮೈಲಿ ಇದೆ. ಇದರ ಹಿಂದೆ ವ್ಯವಸಾಯ ಮಾಡತಕ್ಕವರಿಗೇ ಅದರ ಕಷ್ಟ ಗೊತ್ತು. ಪಿ.ಡಬ್ಲ್ಯೂ. ಡಿ. ಅವರು ಅದನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಎರಡು ಮೂರು ವರ್ಷಗಳಾಗಿವೆ. ಏನಾದರೂ ಅಭಿವೃದ್ಧಿ ಮಾಡಿದ್ದಾರೆಯೇ ಎಂದರೆ $1\frac{1}{2}$ ಲಕ್ಷ ರೂಪಾಯಿಗಳ ಕಾಲುವೆ ಕೆಲಸ ಮಾಡಿದರು. $1\frac{1}{2}$ ಲಕ್ಷ ರೂಪಾಯಿಗಳ ಕೆಲಸ ಏನು ಮಾಡಿದರು ಎಂಬುದನ್ನು trace out ಮಾಡುವುದಕ್ಕೆ ಆಗಿಲ್ಲ. ಮತ್ತು ಮುಂದೆಯೂ ಕೂಡ ಅದನ್ನು ಇಂಪ್ರೂವ್ ಮಾಡುವುದಕ್ಕೆ ಯಾವಾವ ಏರ್ಪಾಡನ್ನು ಮಾಡಬೇಕು ಎನ್ನುವುದಕ್ಕೆ ಅವರು ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಆದ್ದರಿಂದ ಪಿ.ಡಬ್ಲ್ಯೂ.ಡಿ. ಯವರ ಜವಾಬ್ದಾರಿ ಗೊತ್ತಾಗಿರಬೇಕು. ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಕೆಲಸ ಆಗಬೇಕಾಗಿದ್ದರೆ ಸರ್ಕಾರದ ನೀತಿಗಿಂತಲೂ ಮತ್ತು ಇಲಾಖೆಯ ಒಂದು ದಕ್ಷತೆಗಿಂತಲೂ ಕೂಡ ಅಲ್ಲಿ ಕೆಲಸ ಮಾಡತಕ್ಕ ಮನುಷ್ಯರ ದಕ್ಷತೆಯ ಮೇಲೆ ಹೆಚ್ಚಿನ ಒಂದು ಕಾರ್ಯ ಆಗುತ್ತದೆ. ಇವತ್ತಿನ ದಿವಸ ಪಿ.ಡಬ್ಲ್ಯೂ.ಡಿ. ನಲ್ಲಿರತಕ್ಕ ಮನುಷ್ಯನಿಗೆ ದಕ್ಷನಾಗಿ ಕೆಲಸ ಮಾಡಬೇಕೆಂಬ ಮನೋಭಾವ ಯಾವನು ಪಡೆದಿರುತ್ತಾನೆಯೋ ಆ ಮನುಷ್ಯನಿರತಕ್ಕ ಕ್ಷೇತ್ರದಲ್ಲಿ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುತ್ತವೆಯೇ ಹೊರತು ಸರ್ಕಾರ ಎಷ್ಟೇ ದಕ್ಷತೆಯಿಂದ ಏರ್ಪಾಡು ಮಾಡಿದರೂ ಕೂಡ ಆ ಇಲಾಖೆಯಲ್ಲಿ ಏನು ಕೆಲಸಗಳೂ ಆಗುವುದಿಲ್ಲ. ಒಂದು ವರ್ಷದಿಂದ ನೋಡುತ್ತಾ ಇದ್ದೇನೆ. ನನ್ನ ಕಾನ್ಸ್ಟಿಟ್ಯೂಯನ್ಸಿನಲ್ಲಿ ನನ್ನ ಪ್ರಯತ್ನಗಳನ್ನೆಲ್ಲಾ, ಸಾಹಸಗಳನ್ನೆಲ್ಲಾ ಮಾಡಿದರೂ ಕೂಡ ಸಾಮಾನ್ಯವಾಗಿ ಮಾಡಿಸಬೇಕಾದ ಕೆಲಸಗಳನ್ನೂ ಸಹ ಮಾಡಿಸುವುದಕ್ಕೆ ಸಾಧ್ಯವಾಗಿಲ್ಲ. ನನ್ನ ಪ್ರಾರ್ಥನೆ ಇಷ್ಟೆ. ನೀರನ್ನು ಸದುಪಯೋಗಪಡಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತಕ್ಷಣ ತೆಗೆದುಕೊಂಡು ಎಷ್ಟು ಹಣ ಖರ್ಚಾಗಬೇಕೋ ಅಷ್ಟು ಹಣ ಖರ್ಚುಮಾಡತಕ್ಕ ವ್ಯವಸ್ಥೆ ಮಾಡುವುದಕ್ಕಿಂತಲೂ ದೇಶಕ್ಕೆ ಹೆಚ್ಚು ಉಪಯೋಗವಾದಂಥ ಕೆಲಸ ಇನ್ನೊಂದಿಲ್ಲ.

ಅಂಥಾದ್ದಕ್ಕೆ ಹೆಚ್ಚಿನ ನಿಗಾ ಕೊಟ್ಟು, ವಿಶೇಷ ಕಾರ್ಯಕ್ರಮವನ್ನು ಹಾಕಿಕೊಂಡು ಕೆರೆಗಳಲ್ಲಿರುವ ನೀರು ಪೋಲಾಗದಿರುವಂತೆ ಮಾಡಿದರೆ ಇವೊತ್ತಿನ ದಿವಸ ನೂರಾರು ಕೆರೆಗಳನ್ನು ಕಟ್ಟಿದಂಥ ಕೀರ್ತಿಗೆ ಭಾಗಿಗಳಾಗುತ್ತೀರಿ. ಜನರಿಗೆ ಎಷ್ಟೋ ಸೌಲಭ್ಯವನ್ನುಂಟು ಮಾಡಿದಂತಾಗುತ್ತದೆ. ಆದ್ದರಿಂದ ಇರತಕ್ಕ ಕೆರೆಗಳನ್ನು ಉಪಯೋಗಕ್ಕೆ ತರುವುದನ್ನು ಬಿಟ್ಟು ಹೊಸಕೆರೆಗಳನ್ನು ಕಟ್ಟಲು ಹೊರಡುವುದು ಪ್ರಯೋಜನವಿಲ್ಲ. ಅಂದ ಮಾತ್ರಕ್ಕೇ ಕಟ್ಟಬಾರದೆಂದು ನನ್ನ ಅಭಿಪ್ರಾಯವಲ್ಲ. ಇರತಕ್ಕದ್ದನ್ನು ಕೈಬಿಟ್ಟು ಹೊಸದನ್ನು ಕಟ್ಟಲು ಹೊರಡುವುದು ವಿವೇಚನೆಯಲ್ಲ. ಆದ್ದರಿಂದ ಹೊಸದಾಗಿ ಇಂಥಿಂಥ ಕೆರೆಗಳನ್ನು ಕಟ್ಟಿದ್ದೇವೆಂದು ಹೆಮ್ಮೆಪಡುವುದರ ಜೊತೆಗೆ ಇರತಕ್ಕದ್ದನ್ನು ಸರಿಯಾದ ಸ್ಥಿತಿಯಲ್ಲಿರಿಸಿಕೊಳ್ಳುವಂಥ ಮಾರ್ಗವನ್ನು ಹಿಡಿಯಬೇಕೆಂದು ನಾನು ಸೂಚಿಸುತ್ತೇನೆ.

ಮೈನರ್ ಕೆರೆಗಳ ಪರಿಸ್ಥಿತಿ ಇವೊತ್ತಿಗೆ ಏನಾಗಿದೆ? ಪೂರ್ವದಲ್ಲಿ ಮಣ್ಣುಕಾಂಗಾರಿಗಳನ್ನು ರೈತರುಮಾಡುವ ಪದ್ಧತಿಯಿತ್ತು. ಈಗ ಅವರಿಗಿರತಕ್ಕ ಕೆಲಸಗಳ ಜೊತೆಗೆ ಅನೇಕ ರೀತಿಯ ಕೆಲಸಗಳು ಬಿದ್ದು ಮಣ್ಣು ಕಾಂಗಾರಿಯ ಕೆಲಸವೆಲ್ಲಾ ನಿಂತು ಹೋಗಿದೆ. ಆದ್ದರಿಂದ ಮೈನರ್ ಕೆರೆಗಳನ್ನು ಜೀರ್ಣೋದ್ಧಾರಮಾಡುವ ಕೆಲಸವನ್ನು ಅವಶ್ಯಕವಾಗಿ ಕೈಕೊಳ್ಳಬೇಕು. ರೈತರ ಸುಖ ಬಾಳ್ವೆಗೆ ಇದೊಂದು ವಿಶೇಷ ಕಾರ್ಯಕ್ರಮ ಹಾಕಿಕೊಳ್ಳಬೇಕಾದ್ದು ಅತ್ಯಗತ್ಯ. ಇಂಥ ಕೆಲಸವನ್ನು ಈಗ ಅಮಲ್ದಾರರಿಗೆ ವಹಿಸಿದ್ದಾರೆ. ಯಾವ ಅಮಲ್ದಾರರೇ ಆಗಲಿ ಸಬ್-ಡಿವಿಜನ್ ಆಫೀಸರು ಡೆಪ್ಯುಟಿ ಕಮಿಷನರೇ ಆಗಲಿ ಇಂಥ ಕೆರೆಗಳನ್ನು ಜೀರ್ಣೋದ್ಧಾರ ಮಾಡಿಸಬೇಕೆಂದು ಕಾರ್ಯಕ್ರಮ ಹಾಕಿಕೊಂಡಿರುವುದನ್ನು ತೋರಿಸಬಲ್ಲಿರಾ? ಅಧಿಕಾರಿಗಳು ಯಾವ ಕೆರೆಯನ್ನು ಜೀರ್ಣೋದ್ಧಾರ ಮಾಡುತ್ತೇವೆಂದು ಹೋದರೂ ಜನರು ನಿಜವಾಗಿ ಸಹಾಯ ಮಾಡುತ್ತಾರೆ. ಮುಖ್ಯವಾಗಿ ಮುಖಂಡತ್ವಬೇಕೇ ಹೊರತು ಜನಗಳು ಸಹಕಾರ ಕೊಡುವುದಿಲ್ಲವೆಂದು ಹೇಳುವುದಿಲ್ಲ. ರೈತರಲ್ಲಿ ತಾವಾಗಿಯೇ ಹೋಗಿ ಕೆಲಸಮಾಡುವ ಮನೋಭಾವ ಬೆಳೆಯದೇ ಇದ್ದ ಮಾತ್ರಕ್ಕೇ ಅವರು ಅಧಿಕಾರಿಗಳೊಡನೆ ಸಹಕರಿಸುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ವಾಸ್ತವವಾಗಿ ರೆವಿನ್ಯೂ ಅಧಿಕಾರಿಗಳು ದೇಶವನ್ನು ಕಟ್ಟತಕ್ಕ ಕೆಲಸದಲ್ಲಿ ಅಷ್ಟು ನಿರತರಾಗಿಲ್ಲ. ಅವರುಗಳು ಬಹುಮಟ್ಟಿಗೆ ನಾವು ಈ ಮೊದಲೇ ಚರ್ಚೆಮಾಡಿ

(ಶ್ರೀ ಟಿ. ಎನ್. ಮುಡಲಗಿರಿಗೌಡ)

ದಂಥ ಸಂಸ್ಕೃತಿ ಪ್ರಚಾರ, ಸಂಗೀತ ಕಛೇರಿ—ಇಂಥ ಕೆಲಸಗಳಲ್ಲಿ ಕಾಲವನ್ನು ವ್ಯಯಮಾಡಿಕೊಂಡು ಬರುತ್ತಿದ್ದಾರೆ. ಕ್ಷಾಮ ಕಾಲದಲ್ಲಾದರೋ ಆಹಾರದ ಅಭಾವವಿತ್ತು; ಆಗ್ಗೆ ದವಸವನ್ನು ವಸೂಲು ಮಾಡಲು ವಿಶೇಷವಾಗಿ ಕೆಲಸ ಮಾಡುತ್ತಿದ್ದರು. ಆ ಚಟುವಟಿಕೆಗಳೆಲ್ಲವೂ ಈಗ ನಿಂತು ಹೋಗಿವೆ. ಅವರಿಗೇನೂ ಕೆಲಸವಿಲ್ಲದೆ ಸಂಗೀತ ಕಛೇರಿಗಳಲ್ಲಿ ಕುಳಿತು ಕೇಳುವ ಪರಿಸ್ಥಿತಿ ಬಂದಿದೆ. ಕಂದಾಯದ ವಸೂಲಿ ಎಂದಿನಂತೆ ಆಗುತ್ತದೆ. ಆದ್ದರಿಂದ ಮೈನರ್ ಕೆರೆಗಳನ್ನು ಜೀರ್ಣೋದ್ಧಾರ ಮಾಡುವ ಕೆಲಸವನ್ನು ರೆವಿನ್ಯೂ ಮತ್ತು ಪಿ.ಡಬ್ಲ್ಯೂ.ಡಿ. ಇಲಾಖೆಯವರು ಶೀಘ್ರವಾಗಿ ಕೈಕೊಳ್ಳಬೇಕಾದದ್ದು ಅವಶ್ಯಕವಾಗಿದೆ. ಈಗಂತೂ ಅವರಲ್ಲಿ ಒಂದು ಪ್ಲಾನ್ ಇಲ್ಲ. ಯಾವುದಾದರೂ ಯೋಜನೆಯನ್ನಿಟ್ಟುಕೊಂಡು ಇನ್ನು ಎರಡು-ಮೂರು ವರ್ಷಗಳಲ್ಲಿ ಈ ಕೆಲಸವನ್ನು ಮಾಡುವ ಯೋಚನೆಮಾಡಿದರೆ ನಿಜವಾಗಿ ಸಾಧ್ಯವಾಗುತ್ತದೆ.

ಇನ್ನು ಕಟ್ಟಡಗಳ ವಿಚಾರ ಹೇಳುವುದಾದರೆ, ಈಗ ಸಾಮಾನ್ಯವಾಗಿ ಕಟ್ಟಡಗಳನ್ನು ಕಾಂಟ್ರಾಕ್ಟ್ ಕೊಡುತ್ತಿದ್ದಾರೆ. ಇದರ ವೈಖರಿಯನ್ನು ಹೇಳುವುದಕ್ಕಾಗುವುದಿಲ್ಲ. ನಮ್ಮ ಊರಿನ ಹತ್ತಿರ ಒಂದು ಕಟ್ಟಡವನ್ನು ಕಾಂಟ್ರಾಕ್ಟ್ ಕೊಟ್ಟರು. 12 ವರ್ಷಗಳ ಕೆಳಗೆ ಇದನ್ನು ಕಾಂಟ್ರಾಕ್ಟ್ ಕೊಟ್ಟಿದ್ದು, ಅವೊತ್ತಿನ ದಿವಸ ಇದ್ದ ದರವೇನು, ಇವೊತ್ತಿನ ದಿವಸದ ದರವೇನು? 12,000 ರೂಪಾಯಿಗಳಿಗೆ ಕೊಟ್ಟಿದ್ದ ಕಂಟ್ರಾಕ್ಟ್ ಇಂದು 28,000ಕ್ಕೆ ಏರಿದೆ. ಪಿ.ಡಬ್ಲ್ಯೂ.ಡಿ.ಯವರನ್ನು ಕೇಳಿದರೆ, "ನಾವೇನು ಮಾಡೋಣ; ರೂಲ್ಸ್ ಹಾಗಿವೆ." ಎನ್ನುತ್ತಾರೆ. ಹೀಗಾಗಿ ಈ ಡಿಪಾರ್ಟ್‌ಮೆಂಟಿನ ಕೆಲಸಕಾರ್ಯಗಳು ಎಲ್ಲರಿಗೂ ಅಸಮರ್ಪಕವಾಗಿ ಕಾಣಬರುತ್ತಿವೆ. ದೇಶವನ್ನು ಕಟ್ಟತಕ್ಕಂಥ ಈ ಇಲಾಖೆಯ ಮಟ್ಟಿಗೆ ವಿಶೇಷವಾದ ಆಸಕ್ತಿ ಮತ್ತು ದಕ್ಷತೆ ಕಂಡು ಬರಬೇಕು. ಯಾರು ದೇಶಾಭಿಮಾನದಿಂದ ಕೆಲಸ ಮಾಡುವುದಿಲ್ಲ ಅಂಥವರಿಗೆ ಜವಾಬ್ದಾರಿಯುತವಾದ ಕೆಲಸಗಳನ್ನು ಕೊಡಬೇಡಿ. ಈಗಂತೂ ಕೆಲಸಮಾಡಲಿ, ಮಾಡದಿರಲಿ incrementಗಳು ಬರುತ್ತಿರುತ್ತವೆ. ಅದರಲ್ಲೂ ಮಾಡದಿರುವವನಿಗೇ ಹೆಚ್ಚಿನ increment ಬರುತ್ತಿರುತ್ತದೆ. ಹೀಗಾಗಬಾರದು. ಆದ್ದರಿಂದ ಒಂದು ಯೋಜನಾಬದ್ಧವಾದ ರೀತಿಯಲ್ಲಿ ಕಾರ್ಯಪಟ್ಟಿಯಂತೆ ಕೆಲಸ ನಡೆಸಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ನೀರಾವರಿ ಬಾಬಿನ ವಿಚಾರವಾಗಿ ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ಸರ್ಕಾರದವರು ಅನೇಕ ವರ್ಷಗಳ ಹಿಂದಿನಿಂದಲೂ ನಮ್ಮ ಪ್ರಾಂತ್ಯಕ್ಕಾಗಿ ಕೃಷ್ಣರಾಜ ಸಾಗರವನ್ನು ಕಟ್ಟಿ ಜನರಿಗೆ ತುಂಬ ಅನುಕೂಲ ಮಾಡುತ್ತಾ ಬಂದಿದ್ದಾರೆ. ಇದಕ್ಕಾಗಿ ಆ ಪ್ರಾಂತ್ಯದ ಜನರ ಪರವಾಗಿ ಕೃತಜ್ಞತೆಯನ್ನು ನಾನು ಎಷ್ಟೋ ಸಾರಿ ಸಲ್ಲಿಸಿದ್ದೇನೆ.

ಆದರೆ, ಒಂದು ವಿಷಯವನ್ನು ನಾನು ಬಿನ್ನವಿಸಿಕೊಳ್ಳಬೇಕೆಂದಿದ್ದೇನೆ. ಶಿಂಷಾನದಿಯ ಪೂರ್ವ ಭಾಗದಲ್ಲಿರುವ ಮಂಡ್ಯ, ಮದ್ದೂರು ಪ್ರದೇಶದ ಕೆಲವು ಹೋಬಳಿಗಳಿಗೆ ವಿಶ್ವೇಶ್ವರಯ್ಯ ನಾಲಾ ಅನುಕೂಲತೆಯಿಲ್ಲ. ಬೆಂಗಾಡಾದ ಪ್ರದೇಶ ಅದು. ಅಲ್ಲಿ ಸಣ್ಣ ಸಣ್ಣ ಕೆರೆಗಳು ಕೆಲವಿವೆ. ಮೊದಲು ಮದ್ದೂರು ಕೆರೆಗೆ ನೀರು ಒದಗಿಸುವುದಕ್ಕಾಗಿ ತಗ್ಗಹಳ್ಳಿಯ ಹತ್ತಿರ ಒಂದು ಅಣೆಕಟ್ಟು ಕಟ್ಟಿ ನೀರೊದಗಿಸುವ ಏರ್ಪಾಡು ಮಾಡಿದರು. ಈಚೆಗೆ ವಿಶ್ವೇಶ್ವರಯ್ಯ ನಾಲಾ ಬಂದ ಮೇಲೆ ಅದರಿಂದ ಮದ್ದೂರು ಕೆರೆಗೆ ಸೋರು ನೀರು ಬರುತ್ತಿದೆಂದು ಹೇಳಿ ಆ ಅಣೆಕಟ್ಟಿಗೆ ಇನ್ನೊಂದು left bank channel ಎಂಬುದನ್ನು ಏರ್ಪಡಿಸಿ ಶಿಂಷಾನದಿಯ ಪೂರ್ವಭಾಗದ ಕೆಲವು ಕೆರೆಗಳಿಗೆ ನೀರು ಒದಗಿಸುತ್ತಿದ್ದಾರೆ. ಆದರೆ ಈ ನಾಲೆಯಿಂದ ಭೀಮನಕೆರೆ, ಹಳ್ಳಿಕೆರೆ, ಕಬ್ಬಾಳೆ ಇತ್ಯಾದಿ ಗ್ರಾಮಗಳ ಕೆರೆಗಳಿಗೆ ನೀರು ಹೋಗುವುದಿಲ್ಲ. ಹೀಗಾಗಿ ಈ ಭಾಗದಲ್ಲಿ 20-30 ಹಳ್ಳಿಗಳ ಜನರು ಕುಗ್ಗಿ ಹೋಗಿದ್ದಾರೆ. ಅಲ್ಲಿನ ಜನರಿಗೆ ಮಳೆಬಿದ್ದರೆ ಪೈರುಂಟು ಇಲ್ಲದಿದ್ದರೆ ಇಲ್ಲ. ಈ ಕಷ್ಟವನ್ನು 5-6 ವರ್ಷಗಳಿಂದ ವಿವರಿಸಿ ಆ ಗ್ರಾಮಗಳ ಕೆರೆಗಳನ್ನು ದುರಸ್ತುಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದರೂ ಇದುವರೆಗೂ ಸರ್ಕಾರ

10 A.M.

ಮನಸ್ಸು ಮಾಡಿಲ್ಲ. ನನ್ನ ಪ್ರಾರ್ಥನೆಯನ್ನು ಮನ್ನಣೆ ಮಾಡಿ ಕೆಲವು ಕೆರೆಗಳಿಗೆ ಸರ್ವೆ ಅಂದಾಜನ್ನು ಸಹ ಮಾಡಿಸಿದ್ದಾರೆ. ಕೆಲಸ ತೆಗೆದುಕೊಳ್ಳಬೇಕಾದರೆ ಹಾಕುವ ಬಂಡವಾಳದಮೇಲೆ ಶೇಕಡ 3-4ರಂತೆ ಲಾಭ ಬರಬೇಕು ಎಂಬ ನೀತಿ ಇರುವುದರಿಂದ ಈ ಕಾರ್ಯಗಳು remunerative ಅಲ್ಲ, ಅಂದರೆ, ಫಲದಾಯಕವಾಗಿಲ್ಲ, ಪ್ರಯೋಜನವಿಲ್ಲ ಎನ್ನುವ ಕಾರಣದಿಂದ ಅಂದಾಜನ್ನು ಇನ್ನೂ ಕಡಮೆಮಾಡುವುದಕ್ಕೆ ಸಾಧ್ಯವಿದೆಯೇ ನೋಡಿ ಎಂದು ಹಿಂದಕ್ಕೂ ಮುಂದಕ್ಕೂ ಐದಾರು ಸಲ ಎಳೆದಾಡುತ್ತಾ ಆ ಕಾರ್ಯವನ್ನು ಕೈಗೊಂಡಿಲ್ಲ. ನನ್ನ ಅಭಿಪ್ರಾಯದಲ್ಲಿ ಸ್ಪೆಷಲ್ ಆಗಿ ಕೆಲವು ಕಡೆಗಳಲ್ಲಿ ಹಾಕುವ ಹಣಕ್ಕೆ ಸಾಕಷ್ಟು ಬಡ್ಡಿ ಬಾರದಿದ್ದರೂ ಸ್ಪೆಷಲ್ ಆಗಿ ಕಾರ್ಯಗಳನ್ನು ಮಾಡಬೇಕು. ಇದರಿಂದ ಕೇವಲ ಬಡ್ಡಿ ಉತ್ಪತ್ತಿಯಾಗುವ ದೃಷ್ಟಿಗೆ ಗಮನ ಕೊಡದೆ, ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎನ್ನುವ ಉದಾರ ದೃಷ್ಟಿಯಿಂದ ಆ ಕಾರ್ಯವನ್ನು ಕೈಗೊಳ್ಳಬೇಕಾಗಿದೆ. ಭೀಮನಕೆರೆ ಮತ್ತು ಹಳ್ಳಿಕೆರೆ ಗ್ರಾಮದ ಕೆರೆಗಳಿಗೆ ಈ ರೀತಿ ಅಂದಾಜು ತಯಾರಾಗಿ 3-4 ವರ್ಷಗಳಾದುವು. ಭೀಮನಕೆರೆ ಗ್ರಾಮದ ಕೆರೆಗಳಿಗೆ ಮೊದಲು 60 ಸಾವಿರ ರೂಪಾಯಿಗಳ ಅಂದಾಜು ಮಾಡಿದರು. ಮತ್ತೆ 1 ಲಕ್ಷಕ್ಕೆ ಕಡಮೆ ಆಗುವುದಿಲ್ಲ ಎಂದು ಹೇಳಿದರು, ಆಮೇಲೆ 80 ಸಾವಿರ ಮತ್ತು 60 ಸಾವಿರ ರೂಪಾಯಿಗಳ ಅಂದಾಜನ್ನು ಒಂದು ಲಕ್ಷಕ್ಕೆ ಏರಿಸಿದರೆ, ಜನಗಳು ಕಷ್ಟಕ್ಕೆ ಗುರಿಯಾಗುತ್ತಾರೆ. ಆ ಕೆರೆಗಳಿಗೆ ನೀರಿನ ಆಸರೆ ಚೆನ್ನಾಗಿದೆ. ಒಂದು ಸಣ್ಣ ಮಳೆ ಬಂದರೆ ಸಾಕು, ಕೆರೆಗಳು ತುಂಬುತ್ತವೆ. Catchment area ಚೆನ್ನಾಗಿದೆ. 3-4 ಕೆರೆಗಳಿಗೆ 1½ ಲಕ್ಷ ರೂಪಾಯಿ ಬೇಕಾಗುವುದಿಲ್ಲ. ಇಷ್ಟು ಹಣವನ್ನು ಧಾರಾಳವಾಗಿ ಖರ್ಚುಮಾಡಲು ಹಿಂದುಮುಂದು ನೋಡಬಾರದು. ಎರಡು ಲಕ್ಷ ರೂಪಾಯಿಗಳನ್ನು ಕೊಡಿ, ಬಂಡಿಪುರದ ಕಾಡಿನಲ್ಲಿ ಮನೆ ಕಟ್ಟುತ್ತೇವೆ, ಫೋನ್ ಹಾಕುತ್ತೇವೆ, ವಿದ್ಯುಚ್ಛಕ್ತಿ ದೀಪ ಹಾಕುತ್ತೇವೆ ಎಂದು ಕೇಳುತ್ತೀರಿ. Wild life preserve ಮಾಡಬೇಕು ಎಂಬ ಉದ್ದೇಶದಿಂದ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಸರ್ಕಾರದವರು ಮುಂದೆ ಬಂದಿದ್ದಾರೆ. ನಾನು ಒಂದೊಂದು ಲಕ್ಷ ರೂಪಾಯಿಗಳ ಖರ್ಚು ಮಾತ್ರದಿಂದಲೇ ಹತ್ತಾರು ಗ್ರಾಮಗಳ ಜನಗಳಿಗೆ ಅನುಕೂಲವಾಗುತ್ತದೆ ಎಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಂಡರೆ, ನಾನು ಒಬ್ಬ ಸದಸ್ಯನಾಗಿ ವಿನಯದಿಂದ ಕೇಳಿಕೊಂಡರೆ, ಆ ಕಾರ್ಯವನ್ನು ಮಾಡದೆ ಇದ್ದರೆ, "ಈ ಸರ್ಕಾರ ಬೇಡ, ಬೇರೆ ಸರ್ಕಾರ ಬರಲಿ" ಎಂದು ಹೇಳುವ ಸ್ಥಿತಿಗೆ

ಬಂದಿದ್ದೇವೆ. ಆದ್ದರಿಂದ ಅದರಿಂದ ಲಾಭವೋ ನಷ್ಟವೋ, ಒಂದನ್ನೂ ಯೋಚಿಸದೆ ಆ 3-4 ಕೆರೆಗಳ ಕಾಮಗಾರಿಗಳನ್ನು ಜಾಗ್ರತೆ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

Mr. SPEAKER.—Now the House will rise and meet at Thirty-five minutes past Ten of the Clock.

The House rose for Lunch at Five minutes past Ten of the Clock and reassembled at Thirty-Five Minutes past Ten of the Clock.

[MR. SPEAKER in the Chair.]

Mr. SPEAKER.—All the four demands Nos. 8,37,39-A and 40 are being discussed together. I will put all the demands at the end to vote.

*ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಸ್ವಾಮಿ, ನಮ್ಮ ಸರ್ಕಾರದವರು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಮೈಸೂರು ಸಂಸ್ಥಾನದಲ್ಲಿ ಅನೇಕ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕೆಂಬ ಉದ್ದೇಶದಿಂದ ಈ ಯೋಜನೆಯನ್ನು ತಯಾರು ಮಾಡಿದ್ದಾರೆ. ಈ ಯೋಜನೆಯ ಪ್ರಕಾರ ಅನೇಕ ಬಹಳ ಪ್ರಾಮುಖ್ಯವಾದಂಥ ನೀರಾವರಿ ಯೋಜನೆಗಳನ್ನು ಅದರಲ್ಲಿ ಸೇರಿಸಿಕೊಂಡಿದ್ದಾರೆ. ಬಹು ಮುಖ್ಯವಾದುವು ಎಂದು ಹೇಳುವ ಯೋಜನೆಗಳಲ್ಲಿ ನಮ್ಮ ಹಾಸನ ಜಿಲ್ಲೆಗೆ ಮತ್ತು ಮಂಡ್ಯ ಜಿಲ್ಲೆಯ ಕೆಲವು ಪ್ರದೇಶಗಳಿಗೆ ಉಪಯೋಗವಾಗತಕ್ಕ ಹೇಮಾವತಿ ನದಿಗೆ ಅಡ್ಡಲಾಗಿ ಗೊರೂರು ಬಳಿ ಅಣೆಕಟ್ಟನ್ನು ಕಟ್ಟಿ ರಿಜರ್ವಾಯರ್ ಮಾಡಿ ಅಲ್ಲಿಂದ ಪ್ರಾಂತಗಳಿಗೆ ನೀರನ್ನು ಒದಗಿಸಬೇಕು ಎನ್ನುವ ಯೋಜನೆ ಸರ್ಕಾರದ ಮುಂದೆ ಇತ್ತು. ಈ ಸಂಬಂಧವಾಗಿ ಬಹಳ ದಿವಸಗಳ ಹಿಂದೆ ಸರ್ವೆ ಆಗಿ ಅನೇಕ ಸಂದರ್ಭದಲ್ಲಿ ತೆಗೆದುಕೊಳ್ಳಬೇಕು ಎನ್ನುವ ಮನೋಭಾವನೆ ಸರ್ಕಾರಕ್ಕೆ ಇತ್ತು. ನಾನು ಅನೇಕ ಸಂದರ್ಭಗಳಲ್ಲಿ ಪ್ರಶ್ನೆಗಳನ್ನು ಹಾಕಿದಾಗ, ಖೋತಾ ಸೂಚನೆಗಳನ್ನು ಕಳುಹಿಸಿದಾಗ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆ ಎಂದು ಒಂದು ರೀತಿಯ ಭರವಸೆಯನ್ನೂ ಸಹ ಕೊಟ್ಟಿದ್ದಾರೆ. ಆದರೆ ಯಾರ ಒತ್ತಾಯದಿಂದಲೋ, ಯಾರ ಕೈವಾಡದಿಂದಲೋ ಕೇವಲ ಮೊದಲು draft proposals ನಲ್ಲಿ ಸೇರಿಸಿಕೊಂಡಿದ್ದು, ಇದ್ದಕ್ಕಿದ್ದ ಹಾಗೆಯೇ ಆಮೇಲೆ ಇದನ್ನು ಕೈಬಿಟ್ಟರು. Draft proposals ನಲ್ಲಿ ಇದನ್ನು ಸೇರಿಸಿಕೊಂಡು ಮಧ್ಯೆ ಕೈ ಬಿಡುವುದಕ್ಕೆ ಏನು ಕಾರಣವೆಂದು ಸ್ವಲ್ಪ ಪ್ರಸ್ತಾಪ ಮಾಡಿದಮೇಲೆ ಪುನಃ ಈ ಯೋಜನೆಯಲ್ಲಿ ಸೇರಿಸಿಕೊಂಡರು. ಈ ಮಧ್ಯೆ ಎಲಿ ಇಂತಹ ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೊಳ್ಳುತ್ತಾರೋ ಅಂತಹ ಕಡೆಗಳಲ್ಲಿ ಅನೇಕ ಗ್ರಾಮಗಳು ಮತ್ತು ಜಮೀನುಗಳು ಮುಳುಗಡೆಯಾಗುವುದು ಸ್ವಾಭಾವಿಕ. ಇಲ್ಲಿಯೂ ಸಹ ಹೆಚ್ಚು ಜಮೀನು ಮುಳುಗಡೆಯಾಗುತ್ತದೆ ಮತ್ತು ಅನೇಕ ಗ್ರಾಮಗಳು ಹೋಗುತ್ತವೆ ಎಂದು ಈ ಪ್ರದೇಶದ ಜನಗಳು ಮತ್ತು Constituency members ಎಲ್ಲರೂ ಸೇರಿಕೊಂಡು, ಇದು ಕೂಡದು ಎಂದು ಮೀಟಿಂಗ್ ಮಾಡಿ ದೆಹಲಿಗೂ ಸಹ ಟೆಲಿಗ್ರಾಂಗಳನ್ನು ಕಳುಹಿಸಿದರು. ಅದು ಬಹು ಮುಖ್ಯವಾದ ಯೋಜನೆಯಾಗಿರುವುದರಿಂದ ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯೊಳಗೆ ಇದೂ ಸೇರಿಸಿಕೊಂಡು ಮಂಜೂರು ಆಗುತ್ತದೆ ಎಂದು ಅನೇಕ ಜನಗಳು ಎದುರು ನೋಡುತ್ತಾ ಇದ್ದರು. ಆದರೆ ಅಲ್ಲಿಂದ ಬಂದ ಮೇಲೆ ಈ ಯೋಜನೆ ಕೈಬಿಟ್ಟಿರುವ ಹಾಗೆ ತಿಳಿದು ಈ ಪ್ರಾಂತ್ಯದ ಜನಗಳು ನಿರಾಶರಾಗಿದ್ದಾರೆ. ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಗೆ ಹೆಚ್ಚಿಗೆ ಖರ್ಚಾಗುವುದರಿಂದ ಇದನ್ನು ಕೈಬಿಡಬೇಕಾಗಿ ಬಂದಿದೆ, ಎಂದು ಹೇಳಿದ್ದಾರೆ. ಹೆಚ್ಚು ಖರ್ಚಾಗುತ್ತದೆ ಎನ್ನುವ ಉತ್ತರ ಸಮಂಜಸವಾದುದಲ್ಲ, ನ್ಯಾಯವಾದುದೂ ಅಲ್ಲ ಎಂದು ಹೇಳುತ್ತೇನೆ. ಇದೇ ಶಿವಮೊಗ್ಗಾ ಜಿಲ್ಲೆಯಲ್ಲಿ ತುಂಗಾ ನದಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟಲು $2\frac{1}{2}$ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇದರ ಹಿಂದುಗಡೆ ನೀರಾವರಿ ಆಗುವುದು 20-22 ಸಾವಿರ ಎಕರೆಗಳು ಮಾತ್ರ. ಈ 20-22 ಸಾವಿರ ಎಕರೆ ನೀರಾವರಿಗಾಗಿ ಎರಡು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಅಣೆಕಟ್ಟನ್ನು ಕಟ್ಟಿದ್ದಾರೆ.

ನುಗು ಜಲಾಶಯದ ಯೋಜನೆಗೆ ಸುಮಾರು ಮೂರು ಕೋಟಿ ರೂಪಾಯಿ ಖರ್ಚುಮಾಡಿ ಸುಮಾರು 20-22 ಸಾವಿರ ಎಕರೆ ನೀರಾವರಿಯಾಗುವಂತೆ ಮಾಡಿದ್ದಾರೆ. ಇಲ್ಲಿ ಸುಮಾರು 50 ಸಾವಿರ ಎಕರೆ ನೀರಾವರಿಗೆ ಬರುತ್ತದೆ. ಇದಕ್ಕೆ ಖರ್ಚಾಗುವುದು ಆರು ಕೋಟಿ ರೂಪಾಯಿ ಹೀಗಿರುವಾಗ ಇದು ದುಬಾರಿ ಎಂದು ಹೇಳುವುದರಲ್ಲಿ ಏನೂ ತಿರುಳಿಲ್ಲವೆಂದು ನಾನು ಹೇಳಬೇಕಾಗಿದೆ. ಯಾವ ಕಾರಣಕ್ಕಾಗಿ ಇದನ್ನು ಕೈ ಬಿಟ್ಟರೋ ಗೊತ್ತಿಲ್ಲ. ಚೀಫ್ ಇಂಜನಿಯರ ಹತ್ತಿರ ಹೋಗಿ ಇದನ್ನು ಪ್ರಸ್ತಾಪ ಮಾಡಿದರೆ, ಇದು ಬಹಳ ಮುಖ್ಯವಾದ ಯೋಜನೆ, ಇದನ್ನು ಖಂಡಿತವಾಗಿ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ. ಇದನ್ನು ಅಗತ್ಯವಾಗಿ ಒಪ್ಪಿಕೊಳ್ಳುವುದಕ್ಕೆ ಕಾರಣವಿದೆ. ಮದರಾಸು ಸರ್ಕಾರದವರಿಗೂ ಮೈಸೂರು ಸರ್ಕಾರಕ್ಕೂ ಹೇಮಾವತಿ ನೀರನ್ನು ಉಪಯೋಗಿಸಿಕೊಳ್ಳುವ ವಿಚಾರದಲ್ಲಿ ಹಿಂದೆ ಒಂದು ಒಪ್ಪಂದವಾಗಿದೆ. ಒಪ್ಪಂದವಾಗಿ ಸುಮಾರು 30-35 ವರ್ಷಗಳಾಗಿವೆ. ಅದರ ಅವಧಿ ಮುಗಿಯುವುದರಲ್ಲಿದೆ. ಆದುದರಿಂದ ಈ ಯೋಜನೆಯನ್ನ ಬೇಗ ತೆಗೆದುಕೊಳ್ಳುವುದರಿಂದ ಈ ಕಷ್ಟದಿಂದ ತಪ್ಪಿಸಿಕೊಳ್ಳುವುದಕ್ಕೂ ಅವಕಾಶವಿದೆ. ಆದಕಾರಣ ಕೂಡಲೇ ಇದನ್ನು ತೆಗೆದುಕೊಳ್ಳಬೇಕಾದುದು ಸೂಕ್ತವೆಂದು ಹೇಳಬಯಸುತ್ತೇನೆ. ಈಗಾಗಲೇ ಎರಡನೆಯ ಪಾಂಚವಾರ್ಷಿಕ ಯೋಜನೆ ತಯಾರಾಗಿದೆ 150 ಕೋಟಿ ರೂಪಾಯಿಗೆ ಯೋಜನೆ ಹಾಕಿಕೊಂಡು ಹೋಗಿದ್ದೆವು. ಆದರೆ ಅದನ್ನು 82 ಕೋಟಿಗೆ ಇಳಿಸಿದ್ದಾರೆ ಈ ಕಾರಣದಿಂದ ಅದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಬಹುದು. ನಮ್ಮ ಮುಖ್ಯ ಮಂತ್ರಿಗಳು ಅವರ ಭಾಷಣದಲ್ಲಿ ಈಗ ಎರಡನೆಯ ಯೋಜನೆಯಲ್ಲಿ ಏನು ಮಂಜೂರಾಗಿದೆಯೋ ಅಷ್ಟಕ್ಕೇ ನಿಲ್ಲುತ್ತದೆಂದು ಭಾವಿಸಬಾರದು ಇದು elastic ಆಗಿದೆ, ನಮ್ಮ ಹಣಕಾಸಿನ ಪರಿಸ್ಥಿತಿ ಅನುಕೂಲವಾದರೆ ಇನ್ನೂ ಕೆಲವು ಯೋಜನೆಗಳನ್ನು ಸೇರಿಸಿಕೊಂಡು ಕೆಲಸ

(ಶ್ರೀ ಕೆ. ಲಕ್ಕಪ್ಪ.)

ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ನಮ್ಮ ಸಂಸ್ಥಾನದ ಉತ್ಪತ್ತಿ ಜಾಸ್ತಿಯಾಗಿ, ಹಣ ಕಾಸಿನ ಪರಿಸ್ಥಿತಿ ಉತ್ತಮವಾದ ಕೂಡಲೆ ಈ ಯೋಜನೆಯನ್ನು ತೆಗೆದುಕೊಂಡು ಕಾರ್ಯಗತಮಾಡಿ ಅದರ ಮೂಲಕ ಆ ಪ್ರಾಂತದ ಜನರಿಗೆ ಅನುಕೂಲ ಮಾಡಬೇಕೆಂಧು ಸರ್ಕಾರದ ಗಮನಕ್ಕೆ ತಂದು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).— ಸ್ವಾಮಿ, ಇತ್ತೀಚೆಗೆ ಮೈನರ್ ಕೆರೆಗಳ ಕಾಮಗಾರಿ ಹೆಚ್ಚಿನ ಪರಿಮಿತಿಯಲ್ಲಿ ನಡೆಯುತ್ತಿದೆ. ಇದು ಸಂತೋಷಕರವಾದ ವಿಚಾರ. ಆದರೆ ದೇಶಾದ್ಯಂತ ಅನೇಕ ವರ್ಷಗಳಿಂದ ಮೈನರ್ ಮತ್ತು ಮೇಜರ್ ಕೆರೆಗಳ ರಿಪೇರಿ ಕಾಮಗಾರಿ ಆಗಬೇಕೆಂದು ಪ್ರಬಲ ವಾದ ಕೂಗ ದೇಶಾದ್ಯಂತ ಇದ್ದೇ ಇದೆ. ಈ ಸಾಲಿನಲ್ಲಿ ಮೈನರ್ ಕೆರೆಗಳ ರಿಪೇರಿಗೂ ಮತ್ತು original worksಗೂ ಕೂಡ ಹೋದ ವರ್ಷಕ್ಕಿಂತ ಕಡಮೆ ಹಣವನ್ನು ಒದಗಿಸಿದ್ದಾರೆ. ಎಂಟನೆಯ ಡಿಮ್ಯಾಂಡ್ 15 ನೆಯ ಐಟಂನಲ್ಲಿ ಕೆರೆಗಳ ರಿಪೇರಿ, ಹೊಸ ಕೆರೆಗಳನ್ನು ಕಟ್ಟುವುದು, ಇಂಥದ್ದಕ್ಕಾಗಿ ಪ್ರತ್ಯೇಕವಾಗಿ 1,16,37,000 ರೂಪಾಯಿ ಒದಗಿಸಿದ್ದಾರೆ. ಹೋದ ಸಾಲಿನ ಬಡ್ಜೆಟ್ ಅಂದಾಜು ತೆಗೆದುಕೊಂಡರೆ, 18,98,000 ರೂಪಾಯಿ ಒದಗಿಸಿದೆ. ಹೀಗೆಯೇ maintenance and repairs ಶಿರೋನಾಮೆಯಲ್ಲಿ 14,30,000 ರೂಪಾಯಿ ಒದಗಿಸಿದ್ದಾರೆ. ಇದು ಹೋದ ಸಾಲಿಗಿಂತ 11.80 ಲಕ್ಷ ಜಾಸ್ತಿ. ಅಂದರೆ, revised estimateನಲ್ಲಿ 19 ಲಕ್ಷ ಚಿಲ್ಲರೆ ರೂಪಾಯಿ ಅಂದಾಜಾಗಿದೆ, 14 ಲಕ್ಷ ಒದಗಿಸಿದ್ದಾರೆ.

40 ನೆಯ ಡಿಮ್ಯಾಂಡಿನಲ್ಲಿ 68 G.N.E.D. ಎಂದು ಹೊಸದಾಗಿ ಸೇರಿಸಿರುವ head of accountನಲ್ಲಿ ಹಣವನ್ನೊದಗಿಸಿದ್ದಾರೆ. ಇದರಲ್ಲಿ worksಗೆಂದು ಒಟ್ಟು ಮೊತ್ತ ಒಂದು ಕೋಟಿ ಚಿಲ್ಲರೆ ರೂಪಾಯಿ ಒದಗಿಸಿದ್ದಾರೆ. ಈ ಲೆಕ್ಕದ ವಿವರವನ್ನು ನೋಡಿದರೆ, ಹೊಸದಾಗಿ ಕಟ್ಟತಕ್ಕ ಜಲಾಶಯಗಳಿಗೆ ಮಾತ್ರ ಈ ಹಣ ಖರ್ಚಾಗುತ್ತದೆ. Constructio of new tanks and pick-upsಗೆ 2.45 ಲಕ್ಷ ರೂಪಾಯಿ ಇದೆ. Major worksಗೆ 15.80 ಲಕ್ಷ ಇದೆ. ಇದಿಷ್ಟೂ 68 ನೆಯ head of account ನಲ್ಲಿ ಖರ್ಚಾಗತಕ್ಕ ಹಣ. ಈಗ ಹೊಸ ಅಕೌಂಟಿಂಗ್ ಪದ್ಧತಿಯ ಪ್ರಕಾರ 50 ಸಾವಿರ ಮತ್ತು ಅದರ ಮೇಲ್ಪಟ್ಟು ಖರ್ಚಾಗತಕ್ಕ ಕಾಮಗಾರಿಗಳಿಗೆ ಮಾತ್ರ 68 ನೆಯ ಡಿಮ್ಯಾಂಡಿನಲ್ಲಿ ಕೊಟ್ಟಿದ್ದಾರೆ. ಅಂದರೆ, ದೊಡ್ಡ ದೊಡ್ಡ ಕೆರೆಗಳ ನಿರ್ಮಾಣಕ್ಕೆ ಕೊಟ್ಟಿರುವುದು ಹೊರತು 40 ನೆಯ ಡಿಮ್ಯಾಂಡಿನಲ್ಲಿ ಬರತಕ್ಕ ಖರ್ಚು ಬಾಬು ಯಾವುದೂ ಸಣ್ಣ ಕೆರೆಗಳ ಕಾಮಗಾರಿಗಳಿಗೆ ಖರ್ಚು ಮಾಡುವುದಕ್ಕಲ್ಲ.

ಸ್ವಾಮಿ, ಹಿಂದಿನಿಂದ ಅನೇಕ ವರ್ಷಗಳಿಂದ ನಾದುರಸ್ತಾಗಿರುವ ಕೆರೆಗಳನ್ನು ರಿಪೇರಿ ಮಾಡುವುದಾಗಲೀ ಸಣ್ಣ ಪಟ್ಟ ಕೆರೆಗಳನ್ನು ರಿಪೇರಿ ಮಾಡುವುದಾಗಲೀ ಸರ್ಕಾರಕ್ಕೆ ಮನವಿ ಬಂದರೆ, ಅದಕ್ಕೆ ಏನೋ ಒಂದು ಶೇಕಡಾವಾರು ಪ್ರತಿಫಲ ಬರಬೇಕೆಂದು ಗೊತ್ತು ಮಾಡಿದ್ದಾರೆ. ಸರ್ಕಾರದವರು ಖರ್ಚು ಮಾಡುವ ಮೊತ್ತದ ಮೇಲೆ ಕನಿಷ್ಠ ಪಕ್ಷ ಶೇಕಡ 4 ರಷ್ಟು ಬಡ್ಡಿ ಅಥವಾ 3 ರಷ್ಟು ಬಡ್ಡಿ ಬರುವ ಹಾಗಿದ್ದರೆ ಮಾತ್ರ ಮಾಡುತ್ತೇವೆ. ಅಷ್ಟು ಪ್ರಮಾಣದಲ್ಲಿ ಉತ್ಪತ್ತಿ ಬಾರದೇ ಯಿದ್ದರೆ ಆ ಕೆಲಸಗಳನ್ನು ತೆಗೆದುಕೊಳ್ಳುವುದುಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಈಗ ದೊಡ್ಡ ದೊಡ್ಡ ಕಾಮಗಾರಿಗಳನ್ನು ಹೇಗೆ ತೆಗೆದುಕೊಳ್ಳುತ್ತಾರೆಂದು ನೋಡೋಣ. ಉದಾಹರಣೆಗೆ, ಕೃಷ್ಣರಾಜಸಾಗರ ಜಲಾಶಯಕ್ಕೆ ಸಂಬಂಧಪಟ್ಟ ನಾಲೆಗಳ ವಿಚಾರವನ್ನು ತೆಗೆದುಕೊಂಡರೆ, ಬಡ್ಜೆಟ್ಟಿನಲ್ಲಿರುವ ಹಾಗೆ, ಈ ವರ್ಷದ ಅಂದಾಜು 10·60 ಲಕ್ಷ ರೂಪಾಯಿ, ಇದಕ್ಕೆ ಖರ್ಚಾಗುವುದು 9·41 ಲಕ್ಷ. ಇದರ ಜೊತೆಗೆ ಪ್ರತಿವರ್ಷವೂ ಸಾಮಾನ್ಯ ವೆಚ್ಚ ಕೃಷ್ಣರಾಜಸಾಗರ ಕಟ್ಟೆಯಮೇಲೆ 9·41 ಲಕ್ಷವಲ್ಲದೆ ಬೇರೆ ಕಡೆ ಕೂಡ ಇದಕ್ಕೆ ಖರ್ಚು ತೋರಿಸಿದ್ದಾರೆ, ಡಿಮ್ಯಾಂಡ್ ಕೂಡ ಇಟ್ಟಿದ್ದಾರೆ. Demand No. 40 K.R.S. Works—Budget Vol. I page 138-9. ಇದರಲ್ಲಿ 6 ಲಕ್ಷ 57 ಸಾವಿರ 9 ಲಕ್ಷದ 97 ಸಾವಿರ. ಹೀಗೆ 9.97 ಲಕ್ಷ ಒಂದು, 6 ಲಕ್ಷ ಚಿಲ್ಲರೆ ಒಂದು, 9·41 ಲಕ್ಷ ಒಂದು ಇದಿಷ್ಟು ಹಣವೂ ಈ ಕೆ. ಆರ್. ಎಸ್. ಡ್ಯಾಮ್ ಮೇಲೆ ಮತ್ತು ಇದಕ್ಕೆ ಸಂಬಂಧಪಟ್ಟ ನಾಲೆಗಳ ಮೇಲೆ ಖರ್ಚು ಮಾಡುತ್ತಿದ್ದಾರೆ. ಉತ್ಪತ್ತಿ ಮಾತ್ರ 10·60 ಲಕ್ಷ ರೂಪಾಯಿ. ಸಾಲಿಯಾನ ಮಾಡುತ್ತಿರುವ ಖರ್ಚೆಷ್ಟು. ಇದಲ್ಲದೆ capital investment ಬೇರೆ. ಇದರಿಂದ ಎಷ್ಟು ಪ್ರತಿಫಲ ಶೇಕಡಾವಾರು ಬರುತ್ತದೆಂದು ಹಣಕಾಸಿನ ಮಂತ್ರಿಗಳು ಹೇಳಬೇಕು.

Mr. SPEAKER.—Financial statement reveals that the return on the project is 8 per cent

ಶ್ರೀ ಡಿ. ದೇವರಾಜ ಅರಸ್.—ಶೇಕಡ 8 ರಂತೆ ಕೂಡ ಬರುವುದಿಲ್ಲವೆಂದು ನನ್ನ ವಾದ. ಯಾಕೆಂದರೆ ಕೃಷ್ಣರಾಜಸಾಗರ ವರ್ಕ್ಸ್‌ಗೆ ವರ್ಷೇ ವರ್ಷೇ ಖರ್ಚು ಮಾಡತಕ್ಕ ದುಡ್ಡನ್ನು ನಾಲ್ಕು ಪುಸ್ತಕಗಳನ್ನೂ ಹುಡುಕಿ ನೋಡಿದ್ದರಲ್ಲಿ, ಒಂದೊಂದನ್ನೂ ಒಂದು ಕಡೆ ತೋರಿಸಿಕೊಂಡು ಬಂದಿದ್ದಾರೆ. ಒಂದೇ ಕಡೆ ಇದರ ವಿವರಗಳು ಸಿಕ್ಕುವುದಿಲ್ಲ. ಕಣ್ಣಿಗೆ ಎಣ್ಣೆ ಬಿಟ್ಟು ನೋಡಿದರೂ ಸಿಕ್ಕುವುದು ಕಷ್ಟವಾಗಿದೆ. ಒಂದು ಕಡೆ ಡಿಮ್ಯಾಂಡ್ 8 ರಲ್ಲಿ ಕೇಳಿದ್ದಾರೆ, ಇನ್ನೊಂದು ಕಡೆ ಡಿಮ್ಯಾಂಡ್ 40 ರಲ್ಲೂ ಕೂಡ ಕೇಳಿದ್ದಾರೆ. ಇದೇ ರೀತಿಯಾಗಿ ಚಾಮರಾಜಸಾಗರ ವಾಟರ್ ವರ್ಕ್ಸ್ ಸಂಬಂಧದಲ್ಲಿಯೂ ಕೇಳಿದ್ದಾರೆ, ಈ ರೀತಿಯಾಗಿ accounting ಇಟ್ಟುಕೊಂಡು ಬಂದಿದ್ದಾರೆ. ಈ ಎರಡು head of accountsಗಳಲ್ಲೂ ಇರತಕ್ಕ expenditure ನೋಡಿದರೆ ಎಷ್ಟಾಗುತ್ತದೆಯೋ ಅದನ್ನು ತೆಗೆದುಕೊಂಡು ಅದರ percentageಲೆಕ್ಕ ಹಾಕಿದರೆ, ಅರ್ಧ ಅಥವಾ ಒಂದು per cent ಬರುತ್ತದೆಂದು ಏನು ಹೇಳುತ್ತಾರೋ ಅದೂ ಬರುವುದಿಲ್ಲವೆಂದು ಸಮರ್ಥನೆ ಮಾಡುತ್ತಿದ್ದೇನೆ. ಹೀಗೆ ದೊಡ್ಡ ದೊಡ್ಡ ಜಲಾಶಯಗಳನ್ನು one per cent ಬರದೇ ಇದ್ದರೂ ಕೆಲಸ ಮಾಡಿ ಇಷ್ಟೊಂದು ಹಣವನ್ನು ಖರ್ಚು ಮಾಡುತ್ತಿರುವಾಗ, ಹೀಗೆಯೇ ಸಣ್ಣ ಪಟ್ಟ ಕೆರೆ ಕೆಲಸಗಳನ್ನು, ನಾವು ಆಗಿಂದಾಗ್ಗೆ ಈ ಸಭೆಯಲ್ಲಿ ಒತ್ತಾಯ ಮಾಡುತ್ತಿದ್ದರೂ ಕೂಡ ಸರ್ಕಾರದವರು ಇದಕ್ಕೆ ವರ್ಷೇ ವರ್ಷೇ ದುಡ್ಡನ್ನು ಹೆಚ್ಚಾಗಿ ಒದಗಿಸುವುದಕ್ಕೆ ಬದಲಾಗಿ ಕಡಿಮೆ ಒದಗಿಸುತ್ತಿರತಕ್ಕದು ಸರಿಯಾದ ನೀತಿಯಲ್ಲ. ಮತ್ತು ಈ percentage ಇಷ್ಟೇ ಪ್ರಮಾಣದಲ್ಲಿ ಬಂದರೆ ಮಾತ್ರ ಕೆಲಸವನ್ನು ಮಾಡಿಸುತ್ತೇವೆ, ಹಾಗೆ ಬರದೆ ಹೋದರೆ ಮಾಡಿಸುವುದಿಲ್ಲವೆಂದು ಹೇಳಿರುವುದು ಕೂಡ ಸರಿಯಾದದ್ದಲ್ಲವೆಂದು ನಾನು ಹೇಳುತ್ತೇನೆ. ಕೆರೆ ರಿಪೇರಿಯಾಗಬೇಕು ಎಂದು ಹಲವಾರು ಅರ್ಜಿಗಳನ್ನು ಕೊಟ್ಟರೆ, ಅನೇಕ ಸಂದರ್ಭಗಳಲ್ಲಿ ಸರ್ಕಾರದವರು ಒಂದು ನಿಗದಿ ಮಾಡಿಕೊಂಡಿರುವ percentage

ಬರುವುದಿಲ್ಲವೆಂದು ಕೈಬಿಡುವಾಗ, ಶೇಕಡ 5, ಶೇಕಡ 10 ಬರುವ ಹಾಗೆ ದುಡ್ಡು ಕೊಡುತ್ತೇವೆ, ಎಕರೆಗೆ 10-15 ರೂಪಾಯಿ ವಾಟರ್ ರೇಟ್ ಕೊಡುತ್ತೇವೆಂದೂ, ಆವಶ್ಯಕತೆ ಬಹಳವಾಗಿದ್ದರೆ ಇನ್ನೂ ಸ್ವಲ್ಪ ಹಣವನ್ನೂ ಕೊಡಬೇಕೆಂದು ಒತ್ತಾಯ ಮಾಡಿದರೂ ಕೊಡುತ್ತೇವೆಂದೂ ನಾನು ಇದೇ ಮಾನ್ಯ ಸಭೆಯಲ್ಲಿ ಒಂದು ಕೆರೆಯ ವಿಚಾರವಾಗಿ interpellation 1948ರಲ್ಲಿ ಕಳುಹಿಸಿದ್ದೆ. 1956ನೆಯ ಇಸವಿಯಲ್ಲಿ ಸಹ ಇನ್ನೂ ಆ ಕೆಲಸವನ್ನು ತೆಗೆದುಕೊಂಡಿಲ್ಲ. ಈಗ ತೆಗೆದುಕೊಳ್ಳುತ್ತೇವೆಂದು ಉತ್ತರ ಕೊಟ್ಟರು. ಹೇಗೆ ಸಣ್ಣ ಪುಟ್ಟ ಕಾಮಗಾರಿಗಳ ವಿಚಾರದಲ್ಲಿ, ಕೆರೆಗಳ ವಿಚಾರದಲ್ಲಿ, ಜನರು ಯಾವ ಮಟ್ಟದಲ್ಲಿ ಕೆಲಸವಾಗಬೇಕು, ತೀವ್ರವಾಗಿ ಆಗಬೇಕು ಎಂದು ನಿರೀಕ್ಷೆ ಮಾಡುತ್ತಾರೆಯೋ ಆ ಮಟ್ಟದಲ್ಲಿ ಈ ಇಲಾಖೆಯಲ್ಲಿ ನಡೆಯದೆ, ಉದಾಸೀನ ಭಾವದಿಂದ ಕೂಡಿಇದ್ದ ಹಾಗೆ ಕಾಣುತ್ತದೆ. ಇದು ತಪ್ಪಬೇಕು. ಸರ್ಕಾರದವರು ಇದಕ್ಕೆ ಹೆಚ್ಚಿನ ಗಮನ ಕೊಡಬೇಕು ಕೆರೆಗಳನ್ನು ರಿಪೇರಿ ಮಾಡಿಸುವುದಕ್ಕೆ ಗೊತ್ತಾದ ಪ್ರಮಾಣದಲ್ಲಿ ಪ್ರತಿಫಲ ಬಂದರೆ ಕೆಲಸ ತೆಗೆದುಕೊಳ್ಳಿ, ಇಲ್ಲದಿದ್ದರೆ ತೆಗೆದುಕೊಳ್ಳಬೇಡಿ ಎನ್ನುವ ನೀತಿಯನ್ನು ಬದಲಾವಣೆ ಮಾಡಬೇಕು. ಅನೇಕ ಸಂದರ್ಭಗಳಲ್ಲಿ, ಒಂದು ಹಳ್ಳಿಯಲ್ಲಿ, ಅದರಲ್ಲೂ ಮಲೆನಾಡು ಪ್ರದೇಶಗಳಲ್ಲಿ ಕೆರೆ ರಿಪೇರಿಯಾಗಬೇಕಾಗಿರುತ್ತದೆ. ಕಾರಣಾಂತರದಿಂದ ಅಲ್ಲಿ ಜನಸಂಖ್ಯೆ ಕಡಿಮೆಯಾಗಿರುತ್ತದೆ. ಅಂಥ ಒಂದು ಊರಿನಲ್ಲಿ ಕೆರೆ ರಿಪೇರಿಯಾಗಬೇಕಾದರೆ, ಸರ್ಕಾರದವರು ಹಣ ಖರ್ಚುಮಾಡುವಾಗ ಇಷ್ಟೇ percentage ಬರಬೇಕು ಎಂದು ಒತ್ತಾಯ ಮಾಡುವುದಾದರೆ ಆ ಜನರಿಗೆ ನಿಗದಿಯಾದ percentage ಪ್ರಕಾರ ಪ್ರತಿಫಲ ಬರುವ ಹಾಗೆ ದುಡ್ಡು ಕೊಡುವುದಕ್ಕೆ ಕಷ್ಟವಾಗಿರುತ್ತದೆ. ಅಂಥ ಸಂದರ್ಭಗಳಲ್ಲಿ, ಐದು ಸಾವಿರ ರೂಪಾಯಿಗಳ, ಹತ್ತು ಸಾವಿರ ರೂಪಾಯಿಗಳ ಕೆಲಸ ತೆಗೆದುಕೊಳ್ಳುವುದಿಲ್ಲವೆಂದರೆ ಬಹಳ ತೊಂದರೆಯಾಗುತ್ತದೆ. ಅಲ್ಲಿರುವ ಜನರು ಆರ್ಥಿಕಾಭಿವೃದ್ಧಿ ಹೊಂದುವುದಕ್ಕೆ ಅವಕಾಶವಾಗುವುದಿಲ್ಲ. ಆದುದರಿಂದ ತಾವು ಇಷ್ಟೇ percentage of return ಬರಬೇಕೆಂದು ಕಡ್ಡಾಯ ಮಾಡುವುದು ಒಳ್ಳೆಯದಲ್ಲ. ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟಿಸಿ, ಎಷ್ಟೋ ನಾಲೆಗಳನ್ನೂ ಕಟ್ಟಿಸಿಕೊಟ್ಟಿರುವಾಗ ಹಿಂದೆ ಯಾವುದೋ ಕಾಲದಲ್ಲಿ ಹಾಕಿದ್ದ water rate ಏನಿದೆಯೋ ಅದನ್ನೇ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಅದೇ ಸಣ್ಣ ಪುಟ್ಟ ಕೆರೆಗಳನ್ನು ಕಟ್ಟಿಸಿಕೊಡಿ ಎಂದು ಕೇಳಿದರೆ ಖರ್ಚಿಗೆ ಸರಿಯಾದ ದರದಲ್ಲಿ ಪ್ರತಿಫಲ ಬರುವುದಿಲ್ಲವಾದ್ದರಿಂದ ಒಂದು ಎಕರೆಗೆ 10ರೂಪಾಯಿ, 15 ರೂಪಾಯಿ ಕೊಡುವುದಕ್ಕೆ ಒಪ್ಪಿಕೊಳ್ಳಿ ಎಂದು ಹೇಳುತ್ತಾರೆ. ಕೆರೆ ಕೆಳಗೆ ಜಮೀನಿರತಕ್ಕ ರೈತರು ಒಂದು ಎಕರೆಗೆ 10-15 ರೂಪಾಯಿ ಕೊಡುವುದಕ್ಕೆ ಒಪ್ಪಿಕೊಳ್ಳಬೇಕಾದರೆ ವರ್ಷದಲ್ಲಿ ಮುನ್ನೂರ ಅರವತ್ತೈದು ದಿನಗಳೂ ನೀರನ್ನು ಗ್ಯಾರಂಟಿಯಾಗಿ ಕೊಡತಕ್ಕ ಕ್ಷೇತ್ರದಲ್ಲಿ ಯಾವರೀತಿಯ ಕಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ವಸೂಲ್ಮಾಡುತ್ತಿದ್ದಾರೆಂಬುದು ತೀವ್ರವಾಗಿ ಯೋಚನೆ ಮಾಡಬೇಕಾದ ವಿಷಯ.

ಹುಣಸೂರು ತಾಲ್ಲೂಕು, ಹನಗೋಡು ಬಳಿ ಒಂದು ನಾಲೆ (Channel) ಇದೆ. ಲಕ್ಷ್ಮಣ ತೀರ್ಥ ನದಿಗೆ ಅಣೆಕಟ್ಟು ಕಟ್ಟಿ ಈ ನಾಲೆಯನ್ನು ತೆಗೆದಿದ್ದಾರೆ. ಈ ನಾಲೆಯ ಕೆಳಗೆ ಒಟ್ಟು ಎಂಟು ಸಾವಿರ ಎಕರೆ ಪ್ರದೇಶ ನೀರಾವರಿಯಲ್ಲಿದೆ. ಈ ಅಣೆಕಟ್ಟನ್ನು ಕಟ್ಟಿದ್ದು ಬಹಳ ಹಿಂದಿನ ಕಾಲದಲ್ಲಿ. ಶಾಸನಗಳಿಂದ ನಮಗೆ ಗೊತ್ತಾಗುವಂತೆ ಸುಮಾರು 800-900 ವರ್ಷಗಳಾಗಿವೆ ಈ ಅಣೆಕಟ್ಟನ್ನು ಕಟ್ಟಿ ಎಂದು ಹೇಳುತ್ತಾರೆ. ಈ ಅಣೆಕಟ್ಟಿನಿಂದ ನಾಲೆಗಳು ತೀರ ಕಾಡು ಪ್ರದೇಶದಲ್ಲಿ ಬರುವ ಕಾರಣ, ನಾಲೆಯ ದಡದ ಮೇಲೆ ದಟ್ಟವಾದ ಕಾಡು ಬೆಳೆದು, ಕಾಡು ಮೃಗಗಳ ಕಾಟ ಜಾಸ್ತಿಯಾಗಿ, ಗದ್ದೆಗಳನ್ನು ಮಾಡುವುದಕ್ಕೆ ಜನರು ಹೋಗಲು ಬಹಳ ತೊಂದರೆಯಾಗಿ, ಇವು ಕ್ಷೀಣ ದೆಸೆಗೆ ಬರುವ ಸ್ಥಿತಿಯಲ್ಲಿತ್ತು. ಆದರೆ 1948 ನೆ ಇಸವಿಯಿಂದೀಚೆಗೆ ನಡೆದಂಥ Grow More Food Compaignನಲ್ಲಿ ಹಣವನ್ನು ಇಂಥ ಕೆಲಸಗಳಿಗೆ ಒದಗಿಸಿದ ಕಾಲದಲ್ಲಿ ಹತ್ತಾರು ಲಕ್ಷ ರೂಪಾಯಿಗಳನ್ನು ಸರ್ಕಾರದವರು ಖರ್ಚುಮಾಡಿ ಈ ನಾಲೆಗಳನ್ನು ರಿಪೇರಿಮಾಡಿ, ನಾಲೆಗಳ ಮೇಲೆ ಬೆಳೆದಿದ್ದ ಕಾಡನ್ನು ಕಡಿದು, ರಸ್ತೆಗಳನ್ನೂ ಕೂಡ ನಿರ್ಮಾಣಮಾಡಿ, ಯಥೇಚ್ಛವಾಗಿ ದುಡ್ಡು ಖರ್ಚುಮಾಡಿ ಉತ್ತಮ ಸ್ಥಿತಿಗೆ ತಂದರು. ಆದರೆ ವರ್ಷೇ ವರ್ಷೇ ನಾಲಾ ಪ್ರದೇಶಗಳಲ್ಲಿ maintenence repairs ಎಂದು annual repairsಗಾಗಿ ಏನು ಖರ್ಚುಮಾಡುತ್ತಿದ್ದಾರೋ ಅಂಥ ಯಾವ ಒಂದು return ಕೂಡ ನಾಲ್ಕೈದು ವರ್ಷಗಳಿಂದ ಈ ಪ್ರದೇಶದಲ್ಲಿ ನಡೆಯುತ್ತಿಲ್ಲ. ಒಂದು ಮೊತ್ತದಲ್ಲಿ Grow More Food Scheme ನಲ್ಲಿ ಏನು ಖರ್ಚು ಮಾಡಿದರೋ ಅದು ಬಿಟ್ಟರೆ ನಾಲೆಗಳ ರಿಪೇರಿಗೆ ಮತ್ತು ಅದಕ್ಕೆ ಆಗಬೇಕಾದ ಕೆಲಸಕಾರ್ಯಗಳಿಗೆ ಹಣವನ್ನು ಒದಗಿಸಿಲ್ಲ. ಹಿಂದೆ ಮಾಡಿದ ಕೆಲಸವೆಲ್ಲ ಈಗ ಕ್ಷೀಣ ದೆಸೆಗೆ ಬರುತ್ತಿದೆ. ರಸ್ತೆಗಳಲ್ಲೆಲ್ಲ ಕಾಡು ಬೆಳೆಯುತ್ತಿದೆ. ನಾಲೆಗಳ ದಡಗಳ ಮೇಲೂ ಕಾಡು ಬೆಳೆಯುವುದಕ್ಕೆ ಪ್ರಾರಂಭವಾಗಿದೆ. ಬಡ್ಜೆಟ್‌ನಲ್ಲಿ ನೋಡಿದರೂannual repairs ಮಾಡುವುದಕ್ಕೆ ಹಣವನ್ನೊದಗಿಸಿಲ್ಲ. ಆದುದರಿಂದ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಈಗ ಒಂದು ಪ್ರಾಜೆಕ್ಟ್ ಕೂಡ ಅಲ್ಲಿ ಆಗುತ್ತಿದೆ. ಕೆಂಚನಗೆರೆ ಪ್ರಾಜೆಕ್ಟ್ ಕೆಲಸ ನಡೆಯುತ್ತಿದೆ. ಇದರಿಂದ ಒಂದು ಸಾವಿರ ಎಕರೆ ಜಮೀನು ಅಚ್ಚುಕಟ್ಟಿಗೆ ಒಳಪಡುವ ಸಂದರ್ಭವಿರುವಾಗ 8—10 ಸಾವಿರ ಎಕರೆ ಜಮೀನು ನೀರಾವರಿಯಿಂದ ಸಾಗುವಳಿಯಾಗುವ ಸಂದರ್ಭದಲ್ಲಿ ಸರ್ಕಾರದವರು ನಾಲೆಗಳನ್ನು maintain ಮಾಡುವುದಕ್ಕೆ annual repairs ಗೋಸ್ಕರವಾಗಿ ಒಂದು ಮೊತ್ತವನ್ನು ಒದಗಿಸುವುದು ಸೂಕ್ತವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

11 A.M.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಮೊದಲು ಈ ಖೋತಾ ನಿರ್ಣಯಗಳು ಬಂದಾಗ್ಗೆ ಈ ಸಭೆಯಲ್ಲಿ ಆಯಾ ಇಲಾಖಾ ಮುಖ್ಯಾಧಿಕಾರಿಗಳೂ ಕೂಡ ಬಂದು ಹಾಜರಿರುತ್ತಿದ್ದರು. ಈ ಇಲಾಖೆಯ $7\frac{1}{2}$ ಕೋಟಿ ರೂಪಾಯಿಗಳ ಡಿಮ್ಯಾಂಡನ್ನು ಈಗ ನಾವು ಅಂಗೀಕಾರ ಮಾಡಬೇಕಾಗಿರುವಾಗ ಇಲಾಖೆಯಲ್ಲಿ ಇಬ್ಬರು ಚೀಫ್ ಇಂಜನಿಯರುಗಳಿದ್ದರೂ ಒಬ್ಬರೂ ಕೂಡ ಇಲ್ಲಿಲ್ಲದಿರುವುದು ಬಹಳ ಶೋಚನೀಯ. ಅವರು ಇಲ್ಲಿದ್ದರೆ ಇಲ್ಲಿನ ಚರ್ಚೆ ಯಾವ ರೀತಿಯಲ್ಲಿ ನಡೆಯುತ್ತಿವೆ, ಜನರ ಕುಂದು ಕೊರತೆಯೇನಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತಿತ್ತು.

ಮುಂದಾದರೂ ಅವರು ಅವರ ಇಲಾಖೆಯ ವಿಷಯ ಚರ್ಚೆಯಾಗುವಾಗ ಹಾಜರಿರಬೇಕಾದದ್ದು ಆವಶ್ಯಕವೆಂದು ಸಲಹೆ ಮಾಡುತ್ತೇನೆ.

(ಶ್ರೀ ಬಿ. ಹುಚ್ಚೇಗೌಡ.)

ನಮ್ಮ ದೇಶದಲ್ಲಿ ಸರ್ವತೋಮುಖವಾದ ಪ್ರಗತಿಯಾಗಬೇಕಾದರೆ ನಮ್ಮಲ್ಲಿರುವ ಶೇಕಡ 80 ಮಂದಿ ವ್ಯವಸಾಯಗಾರರ ಮೇಲ್ಮೆಯನ್ನು ಸಾಧಿಸಬೇಕು. ಅದಕ್ಕೆ ಮುಖ್ಯವಾಗಿ ಬೇಕಾದ ವ್ಯವಸಾಯಗಾರರ ಅರ್ಥಿಕಾಭಿವೃದ್ಧಿಯಾಗಬೇಕಾದರೆ ಮುಖ್ಯವಾಗಿ ನೀರಾವರಿ ಸೌಕರ್ಯ ಹೆಚ್ಚಬೇಕು. ಇದರಲ್ಲಿರುವ ಕುಂದು ಕೊರತೆಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ದೊಡ್ಡ ದೊಡ್ಡ ಜಲಾಶಯ ಕಟ್ಟಬೇಕಾದ ಆವಶ್ಯಕತೆಯಿದೆ, ಆದರೆ ದೊಡ್ಡ ಜಲಾಶಯಗಳು ಕೇವಲ ಕೆಲವು ಪ್ರದೇಶದ ಜನರಿಗೆ ಮಾತ್ರ ಸೌಕರ್ಯವನ್ನೊದಗಿಸುತ್ತವೆ. ಅದರ ಜೊತೆಗೆ ಎಲ್ಲರಿಗೂ ಸಹಾಯವಾಗುವಂತೆ ಹಿಂದಿನಿಂದಲೂ ಇರುವ ಕೆರೆ ಕಟ್ಟೆ, ಮೈನರ್ ಕೆರೆ ಮುಂತಾದವುಗಳ ದುರಸ್ತಿ ಕೂಡ ಬಹಳ ಮುಖ್ಯವಾಗಿದೆ. ನಮ್ಮ ದೇಶದಲ್ಲಿದ್ದ ಸುಮಾರು 30 ಸಾವಿರ ಎಕರೆಗಳಲ್ಲಿ ಅನೇಕ ಕೆರೆಗಳು ನಾದುರಸ್ತಾಗಿ ಕೇವಲ ಆರುಸಾವಿರ ಕೆರೆಗಳು ಮಟ್ಟಿಗೆ ಸರಿಯಾದ ಸ್ಥಿತಿಯಲ್ಲಿ ತಕ್ಕಮಟ್ಟಿಗಿವೆ. ಅವೂ ಕೂಡ ಕೆಲವಕ್ಕೆ ತೂಬು ಸರಿಯಾಗಿಲ್ಲದೆ, ಕೋಡಿ ಸರಿಯಾಗಿಲ್ಲದೆ, ಏರಿ ನಾದುರಸ್ತಾಗಿ, ಕಾಲುವೆ ಸರಿಯಾಗಿಲ್ಲದೆ, ಸರಿಯಾಗಿ ನೀರು ಬಾರದೆ ಹೀಗೆ ಒಂದಲ್ಲ ಒಂದು ವಿಧದಲ್ಲಿ ನಾದುರಸ್ತಾಗಿ ಪೂರ್ಣವಾಗಿ ಸಹಾಯಕಾರಿಯಾಗಿಲ್ಲ. ಅದಕೆ ಕಾರಣ ಇಲಾಖೆ ದಕ್ಷತೆ ಕಡಮೆಯಾಗಿರುವುದು. ಈ ಕೆರೆಗಳು ವರ್ಷೇ ವರ್ಷೇ ತನಿಖೆ ಮಾಡಿ ಅವು ಯಾವಸ್ಥಿತಿಯಲ್ಲಿವೆಯೆಂಬುದನ್ನು ಅಧಿಕಾರಿಗಳು ಇಲಾಖೆಗೆ ವರದಿ ಮಾಡುವುದಿಲ್ಲ. ಬೇಕಾದ್ದನ್ನು ನೋಡುತ್ತಾರೆ, ಬಾಕಿಯಾದ್ದನ್ನು ಆಗಾಗ್ಗೆ ಅಜಮಾಯಿಷಿ ಮಾಡಿ ಲೋಪದೋಷಗಳನ್ನು ಸರಿಪಡಿಸುವುದಿಲ್ಲ. ಇದರಿಂದ ಬಹಳ ಮಟ್ಟಿಗೆ ಅನಾನುಕೂಲ. ಕೆರೆಯಲ್ಲಿ ಸಾಕಷ್ಟು ನೀರು ಶೇಖರಣೆಯಾಗದೆ ಫಸಲು ಒಣಗಿ ವರ್ಷವೆಲ್ಲಾ ಕಷ್ಟಪಟ್ಟಿದ್ದು ವ್ಯರ್ಥವಾಗುತ್ತಿದೆ. ಇಂಥ ನ್ಯೂನತೆಗಳನ್ನು ಸರಿಪಡಿಸಬೇಕಾದದ್ದು ಆವಶ್ಯಕ. ಇಂಥ ಪ್ರಾಮುಖ್ಯ ವಿಚಾರದಲ್ಲಿ ಬಡ್ಜೆಟ್ ಭಾಷಣ ಮಾಡುವಾಗ ಮುಖ್ಯ ಮಂತ್ರಿಗಳು ಒಂದು ಶಬ್ದವನ್ನೂ ಸಹ ಹೇಳಿಲ್ಲ. ಮೈನರ್ ಕೆರೆಗಳಿಗೆ ಹಿಂದೆ ಎಷ್ಟೋ ಪ್ರಾಮುಖ್ಯತೆ ಕೊಡುತ್ತಿದ್ದರು, ಈಗ ಹಾಗೆ ಕೊಡುತ್ತಿಲ್ಲ. ಅದರಲ್ಲೂ ಈ ಸಾರಿ ಕ್ಯಾಪಿಟಲ್ ಅಕೌಂಟಿಗೆ ಕೆಲವನ್ನು ಹಾಕುತ್ತಾರೆ, ಪ್ರೊಡಕ್ಟಿವ್ ವರ್ಕ್ಸ್ ಸೇರಿಸುತ್ತಿಲ್ಲ. ಈ ವರ್ಷ ಐದು ಲಕ್ಷ ಮಾತ್ರ ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಕಳೆದ ಐದು ವರ್ಷಗಳಿಂದಲೂ ಕೂಡ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 75 ಲಕ್ಷ ರೂಪಾಯಿಗಳನ್ನು ಒದಗಿಸಿ ವರ್ಷಕ್ಕೆ 15 ಲಕ್ಷದಂತೆ ಖರ್ಚು ಮಾಡುತ್ತಿದ್ದಾರೆ. 15 ಲಕ್ಷಕ್ಕಿಂತ ಯಾವಾಗಲೂ ಹೆಚ್ಚಾಗಿ ಖರ್ಚುಮಾಡಿಲ್ಲ. ದೇಶದಲ್ಲಿ ಕನಿಷ್ಠ ಪಕ್ಷ 15 ಸಾವಿರ ಕೆರೆಗಳನ್ನು ದುರಸ್ತು ಮಾಡಬೇಕಾಗಿರುವಾಗ ವರ್ಷಕ್ಕೆ 100-124-190 ಕೆರೆಗಳನ್ನು ಮಾತ್ರ ದುರಸ್ತು ಮಾಡುತ್ತಾಬಂದರೆ ಯಾವ ಕಾಲಕ್ಕೆ ಎಲ್ಲಾ ರಿಪೇರಿಯಾಗುವುದು ? 100 ವರ್ಷವಾದರೂ ಮಾಡುವುದಕ್ಕಾಗುವುದಿಲ್ಲ. ಹಿಂದೆ 1,500 ಕೆರೆಗಳನ್ನು ಐದು ವರ್ಷಗಳಲ್ಲಿ ದುರಸ್ತು ಮಾಡುವುದಾಗಿ ಹೇಳಿ 1,000 ಕೆರೆಗಳನ್ನು ಮಾತ್ರ ದುರಸ್ತು ಮಾಡಿದ್ದಾರೆ. ಹೀಗೆ ವರ್ಷಕ್ಕೆ 300 ಕೆರೆಗಳನ್ನು ದುರಸ್ತುಮಾಡುತ್ತೇವೆಂದರೆ 200ನ್ನು ಮಾತ್ರ ಮಾಡುತ್ತಾರೆಂದು ಹೇಳಬಹುದು. ಅದೂ ಅಲ್ಲದೆ ಮೈನರ್ ಕೆರೆಗಳ ಆವಶ್ಯಕತೆ ಎಷ್ಟಿದೆಯೆಂದರೆ ಅವು ದೇಶದಲ್ಲಿ ಪ್ರತಿಯೊಬ್ಬ ರೈತನಿಗೂ ಕೂಡ ಉಪಯೋಗವಾಗತಕ್ಕವು. ಈಗತಾನೆ ಉತ್ಪತ್ತಿ ಎಷ್ಟೆಂಬುದನ್ನು ಶ್ರೀ ದೇವರಾಜ ಅರಸ್‌ರವರು ಹೇಳಿದ್ದಾರೆ. ಬರೀ ದೊಡ್ಡ ಕೆರೆಗಳಲ್ಲೇ ಉತ್ಪತ್ತಿಯಿದೆಯೆಂದು ಭಾವಿಸ ಬಾರದು. ಕೆ.ಆರ್.ಎಸ್.ನಲ್ಲಿ ಶೇಕಡ .8 ಉತ್ಪತ್ತಿ ಬರುತ್ತದೆಂದು ಹೇಳಿದರೆ ಹೇಗೆ ? ಆಕ್ಚುಯಲ್ ಅಕೌಂಟ್ಸ್ ತೆಗೆದುಕೊಂಡಿಲ್ಲ. 1954-55ರಲ್ಲಿ ಎಂಟು ಲಕ್ಷದ 81 ಸಾವಿರ ರೂಪಾಯಿಗಳ ಉತ್ಪತ್ತಿಯಿದೆ. ಇದು ಶೇಕಡ .8 ಕ್ಕಿಂತ ಕಡಮೆ ; ಒಂಬತ್ತು ಲಕ್ಷ ಚಿಲ್ಲರೆ ಖರ್ಚು, ಇದರಿಂದ ಪರಿಸ್ಥಿತಿ ಹೇಗಿದೆಯೆಂಬುದನ್ನು ಯೋಚನೆಮಾಡಬೇಕು. ಬಡ್ಜೆಟ್ ಅಂದಾಜಿನ ಪ್ರಕಾರ ಈ ಬಾಬಿನಲ್ಲಿ 12 ಲಕ್ಷ 10 ಸಾವಿರ ರೂಪಾಯಿಗಳ ಉತ್ಪತ್ತಿ, ಎಂಟು ಲಕ್ಷ 90 ಸಾವಿರ ರೂಪಾಯಿಗಳ ಖರ್ಚು ಇದೆ. ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ಒಂಬತ್ತು ಲಕ್ಷ ರೂಪಾಯಿಗಳ ಉತ್ಪತ್ತಿ 10 ಲಕ್ಷ ರೂಪಾಯಿಗಳ ಖರ್ಚು ಇದೆ; ಇದು ಖೋತಾ ಬಡ್ಜೆಟ್ಟಾಗಿದೆ, ಅಂದರೆ ಶೇಕಡ .8 ಬರುತ್ತದೆ. ಈ ಬಡ್ಜೆಟ್ ಪ್ರಕಾರ ಒಂಬತ್ತು ಲಕ್ಷ 41 ಸಾವಿರ ರೂಪಾಯಿಗಳ ಖರ್ಚು, 10 ಲಕ್ಷ 60 ಸಾವಿರ ರೂಪಾಯಿಗಳ ಆದಾಯವಿರುವುದನ್ನು ನೋಡಿದರೆ ಸುಮಾರು ಎರಡು ಲಕ್ಷ ರೂಪಾಯಿಗಳು ಒಳಕ್ಕೆ ಬರುತ್ತದೆಂದು ಹೇಳಬಹುದು. ಹೀಗೆ ಹೇಳುವಾಗ ಬರೀ ಉತ್ಪತ್ತಿ ಮಾಡಬೇಕೆಂದು ಹೇಳುವುದಿಲ್ಲ. ನೀರಾವರಿ ಸೌಕರ್ಯ ಮಾಡಬೇಕಾದದ್ದು ಮುಖ್ಯ. ಸಕ್ಕರೆ ಕಾರ್ಖಾನೆಗೆ ಬರೀ ಕಬ್ಬಿನಿಂದ 12 ಲಕ್ಷ ತೆರಿಗೆ ಬರುತ್ತದೆ. ಇದರಲ್ಲಿ ಕೋಟ್ಯಂತರ ರೂಪಾಯಿಗಳ ಆದಾಯವಿದೆ. ಜನರ ಆರ್ಥಿಕ ಪರಿಸ್ಥಿತಿ ಈಗ ಹೇಗಿದೆ, ಹಿಂದೆ ಹೇಗಿತ್ತು ಎಂಬುದನ್ನು ಊಹೆ ಮಾಡಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಆರ್ಥಿಕ ಸ್ಥಿತಿ ಉತ್ತಮವಾಗಬೇಕಾದರೆ, ಇಡೀ ದೇಶದ ಪ್ರಗತಿಯಾಗಬೇಕಾದರೆ, ಮೈನರ್ ಕೆರೆಗಳ ದುರಸ್ತಿ ಮಾಡಬೇಕಾದದ್ದು ಮುಖ್ಯ. ಇಷ್ಟೇ ಅಲ್ಲದೆ ಪಿಕಪ್ ಛಾನಲ್' ಅಣೆಕಟ್ಟು ಮುಂತಾದುವನ್ನೂ ದುರಸ್ತಿ ಮಾಡುವುದೂ ಮುಖ್ಯ. ಇಂಥ ವಿಚಾರಗಳನ್ನು ಅನೇಕವೇಳೆ ಗಮನಕ್ಕೆ ತಂದರೂ ಕೂಡ ಅವಕ್ಕೆಗಮನಕೊಟ್ಟಿಲ್ಲ. ಉದಾಹರಣೆ ಹೇಳುತ್ತೇನೆ. ತುರುವೇಕೆರೆ ತಾಲ್ಲೂಕಿನಲ್ಲಿಹಿತ್ತಲಕೊಪ್ಪದ ಕೆರೆಯ ಕೆಲಸ ಈ ದಿವಸದವರೆಗೂ ಪೂರೈಸಿಲ್ಲ. 40-50 ಸಾವಿರ ರೂಪಾಯಿಗಳಿಗೆ ಎಸ್ಟಿಮೇಟ್ ಆಗಿತ್ತು. ಅಲ್ಲಿಗೇ ಬಿಡಬೇಕೆಂದು ಯೋಚನೆಮಾಡುತ್ತಿದ್ದಾರೆಂದು ತಿಳಿದುಬಂದಿದೆ. ಇನ್ನೊಂದು, ಕೆಮ್ಮನಹಳ್ಳಿ ಕೆರೆ 1926ರಲ್ಲಿ ಜೀರ್ಣೋದ್ಧಾರವಾಯಿತು. ಈ ದಿವಸದವರೆಗೂ ಕಾಲುವೆಯಾಗಲಿ ಅಥವಾ ಅಚ್ಚುಕಟ್ಟಾಗಲಿ ನಿರ್ದೇಶವಾಗಿಲ್ಲ. ಹಂಗಾಮಿ ಕಂದಾಯ ಕೊಡುವುದು, ನೀರು ತೆಗೆದುಕೊಳ್ಳುವುದು ಹೀಗಿದೆ. ಬಗರ್‌ಹುಕುಂ ನೀರು ತೆಗೆದುಕೊಂಡರೆಂದು ಎಂಟರಷ್ಟು ಕಂದಾಯ ಹಾಕಲು ಅವಕಾಶವಿದೆ. ಎಷ್ಟು ಬೇಕಾದರೂ ಹಾಕಬಹುದು. ಈ ದಿವಸದವರೆಗೂ ಇದೇ ರೀತಿಯಿದೆ. ಅಚ್ಚುಕಟ್ಟು ನಿಷ್ಕರ್ಷೆ ಮಾಡಿ ಕಾಲುವೆಮಾಡಿ ಎಂದು ಹೇಳಿದರೆ, ಲೆವಲಿಂಗ್ ಇನ್ಸ್ಟ್ರುಮೆಂಟ್ ತರುವುದು ತೆಗೆದುಕೊಂಡು ಹೋಗುವುದು ಇಷ್ಟರಲ್ಲೇ ಆಗಿದೆ. ಆದ್ದರಿಂದ ಇದರಿಂದ ಸೌಕರ್ಯವಾಗುವ ಯೋಚನೆ ಬಿಟ್ಟೆವು. ಕೆರೆ ಕಟ್ಟಿ 1926ರಿಂದ ಇಲ್ಲಿಯವರೆಗೆ 30 ವರ್ಷಗಳಾಗಿವೆ. ಈ ದಿವಸದವರೆಗೂ ಅಚ್ಚುಕಟ್ಟನ್ನು ನಿಗದಿಮಾಡಿ ಕಾಲುವೆ ತೆಗೆಯಲು ಜಾಗವನ್ನೂ ಸಹ ಮಾರ್ಕ್ ಮಾಡಿಲ್ಲ. ರೈತರು ಇಷ್ಟಬಂದ ಹಾಗೆ ನೀರನ್ನು ತೆಗೆದುಕೊಳ್ಳುತ್ತಿದ್ದಾರೆ. ಮಲ್ಲಿದೇವರಹಳ್ಳಿಯಲ್ಲಿ ಒಂದು ಅಣೆಕಟ್ಟು ಕಟ್ಟಬೇಕೆಂದು ಕಳೆದ ಬಡ್ಜೆಟ್ ಅಧಿವೇಶನದಲ್ಲಿ 462ನೆಯ

ನಂಬರಿನ ಪ್ರಶ್ನೆ ಹಾಕಿದ್ದೆ. ಚೀಫ್ ಇಂಜನಿಯರು ಪರಿಶೀಲಿಸುತ್ತೇವೆಂದು ಹೇಳಿದ್ದರು. ಪುನಃ ಅಕ್ಟೋಬರ್ ಅಧಿವೇಶನದಲ್ಲಿ 689ನೆಯ ಪ್ರಶ್ನೆ ಹಾಕಿದೆ. ಅದಕ್ಕೆ ಆ ಅಧಿವೇಶನ ಮುಗಿದಮೇಲೆ ಉತ್ತರಕೊಟ್ಟರು. ಅದು ಈ ರೀತಿಯಿದೆ :—

> "This matter would be investigated again by the Chief Engineer."

'The matter would be investigated' ಎಂದು ಹೇಳಿದ್ದರೂ ಈ ದಿವಸದವರೆಗೂ ಏನೂ ಮಾಡಿಲ್ಲ. ಹೀಗಾದರೆ ಇಲಾಖೆ ಎಷ್ಟುಮಟ್ಟಿಗೆ ಜನರಿಗೆ ಸೌಕರ್ಯ ನೀಡುತ್ತದೆಯೆಂಬುದನ್ನು ಯೋಚನೆಮಾಡಬಹುದು. ಆದುದರಿಂದ ಈ ದೇಶಾಭಿವೃದ್ಧಿಗೆ ಅನುಕೂಲವಾದಂಥ ಈ ಬಾಬಿಗೆ ಕೊನೆಯಪಕ್ಷ ತಾವು ಒಂದು ಸ್ಕೀಮು ಹಾಕಿಕೊಂಡು ಈ 15 ಸಾವಿರ ಕೆರೆಗಳನ್ನೂ 15 ವರ್ಷಗಳಲ್ಲಿಲ್ಲದಿದ್ದರೆ 30 ವರ್ಷಗಳಲ್ಲಾದರೂ ರಿಪೇರಿ ಮಾಡಿಸತೇಬೇಕು. ಆದರೆ ತಾವು ಈ ಬಾಬಿಗೆ ಈಗ ಒದಗಿಸಿರತಕ್ಕ 15 ಲಕ್ಷ ರೂಪಾಯಿಗಳ ನಿಧಿ ಎಳ್ಳಷ್ಟೂ ಸಾಲದು. ಇದನ್ನು ಇನ್ನೂ ಹೆಚ್ಚಿಸಬೇಕೆಂದು ಹೇಳುತ್ತೇನೆ. ಇನ್ನು ಈ ಅಸಿಸ್ಟೆಂಟ್ ಇಂಜಿನಿಯರುಗಳ ನೇಮಕದ ವಿಚಾರ . . . .

Mr. SPEAKER.—I have no objection if the Hon'ble Member speaks of the capabilities of the Engineers, but not about the entertainment of Probationers as such.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರದವರು ಈಗ ಸಭೆಯಮುಂದೆ ಮಂಡಿಸಿರತಕ್ಕ ಮನವಿಗಳನ್ನು ಅನುಮೋದಿಸುತ್ತ ಒಂದೆರಡು ವಿಷಯಗಳ ಕಡೆಗೆ ಸರ್ಕಾರದವರ ಗಮನವನ್ನು ಸೆಳೆಯಲಿಚ್ಛಿಸುತ್ತೇನೆ.

ನಮ್ಮ ಮಲೆನಾಡಿನಲ್ಲಿ ಅದರಲ್ಲೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಹಿಂದಿನ ವರ್ಷ ಅತಿವೃಷ್ಟಿಯಾಗಿ ಅಲ್ಲಿ ಹಿಂದೆ ಕಟ್ಟಿಸಲಾಗಿದ್ದ ಅನೇಕ ಕೆರೆಗಳ ಏರಿಗಳು, ಕೋಡಿ, ತೂಬುಗಳು ಇತ್ಯಾದಿಗಳೆಲ್ಲಾ ಒಡೆದು ಹೋಗಿರುತ್ತವೆ. ಈ ರೀತಿ ಒಡೆದು ಹೋಗಿರತಕ್ಕಂಥಾ ಕೆರೆಗಳನ್ನು ಬೇಗ ದುರಸ್ತಿ ಮಾಡಿಕೊಡಿ ಎಂಬುದಾಗಿ ಅಲ್ಲಿಯ ರೈತರು ಅಲ್ಲಿರತಕ್ಕ ಇಂಜಿನಿಯರಿಂಗ್ ಇಲಾಖೆಯ ಎಗ್ಸಿಕ್ಯುಟೀವ್ ಇಂಜಿನಿಯರಿಗೆ ಅರ್ಜಿ ಗುಜರಾಯಿಸಿಕೊಂಡರು. ಅದಕ್ಕೆ ಉತ್ತರವಾಗಿ ಅವರು ನೀವು ಈ ಅರ್ಜಿಗಳನ್ನೆಲ್ಲಾ ನೇರವಾಗಿ ಮಂತ್ರಿಗಳಿಗೇ ಕೊಟ್ಟು ಅಲ್ಲಿಂದ ಇವುಗಳ ರಿಪೇರಿ ಬಗ್ಗೆ ಮಂಜೂರಾತಿಯನ್ನು ಪಡೆದುಕೊಂಡು ಬಂದ ಪಕ್ಷದಲ್ಲಿ ಆಗ ನಾವು ಈ ಕಾರ್ಯಗಳನ್ನು ಕೈಗೊಳ್ಳಬಹುದೇ ಹೊರತು, ಈಗ ಸದ್ಯಕ್ಕೆ ನಮ್ಮಲ್ಲಿ ಯಾವ ಹಣವೂ ಇರುವುದಿಲ್ಲ. ಆದುದರಿಂದ ನಾವು ಈ ಕೆಲಸಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ ಎಂದು ತಿಳಿಸುತ್ತಿದ್ದಾರೆ. ಹೀಗೆ ರೈತರಿಗೆ ನೇರವಾಗಿ ಮಂತ್ರಿಗಳಿಗೇ ಅರ್ಜಿ ಬರೆದುಕೊಂಡು ಅವರ ಕೆರೆಗಳನ್ನು ದುರಸ್ತಿಮಾಡಿಕೊಳ್ಳುವಷ್ಟು ಚೈತನ್ಯವಿದ್ದಿದ್ದರೆ ಇವರು ಇರಬೇಕಾದ ಅವಶ್ಯಕತೆ ಏನಿತ್ತೋ ಅದು ನನಗೆ ಗೊತ್ತಾಗುತ್ತಿಲ್ಲ. ಆ ರೀತಿಯಾಗಿ ಅವರಲ್ಲಿ ಹಣವಿಲ್ಲದಿದ್ದರೆ ಅವರು ಇಷ್ಟು ಕೆಲಸಗಳನ್ನು ಇಲ್ಲಿ ನಡೆಸಬೇಕಾಗಿದೆ. ಅದಕ್ಕೆಲ್ಲಾ ಇಷ್ಟು ಹಣ ಬೇಕಾಗುತ್ತದೆ ಎಂದು ಸರ್ಕಾರಕ್ಕೆ ಒಂದು ವರದಿ ಕಳುಹಿಸಿ, ಅವರು ಶಿಫಾರ್ಸುಮಾಡಿ ಹಣವನ್ನು ಬರುಮಾಡಿಕೊಳ್ಳಬೇಕಾದುದು ಅವರ ಕರ್ತವ್ಯ. ಆ ಮಲೆನಾಡಿನಲ್ಲಿ ಯಾವತ್ತೂ ಈ ಅತಿವೃಷ್ಟಿ ಎನ್ನುವುದು ಇದ್ದದ್ದೇ. ಈ ವಿಚಾರ ನಮ್ಮ ಅಧ್ಯಕ್ಷರಿಗೂ ಚೆನ್ನಾಗಿ ಗೊತ್ತಿದೆ. ಹಾಗೆ ಇಲಾಖೆಯವರಲ್ಲಿ ಹಣವಿಲ್ಲದಿದ್ದರೆ ಅವರು ಸರ್ಕಾರಕ್ಕೆ ಬರೆದು ತರಿಸಿಕೊಳ್ಳಬೇಕು. ರೈತರಿಗೆ ಅನುಕೂಲ ಕಲ್ಪಿಸುವುದಕ್ಕಾಗಿಯೇ ಇವರು ಇರುವುದು. ಈ ರೀತಿ ಸರ್ಕಾರದವರು ಮಲೆನಾಡಿನವರಿಗೊಂದು ವಿಶೇಷ ರಿಯಾಯಿತಿ ತೋರಿಸದೆ ಹೋದರೆ ದೇಶದಲ್ಲಿ ಮುಂದಕ್ಕೆ ಪುನಃ ಈ ಆಹಾರದ ಕೊರತೆ ತಲೆದೋರಬಹುದು. ಆದಕಾರಣ ತಾವು ಮಲೆನಾಡು ಕೆರೆಗಳ ಅಭಿವೃದ್ಧಿಗಾಗಿ ಜಾಸ್ತಿ ಹಣವನ್ನೊದಗಿಸಬೇಕೆಂದು ಹೇಳುತ್ತೇನೆ. ಏರಿ ಎತ್ತರಿಸುವುದಕ್ಕೂ, ಕೋಡಿ ರಿಪೇರಿಗೂ ಈಗ ಹಣವನ್ನು ವಿಶೇಷವಾಗಿ ಖರ್ಚುಮಾಡುತ್ತಿದ್ದಾರೆ. ಆದರೆ ಹೂಳು ತೆಗೆಸುವುದಕ್ಕೆ ಹಣವನ್ನು ಅಷ್ಟಾಗಿ ಖರ್ಚುಮಾಡುತ್ತಿಲ್ಲ. ಭಾರಿ ಜಲಾಶಯಗಳ ವಿಚಾರ ಹಾಗಿರಲಿ. ಆದರೆ ನಮ್ಮ ಚಿಕ್ಕಮಗಳೂರು ಜಿಲ್ಲೆಯನ್ನು ಅಲ್ಲಿಯ ಜನರು ತಬ್ಬಲಿ-ಜಿಲ್ಲೆ ಎಂದು ಹೇಳುತ್ತಿದ್ದಾರೆ. ಆ ಜಿಲ್ಲೆಗೊಂದು ಭಾರಿ ಜಲಾಶಯವಿಲ್ಲ. ಯಾವ ವಿಚಾರದಲ್ಲೂ ಆ ಜಿಲ್ಲೆಯ ಬಗ್ಗೆ ತಿರಸ್ಕಾರ ಭಾವನೆಯನ್ನು ತೋರಿಸುತ್ತಿದ್ದಾರೆಂಬುದಾಗಿ ಆ ಜನರಲ್ಲೊಂದು ಭಾವನೆ ಹುಟ್ಟಿದೆ. ಆದರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ನೀರಿನ ಸೌಕರ್ಯ ಯಥೇಷ್ಟವಾಗಿದೆ. ಚಿಕ್ಕಮಗಳೂರು ಸಮೀಪದಲ್ಲೇ ಹೊನ್ನಮ್ಮನಹಳ್ಳ ಎಂದು ಇದೆ. ನದಿಯ ನೀರೆಲ್ಲ ಈ ದಿವಸ ವೃಥಾ ಪೋಲಾಗಿ ಹೋಗುತ್ತಿದೆ. ಅಲ್ಲಿ ಒಂದು ಜಲಾಶಯವನ್ನು ನಿರ್ಮಾಣಮಾಡಬೇಕೆಂದು ಜನರು ಬಹಳ ವರ್ಷಗಳಿಂದಲೂ ಕೇಳಿಕೊಳ್ಳುತ್ತಿದ್ದಾರೆ. ಅಲ್ಲಿ ಒಂದು ಜಲಾಶಯವನ್ನು ನಿರ್ಮಾಣಮಾಡಿದರೆ ಸಾವಿರಾರು ಎಕರೆ ಜಮೀನು ತರಿ ಸಾಗುವಳಿಗೆ ಬರುತ್ತದೆ. ಇದೇ ರೀತಿ ಆ ಚಿಕ್ಕಮಗಳೂರು ಸಮೀಪದಲ್ಲೇ ಒಂದು ಲಕ್ಯ ಹೋಬಳಿ ಎಂದು ಇದೆ. ಅದಕ್ಕೆ ಏನೇನೂ ನೀರಿನ ಆಶ್ರಯವಿಲ್ಲ. ಅಲ್ಲೆಲ್ಲಾ ಬರಿ ಖುಷ್ಕಿ ಜಮೀನಿರುತ್ತದೆ. ಆ ಹೋಬಳಿಗೊಂದು ಜಲಾಶಯದ ಏರ್ಪಾಡುಮಾಡಿಕೊಡಬೇಕೆಂದು ಬಾಗುಮನೆ ಶ್ರೀ ದೇವೇಗೌಡರು ಸುಮಾರು 20-30 ವರ್ಷಗಳಿಂದ ಕೇಳುತ್ತಲೆ ಇದ್ದಾರೆ. ಹಾಗೆ ಅಲ್ಲಿ ಯಾವ ಜಲಾಶಯವನ್ನೂ ನಿರ್ಮಾಣಮಾಡುವುದಕ್ಕೆ ಸಾಧ್ಯವಿಲ್ಲವೆಂಬುದಾಗಿ ಕಂಡುಬಂದ ಪಕ್ಷದಲ್ಲಿ ಅಯ್ಯನಕೆರೆಯಿಂದಲಾದರೂ ಅಲ್ಲಿಗೆ ಒಂದು ನಾಲೆಯ ಮೂಲಕ ನೀರನ್ನೊದಗಿಸಿಕೊಡಿ ಎಂದು ಅಂಗಲಾಚಿ ಕೇಳಿಕೊಳ್ಳುತ್ತಿದ್ದಾರೆ. ಆದರೂ ಅಲ್ಲಿಯ ಜನರ ಕುಂದುಕೊರತೆಗಳನ್ನು ನಿವಾರಣೆ ಮಾಡಲು ಸರ್ಕಾರ ಈವರೆಗೆ ಯಾವ ಪ್ರಯತ್ನಗಳನ್ನೂ ಮಾಡಿಲ್ಲ. ಸರ್ಕಾರದವರು ಈ ರೀತಿಯ ಮನೋಭಾವನೆ ತಾಳಿದರೆ ಜನರು ನಿರಾಶರಾಗುತ್ತಾರೆ. ದೇಶದ ಅಭಿವೃದ್ಧಿಗೆ ಬಹಳ ಅಡಚಣೆಯುಂಟಾಗುತ್ತದೆ. ಈ ದಿವಸ ನಾವೆಲ್ಲರೂ ಸ್ವಾತಂತ್ರ ಭಾರತದಲ್ಲಿದ್ದೇವೆ. ಎಲ್ಲರಿಗೂ ಒಂದು ಸಮಾನಾವಕಾಶದ ಹಕ್ಕಿದೆ. ಇದಕ್ಕನುಸಾರವಾಗಿ ತಾವು ಇತರ ಕಡೆಗಳಿಗೆ ಅನುಕೂಲಗಳನ್ನು ಕಲ್ಪಿಸಿಕೊಡುತ್ತಿರುವಂತೆ ಇಲ್ಲಿಗೂ ಕಲ್ಪಿಸಿಕೊಡಬೇಕಾದ್ದು ಆದ್ಯ ಕರ್ತವ್ಯ. ಆದರೆ ಮಲೆನಾಡಿಗೆ ಎಲ್ಲ ಪ್ರದೇಶಕ್ಕಿಂತಲೂ ಹೆಚ್ಚು ರಕ್ಷಣೆಯನ್ನು ಕೊಡಬೇಕಾಗಿದೆ. ಈ ಪ್ರದೇಶದಲ್ಲಿ ನೀರಿನ ಅನುಕೂಲ ಹೆಚ್ಚಾಗಿದೆ. ಈ ಪ್ರದೇಶವನ್ನು ಉತ್ತಮ ಸ್ಥಿತಿಗೆ ಬೇಗ ತರುವಂಥ ಅವಕಾಶವಿದೆ. ಸರ್ಕಾರದವರು ಈಗಲಾದರೂ ನಾನು ಹೇಳತಕ್ಕಂಥಾ ಹೊನ್ನಮ್ಮನ ಹಳ್ಳದ ವಿಚಾರದಲ್ಲಿ ಸರಿಯಾದ ತನಿಖೆ ನಡೆಸಿ ಜನರಿಗೆ ಉಪಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಲೆನಾಡಿನಲ್ಲಿ ಅನೇಕ ಕೆರೆಗಳು ಒಡೆದುಹೋಗಿವೆ. ಅವುಗಳನ್ನು

(ಶ್ರೀ ಜಿ. ಪುಟ್ಟಸ್ವಾಮಿ)

ಜೀರ್ಣೋದ್ಧಾರಗೊಳಿಸಲು ತಾವು ಹೆಚ್ಚು ಹೆಚ್ಚು ಹಣವನ್ನೊದಗಿಸಬೇಕೆಂದೂ ತಿಳಿಸಿ ಕೇಳುತ್ತೇನೆ. ಹಾಗೆಯೆ ಚಿಕ್ಕಮಗಳೂರು ತಾಲ್ಲೂಕ್ ಲಕ್ಯ ಹೋಬಳಿ ಈಶ್ವರಳ್ಳಿಗೆ ನಾಲೆಯನ್ನು ಏರ್ಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಈಗಾಗಲೇ ಅನೇಕ ಮಾನ್ಯ ಸದಸ್ಯರು ಮಾತನಾಡಿರುತ್ತಾರೆ. ಇವರಾದರೂ ಹಾಗೆ ಮಾತನಾಡುತ್ತ ಈ ದಿವಸ ಅನೇಕ ಕೆರೆಗಳು ರಿಪೇರಿ ಆಗದೆ ಹಾಗೆ ನಿಂತಿರುತ್ತವೆಂದೂ, ಮತ್ತೆ ಅನೇಕ ಕೆರೆಗಳಲ್ಲಿ ಹೂಳು ತೆಗೆಯುವ ಕೆಲಸ ನಡೆದಿಲ್ಲವೆಂಬ ಅಂಶಗಳನ್ನೇ ತಿಳಿಸಿದ್ದಾರೆ. ಹೀಗೆ ಈ ರಿಪೇರಿ ಮತ್ತು ಹೂಳು ತೆಗೆಸುವ ಕೆಲಸ ಕಾರ್ಯಗಳು ಮುಲ್ಕಿ ಬೀಳುತ್ತಿರುವುದನ್ನು ನೋಡಿದರೆ ಈ ಇಂಜಿನಿಯರಿಂಗ್ ಇಲಾಖೆಯಲ್ಲಿ ಈ ದಿವಸ ಸಾಕಷ್ಟು ಸಿಬ್ಬಂದಿಯಿಲ್ಲವೆಂಬುದು ಕಂಡುಬರುತ್ತಿದೆ. ಈ ಕೆರೆಗಳನ್ನು ಸರ್ವೆ ಮಾಡಲು ಸಾಕಷ್ಟು ಟೆಕ್ನಿಕಲ್ ಸಿಬ್ಬಂದಿಯಿರುವುದಿಲ್ಲ. ಈಗಿರತಕ್ಕ ಶಿಬ್ಬಂದಿ ಸಾಲದು. ಈಗಿರತಕ್ಕ ಸಿಬ್ಬಂದಿಯೇ ಈ ಎಲ್ಲ ಕೆರೆಗಳನ್ನೂ ತಿರುಗಿಕೊಂಡು ಸರ್ವೆ ಮಾಡಿ ಅನಂತರ ಅವುಗಳ ಬಗ್ಗೆ ಅಂದಾಜುಗಳನ್ನು ತಯಾರಿಸಲ ಅವರಿಗೆ ಕಾಲವಿಲ್ಲ. ಆದರೆ ನಮ್ಮ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಕೆಲಸಮಾಡುತ್ತಿರುವ ಇಂಜಿನಿಯರಿಂಗ್ ಇಲಾಖೆ ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿದೆ. ಈಗಿರತಕ್ಕಂಥ ಚೀಫ್ ಇಂಜಿನಿಯರೂ, ಸೂಪರಿಂಟೆಂಡೆಂಟ್ ಇಂಜಿನಿಯರೂ ಮತ್ತು ಬೆಂಗಳೂರು ಎಗ್ಸಿಕ್ಯುಟೀವ್ ಇಂಜಿನಿಯರೂ ಬಹಳ ಕೆಲಸಗಳನ್ನು ಶ್ರದ್ಧೆವಹಿಸಿ ಒಂದು ಶಿಸ್ತಿನಿಂದ ನಡೆಸಿಕೊಂಡು ಬರುತ್ತಿದ್ದಾರೆ. ತತ್ರಾಪಿ ನಮ್ಮ ಬೆಂಗಳೂರು ಜಿಲ್ಲೆಯ ಇಂಜಿನಿಯರ್ ಅವರು ಹಗಲೂ ರಾತ್ರಿ ಸಂಚಾರ ಮಾಡಿ ಎಲ್ಲೆಲ್ಲಿ ಏನೇನು ಕೆಲಸಗಳು ನಡೆಯಬೇಕೆಂಬುದನ್ನು ನೋಡಿ ಅದಕ್ಕನುಸಾರವಾಗಿ ಕೆಲಸ ನಡೆಸುತ್ತಿದ್ದಾರೆ. ಆದರೆ ಎಸ್ಟಿಮೇಟ್, ಸರ್ವೆ ಇತ್ಯಾದಿ ಕೆಲಸಗಳನ್ನು ಸರಿಯಾಗಿ ಸ್ಕ್ರೂಟಿನಿ ಮಾಡಿ ಕೆಲಸವನ್ನು ಮುಂದುವರಿಸಲು ತಕ್ಕಷ್ಟು ಟೆಕ್ನಿಕಲ್ ಸಿಬ್ಬಂದಿಯಿಲ್ಲದೆ ಈ ಕೆಲಸಗಳು ಈ ದಿವಸ ಬಹಳವಾಗಿ ಮೂಲೆಗೆ ಬೀಳಲು ಕಾರಣವಾಗುತ್ತಿದೆ. ನಮ್ಮ ಬೆಂಗಳೂರು ಡಿವಿಜನ್‌ನಲ್ಲಿ ಒಂದು ಡ್ರಾಫ್ಟ್ಸ್‌ಮನ್ ಬ್ರಾಂಚ್ ಇದೆ. ಆದರೆ ಅಲ್ಲಿ ಸಾಕಷ್ಟು ಡ್ರಾಫ್ಟ್ಸ್‌ಮನ್‌ಗಳಿಲ್ಲ. ಪ್ಲಾನುಗಳನ್ನು ಸ್ಕ್ರೂಟಿನಿ ಮಾಡತಕ್ಕಂಥ ಸಬ್ ಓವರ್‌ಸೀಯರುಗಳಿಲ್ಲ. ಹೀಗಾಗಿ ತಯಾರಿಸಿದ ಎಸ್ಟಿಮೇಟುಗಳನ್ನು ಸ್ಕ್ರೂಟಿನಿ ಮಾಡುವುದು ತಡವಾಗುತ್ತಿರುವುದರಿಂದ ಈ ಹಣ ಬಹಳವಾಗಿ ಲ್ಯಾಪ್ಸ್ ಆಗುವುದಕ್ಕೆ ಕಾರಣವಾಗಿದೆ. ಅದಕ್ಕೋಸ್ಕರವಾಗಿ ಇಲ್ಲಿಗೆ ಒಂದು ವರ್ಷಕ್ಕೆ ಮುಂಚೆ ಸಬ್-ಓವರ್‌ಸೀಯರ್ಸ್‌ಗಳು ಯಾರು ಯಾರು ರಿಟೈರಾಗಿದ್ದಾರೋ ಅಂಥವರನ್ನು ಪುನಃ ಸರ್ವೀಸಿಗೆ ತೆಗೆದುಕೊಂಡು ಈ ಮುಲ್ಕಿ ನಿಂತಿರತಕ್ಕಂಥ ಅಂದಾಜುಗಳನ್ನೆಲ್ಲಾ ಸ್ಕ್ರೂಟಿನಿ ಮಾಡಿಸಿದರೆ ಅವು ಬೇಗ ಮಂಜೂರಾಗಲು ಒಂದು ಅವಕಾಶ ಸಿಕ್ಕಬಹುದೆಂದು ನಾನು ತಮಗೆ ಈ ಸಂದರ್ಭದಲ್ಲಿ ಈ ಒಂದು ಸಲಹೆಮಾಡುತ್ತೇನೆ.

ಇನ್ನು ಕೆಲವು ಹಳ್ಳಿಗಳಲ್ಲಿ ಕೆರೆಗಳಿಗೆ ತೂಬು, ಕೋಡಿ ಇತ್ಯಾದಿ ಬಾಬುಗಳ ರಿಪೇರಿ ಕೆಲಸ ಆಗಬೇಕಾಗಿದೆ. ಇದಕ್ಕಾಗಿ ಈ ದಿವಸ ಆ ರೆವಿನ್ಯೂ ಇಲಾಖೆಗೂ ಮತ್ತು P.W.D. ಇಲಾಖೆಗೂ ಪತ್ರ ವ್ಯವಹಾರ ಮಾತ್ರ ವಿಶೇಷವಾಗಿ ನಡೆಯುತ್ತಿದೆ. ಆದರೆ ಕೆಲಸ ಮಾತ್ರ ನಡೆಯುತ್ತಿಲ್ಲ. . ಇದಕ್ಕಾಗಿಯೇ ನಾನು ಆ ಸಿಬ್ಬಂದಿಯನ್ನು ಹೆಚ್ಚುಮಾಡಬೇಕೆಂದು ಹೇಳುತ್ತಿದ್ದೇನೆ. ಇನ್ನು ಬೆಟ್ಟಕೋಟೆ ಕೆರೆ ಕಾಲುವೆ ಸಂಪೂರ್ಣವಾಗಿ ಮುಚ್ಚಿಹೋಗಿದೆ.. ಅನೇಕ ವರ್ಷಗಳಿಂದ ನಾಲೆಯ.ಕಾಂಗಾರಿಯೇ ನಡೆದಿಲ್ಲ. ನಾಲೆಯ ಪ್ರದೇಶವನ್ನೆಲ್ಲಾ ಜನರು ಸಾಗುವಳಿಗೆ ಆಕ್ರಮಿಸಿಕೊಂಡು ಬಿಟ್ಟಿದ್ದಾರೆ. ಈ ವಿಚಾರವನ್ನು ಪರಾಂಬರಿಸಲು ಸಾಕಷ್ಟು ಸಿಬ್ಬಂದಿ ಇಲ್ಲದ್ದರಿಂದ ಈ ಕಾಲುವೆ ಕಾಮಗಾರಿ ನಡೆಯದೆ ಇದ್ದುದರಿಂದ ಈ ದಿವಸ ಅಲ್ಲಿ ಈ ಕಾಲುವೆಯೇ ಇಲ್ಲದೋಪಾದಿಯಲ್ಲಿ ಮುಚ್ಚಿಹೋಗಿದೆ. ಆ ಕೆರೆಯ ನೀರೆಲ್ಲಾ ಬೇರೆ ರೈತರ ಸಾಗುವಳಿ ಜಮೀನಿನಮೇಲೆ ನುಗ್ಗಿ ಹರಿಯುತ್ತಿದೆ. ಈ ವಿಚಾರಕ್ಕೆ ಸರ್ಕಾರದವರು ಕೂಡಲೆ ಗಮನಕೊಡಬೇಕೆಂದು ಕೋರುತ್ತೇನೆ. ಇದೇ ರೀತಿಯಾಗಿ ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಕಸಬಾ ಹೋಬಳಿಯಲ್ಲಿ ತಳಗುವಾರ ಕೆರೆಯ ಕೋಡಿ ಒಡೆದುಹೋಗಿದೆ. ಈ ಕೆರೆಯ ಕೋಡಿಯನ್ನು ಎತ್ತರಿಸಿ ಇದನ್ನು ಕೂಡಲೆ ಜೀರ್ಣೋದ್ಧಾರ ಮಾಡುವುದಕ್ಕೆ ಪ್ರಯತ್ನಮಾಡಬೇಕು. ಇನ್ನು ಜಿ.ಎಂ.ಎಫ್. ಯೋಜನೆಯ ಸಂಬಂಧದಲ್ಲಿ ಅನೇಕ ಕೆರೆ ಅಂಗಳಗಳನ್ನು ಸಾಗುವಳಿಗೆ ಕೊಡಲಾಗಿತ್ತು. ಹೀಗೆ ಹಂಗಾಮಿ ಸಾಗುವಳಿಗೆ ಕೊಟ್ಟಿದ್ದ ಜಮೀನನ್ನು ಆ ರೈತರು ಸಾಗುವಳಿ ಮಾಡುತ್ತಿರುವುದರಿಂದ ಕೆರೆಯಲ್ಲಿ ಬೇಗ ಹೂಳು ತೂಬು ತುಂಬಿಕೊಳ್ಳಲು ಅವಕಾಶವಾಗಿರುತ್ತದೆ. ಆದುದರಿಂದ ಹೀಗೆ ಹಂಗಾಮಿ ಸಾಗುವಳಿಗೆ ಕೊಡಲಾಗಿದ್ದಂಥ ಕೆರೆ ಅಂಗಳಗಳನ್ನೆಲ್ಲಾ ಕೂಡಲೆ ಸರ್ಕಾರದವರು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ

ಕೆರೆ ಕೋಡಿಯನ್ನು ಎತ್ತರಿಸಿ, ಮೆಕ್ಕಲು ಮಣ್ಣನ್ನು ತೆಗೆಸಬೇಕೆಂದು ಹೇಳುತ್ತೇನೆ.

ದೇವನಹಳ್ಳಿ ತಟ್ಟಮಾಚನ ಹಳ್ಳಿ ಕೆರೆಗೆ ಫೀಡರ್ ಚಾನಲ್ ಮಾಡಿಸಬೇಕೆಂದು ಹತ್ತಾರು ವರ್ಷಗಳಿಂದ ಕೇಳುತ್ತಾ ಇದ್ದಾರೆ. ಸರ್ವೇ ನಡೆದಿಲ್ಲ. ಈ ಬಗ್ಗೆ ಇಲಾಖೆಯವರಿಗೆ ಎಚ್ಚರಿಕೆ ಕೊಟ್ಟು ಜಾಗ್ರತೆ ಕೆಲಸ ಮಾಡಿಸಬೇಕಾಗಿ ಹೇಳುತ್ತೇನೆ.

ಕುಂದಾಣ ಹೋಬಳಿಯ ಸೋಲೂರು ಕೆರೆಗೆ ಬೇಕಾದಷ್ಟು ರಿಪೇರಿ, ಕೆಲಸ ಮಾಡಿಸಬೇಕಾಗಿದೆ. ಈ ಸಂಬಂಧವಾಗಿ ಎಷ್ಟೇ ಅರ್ಜಿಗಳನ್ನು ಹಾಕಿದರೂ ಕೂಡ ಅವೆಲ್ಲಾ ರೆಕಾರ್ಡ್ ರೂಪದಲ್ಲಿ ಇದೆಯೇ ಹೊರತು ಯಾವ ಕೆಲಸವೂ ಕೂಡ ಕಾರ್ಯತಃ ಜರುಗುತ್ತಾ ಇಲ್ಲ. ಪತ್ರವ್ಯವಹಾರ ಕಡಮೆ ಮಾಡಿ ಕೆಲಸ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ಬಗ್ಗೆ ಪರಿಶೀಲನೆ ಮಾಡಲು ಒಂದು ಸಮಿತಿಯನ್ನಾದರೂ ನೇಮಕ ಮಾಡಬೇಕೆಂದು ಹೇಳುತ್ತೇನೆ.

ಬೆಂಗಳೂರು ಉತ್ತರ ತಾಲ್ಲೂಕು, ದೇವನಹಳ್ಳಿ ತಾಲ್ಲೂಕುಗಳಲ್ಲಿ ಇನಾಂತಿ ಗ್ರಾಮಗಳು ಇವೆ. ಅಲ್ಲಿ ಜನಗಳಿಗೆ ಇನಾಂದಾರರು ಬಹಳ ತೊಂದರೆ ಕೊಡುತ್ತಾ ಇದ್ದಾರೆ. ಆದಷ್ಟು ಜಾಗ್ರತೆ ಸರ್ವೇ ಮಾಡಿಸಿ ಭೂಮಿಯನ್ನು ಸರಿಯಾಗಿ ಹಂಚಿಕೆ ಮಾಡಬೇಕು.

ಯಶವಂತಪುರದ ಹೋಬಳಿ ಕಾಮಾಕ್ಷಿ ಪಾಳ್ಯದ ಹತ್ತಿರ ನೀರು ಯಾವಾಗಲೂ ಹರಿದು ಹೋಗುತ್ತದೆ. ಅಲ್ಲಿ ಒಂದು ಸಣ್ಣ ಕಟ್ಟೆ ಹಾಕಿಕೊಟ್ಟರೆ, ಅದರ ಹಿಂದೆ 120 ಎಕರೆಯಷ್ಟು ವ್ಯವಸಾಯದ ನೀರಾವರಿಯಾಗುತ್ತದೆ. ಆದ್ದರಿಂದ ಈ ಕೆಲಸವನ್ನು ದಯವಿಟ್ಟು ನೆರವೇರಿಸಿಕೊಡಬೇಕೆಂದು ಹೇಳುತ್ತೇನೆ.

ನಾಗವಾರ ಬೆಂಗಳೂರು ಕಸಬಾ ಹೋಬಳಿಯಲ್ಲಿ ಟ್ಯಾನರಿ ಕೆಲಸ ನಡೆಯುತ್ತಾ ಇದೆ. ಚರ್ಮ ಹದ ಮಾಡುವವರು ವಿಪರೀತವಾಗಿ ಉಪ್ಪನ್ನು ಉಪಯೋ

ಗಿಸಿ ಚರ್ಮ ಹದ ಮಾಡುತ್ತಾರೆ. ಚರ್ಮವನ್ನು ಶುಚಿ ಮಾಡುವುದಕ್ಕೆ ಉಪಯೋಗಿಸಿದ ನೀರನ್ನೆಲ್ಲಾ ನಾಗವಾರ ಕೆರೆಗೆ ಬಿಡುತ್ತಾರೆ. ಈ ರೀತಿಯಾಗಿ ಅಲ್ಲಿ ರೊಚ್ಚು, ಧುರ್ವಾಸನೆ ವಿಪರೀತವಾಗಿದೆ. ಅದೂ ಅಲ್ಲದೆ ಭೂಮಿಯೆಲ್ಲಾ ಚೌಳು ಹಿಡಿದು ಭೂಮಿಯಲ್ಲಿ ಸಾರ ಇಲ್ಲದೆ ಬೆಳೆಯಲ್ಲಾ ಹೋಗಿ ರೈತರಿಗೆ ಬಹಳ ತೊಂದರೆಯಾಗಿದೆ. ಆ ನೀರನ್ನು ಇನ್ನೊಂದು ಕಡೆಗೆ ತಿರುಗಿಸಬೇಕು ಇಲ್ಲದೇ ಇದ್ದರೆ ಅಲ್ಲಿನ ಭೂಮಿಯೆಲ್ಲಾ ಉಪ್ಪು ತಿಂದು ಹೋಗಿರುವುದರಿಂದ ಕಂದಾಯವನ್ನು ಬಹುಮಟ್ಟಿಗೆ ಕಡಿಮೆ ಮಾಡಿಕೊಡಬೇಕೆಂದು ಹೇಳುತ್ತೇನೆ.

* Sri H. C. LINGA REDDY (Malur).–I wish to speak only with regard to major tanks and compensation that is provided for being paid to landholders. With regard to tanks, I had put a question about major tanks, that is, under Demand No. 39A, in Malur Taluk. Unfortunately I was not present at the time to put supplementaries. The answer given was that the number of major tanks in Malur Taluk is 40 and the number that required repairs is 35 and the number of tanks that were repaired in the last three years is five. If this should be the state of affairs, I am afraid that something is wrong with the P. W. Department. If this should be the case with regard to major tanks, the position about minor tanks is worse. Though representations have been made on a number of occasions to the Government that the repair of these tanks has to be undertaken on a planned basis, for one reason or other, there is a good deal of delay and the repair of these tanks has not been attended to. I request the Government to take speedy steps and have these tanks repaired. After all, the availability of a very good tank to a village is an important factor. If there is water in the tank there will be water in the wells and the people of the village will be in a position to get paddy and ragi and also can grow vegetable and all that in the village. Therefore, though we have been demanding that the repairs of these major and minor tanks have to be undertaken on a planned basis, Government have not been in a position to give attention to it. It is very necessary that a survey is made of all the tanks, both major and minor and sufficient amount is provided for it. I find from the budget proposals that last year Rs. 19 lakhs had been spent and for this year only Rs. 14 lakhs. I think it is necessary to find out how many tanks require repairs and suitably the provision has to be enhanced.

About compensation to be paid to landholders, only Rs. 5,000 has been provided for it. I do not know whether this is a token provision or whether the Government will be in a position to put into force the Inams Abolition Acts, concerning Personal as well as Religious inams. To a question put by my friend Sri Papanna the answer given is that it is likely that it may take five years to put into force the Inam Abolition Acts. There was an agitation and a committee was appointed. It made a report and even the previous Government had brought forward a Bill and it was about to be passed ; but later we passed the Bill and the Bill got stuck up with the India Government and only a year ago the President gave his consent and for the last one year it is pending with the Government. No action has been taken at all to put the Acts into force. What exactly is happening in the villages I am afraid the Government will not be in a position to know. Lands are being sold by the Inamdars to the raiyats at various rates. I request the Government to have survey and settlement introduced in the inam villages and put the two Acts into force. It is something like looking after the stables after the horse is stolen away. Just to bring to the notice of the Government the hardships of the tenants we agitated all these years that these two Acts should be put into force immedeiately. I am afraid the Government are not in a position to put these two Acts into practice and save the tenants from harassment. And sufficient compensation has not been provided at all in the Budget. I urge the Government to come to the rescue of the tenants by putting these two Acts into practice immediately.

11-30 A.M.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮೈಸೂರು ಸಂಸ್ಥಾನದಲ್ಲಿನ ಮೈನರ್ ಕೆರೆಗಳ ಜೀರ್ಣೋದ್ಧಾರದ ವಿಷಯದಲ್ಲಿ ಮಾನ್ಯ

(ಶ್ರೀ ಡಿ. ಎಂ. ಗೋವಿಂದರಾಜು.)

ಸ್ನೇಹಿತರನೇಕರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಮುಖ್ಯವಾಗಿ ಈಗ ನಮ್ಮ ದೇಶದಲ್ಲಿ ಎಷ್ಟರಮಟ್ಟಿನ ಕೆಲಸ ನಡೆದಿದೆ, ಇನ್ನೂ ಎಷ್ಟು ಕೆಲಸಗಳು ಆಗಬೇಕಾಗಿವೆಯೆಂಬುದನ್ನು ನೋಡಿದರೆ, ಈ ಇಲಾಖೆಯು ಕೆಲಸ ಬಹಳ ಆಶಾದಾಯಕವಾಗಿದೆ. ಆದರಲ್ಲೂಬೆಂಗಳೂರು, ತುಮಕೂರು ಮುಂತಾದ ಕೆಲವು ಡಿಸ್ಟ್ರಿಕ್ಟುಗಳು ಮಳೆಯ ನೀರಿನ ಆಧಾರದ ಮೇಲೆಯೇ ನಿಂತಿರುವುವುಗಳಾಗಿ ಅಲ್ಲಿನ ಕೆರೆಗಳಿಗೆ ನೀರು ಬಂದರೆ ಫಲ ಉಂಟು ಇಲ್ಲದಿದ್ದರೆ ಇಲ್ಲವಾಗಿದೆ. ಆದ್ದರಿಂದ ಈ ಡಿಸ್ಟ್ರಿಕ್ಟುಗಳ ಮೈನರ್ ಕೆರೆಗಳ ಜೀರ್ಣೋದ್ಧಾರದ ವಿಷಯದಲ್ಲಿ ಸರ್ಕಾರದವರು ಹೆಚ್ಚಿನ ನಿಗಾ ಕೊಡಬೇಕಾದದ್ದು ಅವರ ಮುಖ್ಯ ಕರ್ತವ್ಯವಾಗಿದೆ.

ಆಮೇಲೆ, ನಮ್ಮ ಮೈಸೂರು ದೇಶದಲ್ಲಿನ ಮೇಜರ್ ಕೆರೆಗಳ ಹಿಂದುಗಡೆ ನೀರಿನ ಸರಬರಾಯಿ ಒಂದು ವ್ಯವಸ್ಥಾರೂಪವಾಗಿ ನಡೆಯುತ್ತಿಲ್ಲ. ಹೀಗಾಗಿ leakageಗೆ ಅವಕಾಶವಾಗಿ ಒಂದು ವರ್ಷಕ್ಕೆ ಆಗುವಷ್ಟು ನೀರಿದ್ದರೂ ಅರ್ಧ ಬೆಳೆಗೂ ಕೂಡ ನೀರು ಒದಗುತ್ತಿಲ್ಲ. ಈ ಕಷ್ಟವನ್ನು ಪರಿಹರಿಸಬೇಕಾದರೆ ಎಲ್ಲಾ ಮೇಜರ್ ಕೆರೆಗಳಿಗೂ ಸರಿಯಾದ Nala systemನ್ನು ತರಬೇಕು. ಕೆರೆಗಳನ್ನು ರಿಪೇರಿಮಾಡುವುದು ಎಷ್ಟು ಮುಖ್ಯವೋ ಅದಕ್ಕಿಂತ ಹೆಚ್ಚಿಗೆ ಒಳ್ಳೆಯ ನಾಲಾ ಪದ್ಧತಿಯನ್ನು ತರುವುದೂ ಅಷ್ಟೇ ಮುಖ್ಯವೆಂದು ಹೇಳುತ್ತೇನೆ.

ಹೊಸದಾಗಿ ಕೆರೆಗಳನ್ನು ನಿರ್ಮಾಣ ಮಾಡುವ ಕೆಲಸವೂ ಬಹಳವಾಗಿ ಆಗಬೇಕಾಗಿದೆ. ಎಷ್ಟೋಕಡೆ ಅಕ್ಕಿಯನ್ನು ನೋಡುವುದೇ ಕಷ್ಟವಾಗಿದೆ. ಆದ್ದರಿಂದ ಕೆರೆಗಳನ್ನು ಹೊಸದಾಗಿ ತೆಗೆದುಕೊಳ್ಳುವುದರಲ್ಲಿ ಇಷ್ಟೇ ಶೇಕಡವಾರು ಆದಾಯ ಬರುತ್ತಿರಬೇಕೆಂದು ನಿಗದಿ ಮಾಡದೆ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆ. ಜನರ ಕಷ್ಟವನ್ನು ನೋಡಿ ಕೆರೆಗಳೇ ಯಾವುದೂ ಇಲ್ಲದಿರುವ ಭಾಗಗಳಲ್ಲಿ ಉದಾರವಾಗಿ ಕೆರೆಗಳನ್ನು ಕೊಡುವ ಮನೋಭಾವವನ್ನು ಸರ್ಕಾದರವರು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ಕಡೆ ನೆಲಮಂಗಲ, ಮಾಗಡಿ, ದೊಡ್ಡಬಳ್ಳಾಪುರ ತಾಲ್ಲೂಕುಗಳಲ್ಲಿ ಮಳೆ ಬಹಳ ಕಡಿಮೆಯಾಗಿದೆ. ಅಂಥ ಕಡೆಗಳಲ್ಲಿ ಮುಖ್ಯವಾಗಿ ಕೆರೆಗಳನ್ನು ರಿಪೇರಿಮಾಡುವುದನ್ನೂ ಹೊಸ ಕೆರೆಗಳನ್ನು ಕಟ್ಟುವುದನ್ನೂ ಕೈಕೊಳ್ಳಬೇಕಾಗಿದೆ. ಹಾಗೆ ರಿಪೇರಿಯಾಗಬೇಕಾಗಿರುವ ಕೆರೆಗಳಲ್ಲಿ ನಮ್ಮ ಕಡೆಯಲ್ಲಿ ನೆಲಮಂಗಲದ ತಾಲ್ಲೂಕು ಮದಗದ ಕೆರೆ ಒಂದಾಗಿದೆ. ಬಹಳ ಹಿಂದಿನ ಕಾಲದ ಕೆರೆ; ಒಡೆದು ಹೋಗಿ ಅನೇಕ ವರ್ಷಗಳಾಗಿವೆ. ಆ ಪ್ರಾಂತ್ಯದ ರೈತರು ಅದನ್ನು ಕಟ್ಟಿಸಿಕೊಡಬೇಕೆಂದು ಪದೇ ಪದೇ ಅರ್ಜಿ ಕೊಡುತ್ತಿದ್ದಾರೆ. ಈ ಸಭೆಯಲ್ಲಿಯೂ ಸಹ 20 ವರ್ಷಗಳಿಂದ ಚರ್ಚೆಯಾಗುತ್ತಿದೆ. ಇಷ್ಟು ದಿವಸಗಳಾದರೂ ಕಟ್ಟದೆ ಹಾಗೆಯೇ ನಿಂತಿದೆ. ಎಸ್ಟಿಮೇಟುಗಳನ್ನು ಮಾಡಿಸಿದೆಯೆಂದು ಹೇಳುತ್ತಾರೆ, ಮತ್ತೆ ಹಿಂದಕ್ಕೆ ತಳ್ಳುತ್ತಾರೆ. ಎಸ್ಟಿಮೇಟುಗಳನ್ನು ಮಂಜೂರು ಮಾಡುವುದರಲ್ಲಿ ಯಾವುದಾದರೊಂದು ತತ್ವವಿಟ್ಟುಕೊಂಡಿರಬೇಕು. ಈಗೇನಿದ್ದರೂ, ಎಸ್ಟಿಮೇಟ್ ಆದ ಮೇಲೆಯೂ ಯಾರಾದರೂ interested ಪಾರ್ಟಿಗಳವರು ಸರ್ಕಾರದವರಲ್ಲಿಗೆ ಹೋಗಿ ಪದೇ ಪದೇ ಒತ್ತಾಯ ಮಾಡಿದರೆ ಜಾಗ್ರತೆ ಮಂಜೂರಾಗುತ್ತದೆ, ಇಲ್ಲದಿದ್ದರೆ ಮಂಜೂರಾಗದೇ ಕೊಳೆಯುತ್ತಾ ಬಿದ್ದಿರುತ್ತದೆ ಮತ್ತು ವಾಪಸು ಹೊರಟು ಹೋಗುತ್ತದೆ. ಈಗಲಾದರೂ ನೆಲಮಂಗಲದ ತಾಲ್ಲೂಕಿನ ಮದಗದ ಕೆರೆಯ ಎಸ್ಟಿಮೇಟನ್ನು ಜಾಗ್ರತೆ ತರಿಸಿಕೊಂಡು ಈ ಸಾಲಿನ ಬಡ್ಜೆಟ್ಟಿನಲ್ಲಿ ಅದಕ್ಕೆ ಹಣವನ್ನು ಒದಗಿಸಿ ರೈತರಿಗೆ ಅನುಕೂಲಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದೇರೀತಿ ಮೊಸರಹಳ್ಳಿಯ ಪ್ರಾಜೆಕ್ಟು ಉಳಿದಿದೆ. ಹತ್ತಿಪ್ಪತ್ತು ವರುಷಗಳ ಹಿಂದೆಯೇ ಅದರ ಸರ್ವೆ ಆಗಿದೆ. ಈಗ ಆ ಎಸ್ಟಿಮೇಟಿನ ಗತಿಯೇನಾಯಿತೋ ಗೊತ್ತಿಲ್ಲ. ಈ ಪ್ರಾಜೆಕ್ಟನ್ನು ಕೈಕೊಂಡರೆ ನೆಲಮಂಗಲ ತಾಲ್ಲೂಕಿನಲ್ಲಿ 2,000 ಎಕರೆಗಳು ಸಾಗುವಳಿಗೆ ಬರುತ್ತವೆ. ನಾಲ್ಕೈದು ವರ್ಷಗಳಿಂದಲೂ ಇದನ್ನು ಒತ್ತಾಯ ಮಾಡುತ್ತಿದ್ದೇವೆ. ಈ ವರ್ಷವಾದರೂ ಇದನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಗೊಲ್ಲಹಳ್ಳಿ ಕೆರೆ ಕೂಡ ನೆಲಮಂಗಲ ತಾಲ್ಲೂಕಿನಲ್ಲಿದೆ. ಇದಕ್ಕೂ ಎಸ್ಟಿಮೇಟ್ ಆಗಿದೆ. ಇದನ್ನು ಜಾಗ್ರತೆ ಮಂಜೂರುಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಒಟ್ಟಿನಲ್ಲಿ ಹೇಳುವುದಾದರೆ ಇಂಜಿನಿಯರಿಂಗ್ ಇಲಾಖೆಯಲ್ಲಿ ಯಾವ ಕೆಲಸ ಕಾರ್ಯಗಳೂ ವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ ಮಾಡಬೇಕಾದದ್ದು ಮುಖ್ಯ. ಎಸ್ಟಿಮೇಟ್ ಆದಮೇಲೆ ಇಷ್ಟೇ ದಿವಸದಲ್ಲಿ ಆ ಕೆಲಸವನ್ನು ಮಾಡಲೇಬೇಕೆಂದು ಒಂದು ನಿಯಮವಿದ್ದರೆ ಒಳ್ಳೆಯದು. ಆದ್ದರಿಂದ ಇಂಜಿನಿಯರಿಂಗ್ ಇಲಾಖೆಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿ, ಆ ಮೂಲಕ ರೈತಾಪಿ ಜನರಿಗೆ ಇರತಕ್ಕ ಕುಂದುಕೊರತೆಗಳನ್ನು ಜಾಗ್ರತೆ ಪರಿಹಾರಮಾಡುವುದಕ್ಕೆ ಅವಶ್ಯಕವಾದ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುವುದು ಬಹಳ ಮುಖ್ಯವಾದುದು. ಸರ್ಕಾರದವರು ಇದನ್ನು ಗಮನಿಸುವರೆಂದು ನಂಬಿದ್ದೇನೆ.

*ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಸ್ವಾಮಿ, ತಿಪಟೂರು ತಾಲ್ಲೂಕಿನ ನೊಣವಿನಕೆರೆಯನ್ನು ಜೀರ್ಣೋದ್ಧಾರಮಾಡಬೇಕೆಂದು ಅನೇಕ ಸಾರಿ ಮನವಿಮಾಡಿಕೊಂಡಿದ್ದರೂ ಇದುವರೆಗೂ ಸರ್ಕಾರದವರು ಮನಸ್ಸು ಮಾಡಿಲ್ಲ. ತಿಪಟೂರು ತಾಲ್ಲೂಕಿನಲ್ಲಿ ದುರಸ್ತಾಗಬೇಕಾಗಿರುವ ಅನೇಕ ಚಿಕ್ಕ ಚಿಕ್ಕ ಕೆರೆಗಳಿದ್ದರೂ ಒಂದನ್ನಾದರೂ ಸರ್ಕಾರದವರು ಮಾಡಿದ್ದಾರೆಯೇ? ನೊಣವಿನ ಕೆರೆಯ ವಿಚಾರದಲ್ಲಂತೂ ಅನೇಕ ಪ್ರಶ್ನೆಗಳನ್ನು ಈ ಸಭೆಯಲ್ಲಿ ಕೇಳಿದ್ದೇವೆ. ಮಾನ್ಯ ಸಚಿವರು ಅವುಗಳಿಗೆ ಉತ್ತರ ಕೊಡುವಾಗ, ಈ ಕೆರೆಯನ್ನು ಜೀರ್ಣೋದ್ಧಾರ ಮಾಡುವುದರಿಂದ ಅದರ ಕೆಳಗಿನ ಕೆರೆಗಳಿಗೆಲ್ಲಾ ತೊಂದರೆಯಾಗುತ್ತದೆಂದು ಜವಾಬು ಕೊಟ್ಟರು. ಅದರೆ ಈ ಕಾಮಗಾರಿಯನ್ನು ಕೈಗೊಳ್ಳುವುದರಿಂದ ಸುಮಾರು ಎಂಟು ಹಳ್ಳಿಗಳಿಗೆ ನೀರು ವಸತಿ ಕಲ್ಪಿಸಿಕೊಟ್ಟಂತಾಗುತ್ತದೆ. ಇದರ ಮೇಲೆ 40,000 ರೂಪಾಯಿಗಳ ಎಸ್ಟಿಮೇಟ್ ಕೂಡ ಆಗಿದೆ. ಇಷ್ಟೆಲ್ಲ ಆಗಿದ್ದರೂ, ಇದು ಒಡೆದು ಹೋಗಿ 25-30 ವರ್ಷಗಳಾದರೂ ಕೂಡ ಸರ್ಕಾರಧವರು ಗಮನ ಕೊಟ್ಟಿಲ್ಲ. ಈ ಕೆರೆಯ ಹಿಂದೆ ತರೀ ಜಮಿನುಗಳಲ್ಲದೆ, ಬಾಗಾಯಿತು ಜಮೀನುಗಳೂ ಬಹಳವಾಗಿವೆ. ಊರ ಮುಂಭಾಗದಲ್ಲಿದ್ದು ಆ ನಾಲ್ಕಾರು ಹಳ್ಳಿಗಳ ದನಕರುಗಳಿಗೂ ಕುಡಿಯುವ ನೀರಿಗೆ ಆಧಾರವಾಗಿದೆ ಈ ಕೆರೆ. ಆದ್ದರಿಂದ ಸರ್ಕಾರದವರು ಆದಷ್ಟು ಈ ಕಾಮಗಾರಿಯನ್ನು ಕೈಕೊಳ್ಳಬೇಕೆಂದು ಒತ್ತಾಯಮಾಡುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಸ್ವಾಮಿ, ಕಂಟ್ರಿಬ್ಯೂಷನ್ ಮತ್ತು ವಾಟರ್‌ರೇಟ್ ಎಂಕ್ವೈರಿ ಕಮಿಟಿಯೆಂದು ಒಂದು ಕಮಿಟಿಯನ್ನು ಸರ್ಕಾರದವರು ಈಗ ಒಂದು ವರ್ಷದಕೆಳಗೆ ಏರ್ಪಾಡು ಮಾಡಿದ್ದರು. ಈಗಿರುವ ಪ್ರಕಾರ ಮಳೆಯಿಂದ ಬೆಳೆ ಮಾಡತಕ್ಕ ಪ್ರದೇಶಕ್ಕೆ ಒಂದು ದರ, ಕೆರೆಯ ನೀರಿನಿಂದ ಬೆಳೆಮಾಡತಕ್ಕ ಪ್ರದೇಶಕ್ಕೆ ಒಂದು ದರ, ನಾಲೆಯ ನೀರಿನಿಂದ ಬೆಳೆಯತಕ್ಕ ಪ್ರದೇಶಕ್ಕೆ ಒಂದು ದರ ಎಂದು

ವಿಧಾಯಕವಾಗಿದೆ. ಹೀಗಿದ್ದು, ಅನುಸಾರವಾಗಿ ಕಂದಾಯವನ್ನು ವಸೂಲಿ ಮಾಡುತ್ತಿದ್ದಾರೆಯೇ ಹೊರತು, ಅದಕ್ಕನುಗುಣವಾಗಿ ರೈತರಿಗೆ ಅನುಕೂಲ ದೊರೆಯುತ್ತಿದೆಯೇ ಎಂಬುದನ್ನು ಸರ್ಕಾರದವರು ನೋಡಿಲ್ಲ. ಈಗ 20 ವರ್ಷಗಳಿಂದ ನೋಡುವುದಾದರೆ, ಸರ್ಕಾರದವರು ಹೊಸದಾಗಿ 10 ಕೆರೆಗಳನ್ನು ಕೂಡ ಮಾಡಿಲ್ಲ. ಹಿಂದಿನ ಕಾಲದಲ್ಲಿ ಪಾಳೆಯಗಾರರು ಜನರ ಸಹಾಯದಿಂದ 25,000 ಕೆರೆಗಳನ್ನು ಕಟ್ಟಿರುವಾಗ, ಅವುಗಳನ್ನು ಸರಿಯಾಗಿ ರಿಪೇರಿ ಮಾಡುವುದಕ್ಕೂ ಕೂಡ ನಮ್ಮ ಸರ್ಕಾರದವರು ಗಮನ ಕೊಟ್ಟಿಲ್ಲವಲ್ಲ ಎಂದು ನಾನು ವಿಷಾದಿಸುತ್ತೇನೆ. 20-30 ವರ್ಷಗಳಿಂದ ಕೆರೆ ನಾದುರಸ್ತು ಆಗಿದ್ದರೂ ಕಂದಾಯವನ್ನು ಮಾತ್ರ ತೆಗೆದುಕೊಳ್ಳುತ್ತಿದ್ದೀರಿ. ಹೊಸದಾಗಿ ರಿಪೇರಿ ಮಾಡಿ ಎಂದು ಹೇಳಿದರೆ ವಾಟರ್ ರೇಟ್ ಕೊಡಬೇಕೆಂದು ಆರ್ಡರ್ ಬೇರೆ ಮಾಡಿದ್ದೀರಿ. ಇದು ತುಂಬ ಅನ್ಯಾಯವೆಂದು ಹೇಳಿದ ಮೇಲೆ ಇದಕ್ಕೊಂದು ಎಂಕ್ವೈರಿ ಕಮಿಟಿಯನ್ನು ಮಾಡಿದರು; ಆ ಕಮಿಟಿಯವರು ಶ್ರಮವಹಿಸಿ ಪರಿಶೀಲನೆ ಮಾಡಿ ಒಂದು ವರದಿಯನ್ನೊಪ್ಪಿಸಿದರೂ ಅದನ್ನೂ ಕೂಡ ಇದುವರೆಗೂ ಸರ್ಕಾರದವರು ಪರಿಶೀಲನೆ ಮಾಡಿಲ್ಲ. ಕಾರಣವೇನೋ ಗೊತ್ತಿಲ್ಲ. ಒಂದು ಕೆರೆಯ ರಿಪೇರಿಗೆ 10,000 ರೂಪಾಯಿಗಳು ಬೇಕೆಂದು ಹೇಳಿ 100-150 ರೂಪಾಯಿಗಳ ಕಂಟ್ರಿಬ್ಯೂಷನ್ ಕೊಡಬೇಕೆಂದು ಹೇಳಿದರೆ ಹೇಗೆ ? ಮಳೆ ತರಿ ಜಮೀನಿಗೆ 2-0-0 ಕಂದಾಯ ಇದೆ, ಕೆರೆಯಿಂದ ಪೈರು ಮಾಡುವವರೂ ಐದು ರೂಪಾಯಿಗಳಂತೆ ಕೊಡಬೇಕೆಂದು ಇರುವಾಗ, ನೀರುನಿಲ್ಲುವುದಿಲ್ಲ ರಿಪೇರಿ ಮಾಡಿಸಿ ಎಂದು ಕೇಳಿದರೆ, ಅದಕ್ಕೆ ಮತ್ತೆ ವಾಟರ್ ರೇಟ್ ಮತ್ತು ಕಾಂಟ್ರಿಬ್ಯೂಷನ್ ಕೊಡಬೇಕೆಂದರೆ ಎಷ್ಟು ಅನ್ಯಾಯ !

ಈ ವರದಿಯಲ್ಲಿ ಏನಿದೆ ಎಂದು ಸರಕಾರದವರು ಪರಿಶೀಲನೆ ಮಾಡಿ, ಆದಷ್ಟು ಬೇಗ ವರದಿಗೆ ಒಪ್ಪಿಗೆ ಕೊಟ್ಟರೆ ಬಹಳ ಜನಗಳಿಗೆ ಅನುಕೂಲವಾಗುತ್ತದೆ ಎಂಬ ವಿಷಯವನ್ನು ತಮ್ಮ ಮುಂದೆ ಹೇಳುತ್ತೇನೆ. 20-30-40 ವರ್ಷಗಳ ಕೆಳಗೆ breach ಆಗಿರುವ ಕೆರೆಗಳು 150 ಇರಬಹುದು. ನಮ್ಮ ತಾಲ್ಲೂಕಿನಲ್ಲಿ 3-4 ಇವೆ. ನೀರು ಕೊಡುತ್ತೇವೆ ಎಂದು ಹೇಳಿ, ಕಂದಾಯ ತೆಗೆದುಕೊಳ್ಳುತ್ತಲೇ ಇದ್ದಾರೆ. ಇಷ್ಟು ವರ್ಷಗಳಿಂದ ಕಂದಾಯ ಕೊಟ್ಟರೆತಕ್ಕ ಹಣದಿಂದ ಕೆರೆಗಳನ್ನು ರಿಪೇರಿ ಮಾಡಿದ್ದರೆ, ಎಷ್ಟೋ ಅನುಕೂಲವಾಗುತ್ತಿತ್ತು. ಶಿವಮೊಗ್ಗಾದಲ್ಲಿ ತುಂಗಾ ಅಣೆಕಟ್ಟು ಇದೆ. 40-50 ಮೈಲಿಗಳ ದೂರಕ್ಕೆ ಇದರಿಂದ ನೀರಿನ ಅನುಕೂಲವಾಗುತ್ತದೆ. ನದಿಯ ಪಕ್ಕದಲ್ಲಿ ಒಂದು ಮೈಲಿಯ ಆವರಣದಲ್ಲಿ ಮಾತ್ರ ಉಪಯೋಗವಾಗುತ್ತದೆ. ಅಲ್ಲಿಂದ ಆಚೆ ಇರುವ ಜಮೀನುಗಳಿಗೆ ಉಪಯೋಗವಾಗುತ್ತಾ ಇಲ್ಲ. ಕಾನೆಹಳ್ಳ ಮತ್ತು ಬುತ್ತಿಹಳ್ಳ, ಇನ್ನೂ ಅನೇಕ ಹಳ್ಳಗಳಿವೆ. ಹಳ್ಳಗಳಿಗೆ ಒಂದೊಂದು ಅಣೆಕಟ್ಟು ಕಟ್ಟಿದರೆ ನೀರು ನಿಂತು 2-3 ಸಾವಿರ ಎಕರೆ ಜಮೀನು ಸಾಗುವಳಿ ಆಗುತ್ತದೆ ಇದು P.W.D.ಗೆ ಗೊತ್ತಿದೆ. ಕಾನೆಹಳ್ಳಕ್ಕೆ ಒಂದು reservoirನ್ನು ಕಟ್ಟಿದರೆ ಅಲ್ಲಿನ ಪ್ರದೇಶಗಳಿಗೆ ಅನುಕೂಲವಾಗುತ್ತದೆ. 30-40 ಚದುರ ಮೈಲಿ ವಿಸ್ತೀರ್ಣದಲ್ಲಿ (catchment area) ಮಳೆ ಬಿದ್ದು reservoir ಆಗುತ್ತದೆ. 5 ಸಾವಿರ ಎಕರೆ ಜಮೀನು ಸಾಗುವಳಿ ಆಗುತ್ತದೆ ಎಂದು ಅಲ್ಲಿರುವ ಅನುಭವಶಾಲಿಗಳು ಹೇಳುತ್ತಿದ್ದಾರೆ. ಹನಗೆರೆ ರೇಂಜಿನಬಳಿ ಬುತ್ತಿ ಹಳ್ಳಕ್ಕೆಬರ.ವನೀರು ವಿನಾಕಾರಣ ಉಪಯೋಗವಾಗದೆ ಹೋಗುತ್ತದೆ. ಅಲ್ಲಿ ಸಣ್ಣಸಣ್ಣ ಅಣೆಕಟ್ಟನ್ನು ಕಟ್ಟಿ ಹೊಸಕೆರೆಗೆ ಬಿಡುವುದರಿಂದ 1,500 ಎಕರೆಗಳ ಜಮೀನು ನೀರಾವರಿಗೆ ಬರುತ್ತದೆ. ಶಿವಮೊಗ್ಗ ತಾಲ್ಲೂಕಿನಲ್ಲಿ 75 ಸಾವಿರ ಎಕರೆ ಜಮೀನು ಸಾಗುವಳಿಗೆ ಯೋಗ್ಯವಾದುದ್ದು ಇದೆ. ನೀರಿನ ಅನುಕೂಲತೆ ಇಲ್ಲ ಇಲ್ಲದೆ 20 ಹಳ್ಳಿಗಳ ಜನಗಳು ಬೇರೆ ಊರಿಗೆ ಹೋಗುತ್ತಾರೆ, ಹಳ್ಳಿಗಳು ಬೇಚರಾಕ್ ಆಗಿವೆ, ಸಾಗುವಳಿ ನಿಂತು ಹೋಗಿದೆ. ಅಲ್ಲಿರುವ ಕೆರೆಗಳನ್ನು ಜೀರ್ಣೋದ್ಧಾರಮಾಡಿ, ಹಳ್ಳಗಳಿಗೆ ಅಣೆಕಟ್ಟನ್ನು ಕಟ್ಟಿದರೆ, 6 ಸಾವಿರ ಎಕರೆ ಜಮೀನು ಸಾಗುವಳಿಯಾಗುತ್ತದೆ. 12 ಮೈಲಿಗಳ ದೂರದಲ್ಲಿ 45" ಮಳೆ ಬರುತ್ತದೆ. ಆ 40-50" ಮಳೆನೀರನ್ನು ಉಪಯೋಗ ಮಾಡಿ ಅಲ್ಲಿನ ಹಳ್ಳಿಗಳಿಗೆ ಅನುಕೂಲ ಮಾಡುವುದು ಸರ್ಕಾರದವರ ಮೊದಲನೆ ಕರ್ತವ್ಯವಾಗಿದೆ. ಆದಷ್ಟು ಬೇಗನೆ ಇದನ್ನು ಗಮನಕ್ಕೆ ತೆಗೆದುಕೊಂಡು ಸರಕಾರದವರು ಹಳ್ಳಗಳಿಗೆ ಒಡ್ಡು ಕಟ್ಟುವುದಕ್ಕೆ ಪ್ರಯತ್ನಪಡುತ್ತಾರೆಂದು ಹೇಳಿ ನನ್ನ ಈ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎನ್. ಸಿ. ನಾಗಯ್ಯರೆಡ್ಡಿ (ಗೌರಿಬಿದನೂರು).—ಸ್ವಾಮಿ, ಶ್ರೀ ಲಿಂಗಾರೆಡ್ಡಿಯವರು ಮಾತನಾಡಿದ ಮೇಲೆ ನಾನು ಮಾತನಾಡುವುದು ಅವಶ್ಯಕವಿಲ್ಲವೆಂದು ತಿಳಿದುಕೊಂಡಿದ್ದೆ. ಅವರು ಬೇರೆ ವಿಷಯ ಮಾತನಾಡಿದರು. ಆದ್ದರಿಂದ ನಾನು ಒಂದು ಮುಖ್ಯವಾದ ವಿಷಯವನ್ನು ಹೇಳಬೇಕಾಗಿದೆ. ಆದರೆ ನಮ್ಮ ಸರ್ಕಾರದವರ ಮುಂದೆ ಹೇಳಿ ಉಪಯೋಗವಿಲ್ಲ ಎಂಬುದು ಗೊತ್ತಿದೆ. ಆದರೂ ಕೂಡ ಬೇರೆ ಸರ್ಕಾರದವರು ನಮ್ಮ ಅಭಿಪ್ರಾಯವೇನಿದೆ, ನಮ್ಮ ನಿಲುವು ಏನಿದೆ ಎಂಬುದನ್ನು ತಿಳಿದುಕೊಳ್ಳಬಹುದೆಂಬ ಉದ್ದೇಶದಿಂದ ನಾನು ಇಲ್ಲಿ ಮಾತನಾಡಬೇಕಾಗಿದೆ.

Mr. SPEAKER.—While the Hon'ble Member makes a speech, he should not cast aspersions against other State Governments.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ವಿಷಯ ಮಾತ್ರ ಹೇಳುತ್ತೇನೆ. 1892 ನೇ ಇಸವಿಯಲ್ಲಿ ಮದರಾಸ್ ಸರ್ಕಾರಕ್ಕೂ ನಮಗೂ ಒಂದು ಮುಚ್ಚಳಿಕೆ ಆಯಿತು. ಈಗ್ಗೆ 63-64 ವರ್ಷಗಳಾದುವು. ಆಗ ಇದ್ದ ಗೌರ್ನರು, ಇಲ್ಲಿ ಇದ್ದ ಚೀಫ್ ಇಂಜನಿಯರ್ ಸ್ನೇಹಿತರಾದ್ದರಿಂದ ಒಂದು ಕರಾರನ್ನು ಮಾಡಿಕೊಂಡಿದ್ದರು. ಅದರಿಂದ ಮೈಸೂರು ಸರ್ಕಾರವನ್ನು ಮಾರಿಕೊಂಡಿದ್ದಾರೆ ಎಂದರೆ ತಪ್ಪಾಗುವುದಿಲ್ಲ. 30 ಮೈಲಿ ದೂರದಲ್ಲಿ ಪಾಲಾರ್, ಚಿತ್ರಾವತಿ, ಪೆನ್ನಾರ್ ನದಿಗಳಿಗೆ ಅಣೆಕಟ್ಟುಗಳನ್ನು ಅವರ ರಾಜ್ಯದಲ್ಲಿ ಒಂದು ಸಾವಿರ ಮೈಲಿಗಳವರೆಗೂ 30 ಮೈಲಿ ಬಿಟ್ಟು ಆಚೆ ಕಟ್ಟಿಕೊಳ್ಳಬಹುದು. ಆ ಕಾಲದಲ್ಲಿ ಬಹಳ ಅನ್ಯಾಯವಾಗಿದೆ. ಈಚೆಗೆ ನಮ್ಮ ಸರ್ಕಾರದವರು agreement ನ್ನು revise ಮಾಡಿಕೊಳ್ಳಬೇಕೆಂದು ಮಾಡಿದರು. ಹಾಗೆ ಮಾಡಿಕೊಳ್ಳುವಾಗ 30 ಸಾವಿರ unit limit ಅವರಿಗೆ 3 ಸಾವಿರ unit limit ನಮಗೆ ಬರುವ ವಿಷಯವನ್ನು ಯೋಚನೆ ಮಾಡಬೇಕು. ಪೆನ್ನಾರ್ ವಿಷಯ ಹೇಳುತ್ತೇನೆ. ಮೂರು ಸಾವಿರ ಯೂನಿಟ್ ಬಗ್ಗೆ ಚಾನಲ್ ಮಾಡಿಕೊಂಡು ಆ ಮೂಲಕ ಕೆರೆಗಳಿಗೆ ನೀರು ತೆಗೆದುಕೊಳ್ಳಬೇಕೆಂದು ಮಾಡಿದರು. ಅವರು ನಮ್ಮ areaದಲ್ಲಿ 30 ಮೈಲಿಯೊಳಗೆ ಒಂದು ಅಣೆಕಟ್ಟನ್ನು ಕಟ್ಟಿಕೊಳ್ಳಬಹುದು ಎಂದು ಮಾಡಿದರು. Draft ಬರೆಯುವ ಸ್ಥಿತಿಯಲ್ಲಿತ್ತು. ನಮ್ಮ ಸರ್ಕಾರದವರು ಡ್ರಾಫ್ಟಿಗೆ ರುಜು ಹಾಕಿಲ್ಲ. ಅವರು ಹಿಂದೂಪುರದ ಹತ್ತಿರ ಪೆನ್ನಾರ್ ಕುಮದ್ವತಿಗೆ

(ಶ್ರೀ ಎಲ್. ಸಿ. ನಾಗಯ್ಯರೆಡ್ಡಿ.)

8-10 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ಅಣೆಕಟ್ಟನ್ನು ಕಟ್ಟಿದರು. 20 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದೆರಡು ಫೀಡರ್ ಚಾನಲ್‌ಗಳನ್ನು ಕಟ್ಟಿಕೊಂಡರು. ನದಿಗೆ ಅಡ್ಡ ಹಾಕಿದ್ದೇ ಆದರೆ ಅವರಿಗೆ ಒಂದು ತೊಟ್ಟು ನೀರು ಕೂಡ ಹೋಗುವುದಿಲ್ಲ, ಆದ್ದರಿಂದ ನಿಮ್ಮ draftಗೆ ಒಪ್ಪುವುದಿಲ್ಲ ಎಂದು ಹೇಳಿದರು. ನಮ್ಮ ಸರ್ಕಾರದವರು ಅದನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಅವರು ಮಾತ್ರ ಕಟ್ಟಿಕೊಂಡರು. ಅವರು ಯಾವ ಆಧಾರದ ಮೇಲೆ ಕಟ್ಟಿರುವುದು ! ನಮಗೆ 3 ಸಾವಿರ ಯೂನಿಟ್ಸ್, ಅವರಿಗೆ 30 ಸಾವಿರ ಯೂನಿಟ್ಸ್. ನಮ್ಮ ಕೇವಲ 3 ಸಾವಿರ ಯೂನಿಟ್ಸಿಗೂ ಅಣೆಕಟ್ಟನ್ನು ಕಟ್ಟಕೊಡಲಿಲ್ಲ. ಈ ವಿಷಯದಲ್ಲಿ ನಮ್ಮ ಸರ್ಕಾರದವರು ಕರ್ತವ್ಯಭ್ರಷ್ಟರಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಅವರಿಗೆ ತಿಳಿದುಕೊಳ್ಳುವ ಯೋಗ್ಯತೆ ಇಲ್ಲ. ಅವರು ಮಾತ್ರ ಕಟ್ಟಿಕೊಳ್ಳಬಹುದು. ನಾವು ಕಟ್ಟಿಕೊಳ್ಳುವುದಕ್ಕೆ ಪ್ರಯತ್ನಪಟ್ಟಾಗ, ಚಿಂತಾಮಣಿಯ ಹತ್ತಿರವಿರುವ ಒಂದು ಹಳ್ಳಿಯಿಂದ 50 ಮೈಲಿ ದೂರದಿಂದ 500 ಜನಗಳು ಬಂದು ಅದನ್ನು ಕಿತ್ತುಹಾಕಿದರು. ನಮಗೆ ಅಣೆಕಟ್ಟನ್ನು ಕಟ್ಟಿ ನೀರು ಕೊಡುವ ಯೋಗ್ಯತೆ ಇಲ್ಲ. ಅದಕ್ಕೋಸ್ಕರ ಸರ್ಕಾರದವರು ಏತಕ್ಕೋಸ್ಕರ ಹೀಗೆ ಮಾಡಿದರು ಎಂಬುದಕ್ಕೆ explanation ಕೊಡಲಿ. ಚಿತ್ರಾವತಿಗೂ ಹೀಗೆಯೇ ಮಾಡಿದ್ದಾರೆ. ಪಾಲಾರ್ ವಿಚಾರ ಇನ್ನೂ ವಿಚಿತ್ರ. ಶ್ರೀ ಹನುಮಂತಯ್ಯನವರು ಮುಖ್ಯ ಮಂತ್ರಿಗಳಾದ ಮೇಲೆ ಅವರು ಈ ರಿಕಾರ್ಡನ್ನು ತೆಗೆಸಿ ಇದನ್ನು ಮಾಡಿಸಿದ್ದಾರೆ ಎಂಬುದು ಗೊತ್ತಿಲ್ಲ. ಐದು ವರ್ಷಗಳಿಂದ ಇಲ್ಲದೇ ಇದ್ದುದು, ಈ ಮಂತ್ರಿಮಂಡಲದವರು ಕೋಲಾರ ಡಿಸ್ಟ್ರಿಕ್ಟಿನಲ್ಲಿ ಏನು ಮಾಡುತ್ತಾರೆ ಎಂಬುದು ನನ್ನಗಂತೂ ಅನುಮಾನವಾಗುತ್ತದೆ. ಪಾಲಾರ್ basins ನಲ್ಲಿ ಸಾವಿರ ಕೆರೆಗಳಿವೆ. ಈಚೆಗೆ ಅವು silt ಆಗಿವೆ. ಆದ್ದರಿಂದ 60 ಸಾವಿರ ಎಕರೆ ಜಮೀನಿನಲ್ಲಿ 40 ಸಾವಿರ ಎಕರೆ ಜಮೀನಿಗೆ ನೀರು ಸಿಕ್ಕುತ್ತಾ ಇಲ್ಲ. ಅವರಿಂದ ನಮಗೆ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದರೂ ಸರ್ಕಾರದವರು ಸುಮ್ಮನೆ ಇರುತ್ತಾರೆ. ಇದರಲ್ಲಿ sinister motive ಇದೆ. ತಾವು ಸುಮ್ಮನೆ ಇದ್ದರೂ ನಾವೇನೂ ಬಿಡುವುದಿಲ್ಲ, ಮದರಾಸ್ ಸರ್ಕಾರ, ಆಂಧ್ರ ಸರ್ಕಾರ, ಎಲ್ಲಾ ಬಂದರೂ resist ಮಾಡುವ ಶಕ್ತಿ ನಮಗೆ ಇದೆ. ನಾವು ಮಾಡುತ್ತೇವೆ. ಸರ್ಕಾರ ಏತಕ್ಕೋಸ್ಕರ ಕರ್ತವ್ಯ ಭ್ರಷ್ಟರಾದರು ಎಂಬುದು ಗೊತ್ತಾಗುತ್ತಾ ಇಲ್ಲ. ರಾಮಸಾಗರ, ಬೇತಮಂಗಲ, ಮುದುವಾಡಿ ಮುಂತಾದ ಗ್ರಾಮಗಳ ದೊಡ್ಡ ದೊಡ್ಡ ಕೆರೆಗಳು silt ಆಗಿ ಮುಕ್ಕಾಲು ಭಾಗ ನೀರು ನಿಲ್ಲುವುದಿಲ್ಲ, ನಮಗೆ ಎಷ್ಟು silt ಆಗಿದೆಯೋ- ನಮಗೆ ಎಷ್ಟು ನೀರು ಕಮ್ಮಿ ಬಿದ್ದಿದೆಯೋ ಅದನ್ನು ಮೊದಲು ಸರ್ಕಾರದವರು ಅಂದಾಜುಮಾಡಿ, wast weirನ್ನು ಹೆಚ್ಚಿಸಿ, ನೀರನ್ನು ಮೊದಲಿದ್ದ ಹಾಗೆ ನಿಲ್ಲಿಸಬೇಕು. ಹೇಗಿದ್ದರೂ ಕೆಟ್ಟ ಹೆಸರು ಬಂದಿದೆ. ಕೆಟ್ಟ ಹೆಸರೇ ಇರಲಿ. ಕೃಷ್ಣರಾಜ ಸಾಗರದಲ್ಲಿ ನೀರನ್ನು ಅನಾವಶ್ಯಕವಾಗಿ ನಿಲ್ಲಿಸಿದರು ಎಂದು ಅವರ complaint. ಖಂಡಿತವಾಗಿಯೂ ನಮಗೆ ಬರುವ ¾ ಭಾಗ ನೀರಿನಷ್ಟು ಮದರಾಸ್ ಸರ್ಕಾರಕ್ಕೆ ಹೋಗುತ್ತದೆ. ಎಲ್ಲಾ ಭಾಗದ ನೀರೂ ಆಂಧ್ರ ದೇಶಕ್ಕೆ ಹೋಗುತ್ತದೆ. ಶ್ರೀ ಸುಂದರಯ್ಯನವರು ಎಲ್ಲಾ ತೆಲುಗು ರಾಜ್ಯ, ಕೋಲಾರವನ್ನು ನಮ್ಮ ಆಂಧ್ರಕ್ಕೆ ಸೇರಿಸಿ ಎಂದು ಹೇಳುತ್ತಿದ್ದಾರೆ. ಎಲ್ಲರೂ ತೆಲುಗರೇ. ನಮಗೆ ಕೊಡತಕ್ಕ ಭಾಗ ಕೊಡಲಿ 30 ಸಾವಿರ ಯೂನಿಟ್ಸನ್ನು ಅವರು ಪೆನ್ನಾರ್‌ನಲ್ಲಿಟ್ಟುಕೊಂಡು ನಮಗೆ 3 ಸಾವಿರ ಯೂನಿಟ್ಸಿಗೂ ಅವಕಾಶವಿಲ್ಲದೆ ನದಿಯ ನೀರು ಒಂದೇ ಸಮನೆ ಅಲ್ಲಿಗೆ ಹೋಗುತ್ತಿದೆ. 2-3 ಮೈಲಿಗಳ ದೂರದಲ್ಲಿ ನೀರು ನಿಲ್ಲಿಸುವುದಕ್ಕೆ ಸಾಧ್ಯವಿದೆ. ಬೇಕಾದರೆ ಈ ಕೆಲಸವನ್ನು ನಾಳೆಯೇ ತೆಗೆದುಕೊಳ್ಳಬಹುದು. ಅವರು ಎರಡು ಅಣೆಕಟ್ಟುಗಳನ್ನು ನಮ್ಮ ಕರಾರು ಮೀರಿ ಕಟ್ಟಿದ್ದಾರೆ. ಆದ್ದರಿಂದ ಈ ಎರಡು ವಿಷಯಗಳಲ್ಲೂ ನಮ್ಮ ಸರ್ಕಾರದವರು ಕರ್ತವ್ಯ ಭ್ರಷ್ಟರಾಗಿದ್ದಾರೆ. ಅದನ್ನು ಸರಿಪಡಿಸಬೇಕು. ಅವರ ಮೇಲೆ ಜವಾಬ್ದಾರಿ ಇದೆ. ವ್ಯತ್ಯಾಸವಾದರೆ, they will be liable to be removed. They will be impeached.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಸ್ವಾಮಿ, ಪಬ್ಲಿಕ್ ವರ್ಕ್ಸ್ ಇಲಾಖೆಯ ವಿಚಾರ ಬಂದಾಗಲೆಲ್ಲಾ ಈ ಇಲಾಖೆ ಬಹಳ ಹೆಚ್ಚು ಹಣವನ್ನು ಖರ್ಚು ಮಾಡುವ ಇಲಾಖೆಯೆಂದು ಹೇಳಿದ ಕೂಡಲೆ ಎಲ್ಲರ ದೃಷ್ಟಿಯೂ ಈ ಕಡೆ ಹೋಗುವುದು ಸಹಜ. ರೈತರ ಏಳಿಗೆಯಾಗಿ ದೇಶದಲ್ಲಿ ಉತ್ಪತ್ತಿ ಜಾಸ್ತಿಯಾಗಬೇಕೆಂದರೆ, ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ. ಆದುದರಿಂದ ಇದು ಎಷ್ಟು ದಕ್ಷತೆಯಿಂದ ಕೆಲಸ ಮಾಡಬೇಕೆಂದು ನಾವು ಹಾರೈಸುತ್ತೇವೋ ಅಷ್ಟುಮಟ್ಟಿಗೆ ಅಧು ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನೀರಾವರಿ ಜಾಸ್ತಿಯಾಗಬೇಕು, ಕೆರೆಗಳು ಜಾಸ್ತಿಯಾಗಬೇಕು ಎಂದು ಹೇಳಿ ಹೆಚ್ಚು ಹಣವನ್ನೊದಗಿಸುವಾಗ, ಈ ಇಲಾಖೆಯ personel ಅಥವಾ ಅಧಿಕಾರಿ ವರ್ಗ ಹೇಗಿದೆ, ಅವರಿಗೇನು ಕಷ್ಟವಿದೆ, ಹೇಗೆ ಇದನ್ನು ಪುನರ್‌ವ್ಯವಸ್ಥೆ ಮಾಡಬೇಕು ಎಂಬುದಕ್ಕೂ ಸರ್ಕಾರ ಹೆಚ್ಚು ನಿಗಾ ಕೊಡಬೇಕು. ಯೋಜನೆಗಳ ವಿಚಾರದಲ್ಲಿ ಮಾತ ನಾಡುವಾಗ, ಇದು ಚೆನ್ನಾಗಿಲ್ಲ, ಅದು ಚೆನ್ನಾಗಿಲ್ಲವೆಂದು ಹೇಳುವಾಗ, ಒಳಗಿದ್ದು ಕೆಲಸ ಮಾಡುವವರು, ಅಡಿಗೆ ಮನೆಯಲ್ಲಿದ್ದುಕೊಂಡು ಅಡಿಗೆ ಮಾಡುವವರ ಹಾಗೆ, ಇಲ್ಲಿ ಕೆಲಸಮಾಡಿ ಹಣ ಖರ್ಚು ಮಾಡುವವರಾದ ಅಧಿಕಾರ ವರ್ಗಕ್ಕೆ ಏನು ಕಷ್ಟವಿದೆ ಎನ್ನುವುದನ್ನೂ ವಿಚಾರ ಮಾಡಬೇಕು. ಹಿಂದೆ ಶ್ರೀ ಮರಿಯಪ್ಪನವರು ಮಂತ್ರಿಗಳಾಗಿದ್ದ ಕಾಲದಲ್ಲಿ ಈ ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು ಪುನರ್‌ವ್ಯವಸ್ಥೆ ಮಾಡಬೇಕು ಎಂದು ಪ್ರಾರಂಭ ಮಾಡಿದರು. ಆದರೆ ಆಮೇಲೆ ಇದು ಹೆಚ್ಚು ಮುಂದುವರಿಯಲಿಲ್ಲ, ಈ ಯೋಜನೆಯನ್ನು ಕುಂಠಿತ ಮಾಡಿದರು.

ನಾನು ಹಿಂದೆ ಅನೇಕ ವೇಳೆ ಹೇಳಿದ್ದೇನೆ, ಕೆರೆಗಳು ಮತ್ತು ನೀರಾವರಿ ಯೋಜನೆಗಳಿಗೆ ಸ್ಪೆಷಲ್ ಇಂಜಿನಿಯರುಗಳನ್ನು ಹಾಕಬೇಕು. ಸ್ಥೂಲವಾಗಿ ಯೋಚನೆ ಮಾಡಿದರೆ, ಇದರಲ್ಲಿ ಮೇಜರ್, ಮೈನರ್, ಕಟ್ಟಡಗಳು, ನಾಲೆಗಳು, ಕೆರೆಗಳು ಈ ಕೆಲಸಗಳನ್ನು ವಿಭಾಗಮಾಡಿ, ಒಂದೊಂದರ ಜವಾಬ್ದಾರಿ ಒಬ್ಬೊಬ್ಬರಲ್ಲಿರಬೇಕು. ತೂಬಿಲ್ಲದೇಯಿರುವ ಕೆರೆ, ಚಿಕ್ಕ ಚಿಕ್ಕ ರಿಪೇರಿ ಇವುಗಳನ್ನು ಬೇರೆ ಮಾಡಬೇಕು. ಈಗ ಇದನ್ನೆಲ್ಲಾ ಒಂದು hotch-potch methodsನಲ್ಲಿ ಮಾಡಲಾಗುತ್ತಿದೆ. ಆ ಇಲಾಖೆಯಲ್ಲಿ ಟ್ಯಾಂಕ್ ರಿಜಿಸ್ಟರ್ ನೋಡಿ ಹೇಳಿ ಎಂದು ಯಾವುದಾದರೂ ಕೆರೆಯ ವಿಷಯ ಕೇಳಿದರೆ, ಅದರಲ್ಲಿ ಟಿಪ್ಪುಸುಲ್ತಾನ್ ಕಾಲದಲ್ಲಿ, ಮಾಗಡಿ ಕೆಂಪೇಗೌಡನ ಕಾಲದಲ್ಲಿ ಆದ ಕೆರೆ ಎಂದು ಏನೇನೊ ಇದೆ, ಗೊತ್ತಾಗುವುದಿಲ್ಲ

ಎಂದು ಹೇಳುತ್ತಾನೆ. ಆ ರಿಜಿಸ್ಟರು ಹೀಗಿರುವುದರಿಂದ ಈ ಹೊತ್ತು ಆ ಇಲಾಖೆಯಲ್ಲಿ ಕೆಲಸ ಮಾಡುವವರನ್ನು ದೂರಿ ಪ್ರಯೋಜನವಿಲ್ಲ. ಈ ಪರಿಸ್ಥಿತಿ ಏಕೆ ಉಂಟಾಯಿತು ಎಂಬುದನ್ನು ಪರೀಕ್ಷಿಸಿ ನೋಡಿ ಸರಿಮಾಡುವುದಕ್ಕೆ ಆ ಇಲಾಖೆಗೆ ಸಹಾಯ ಮಾಡಬೇಕು.

ಇನ್ನೊಂದು ವಿಷಯ. 'ಷೆಡ್ಯೂಲ್ಡ್ ರೇಟ್ಸ್' ಎಂದಿದೆ. ಇದನ್ನು ಯಾವ ಆಧಾರದ ಮೇಲೆ ಮಾಡುತ್ತಾರೋ ಗೊತ್ತಿಲ್ಲ. ಮಾರ್ಕೆಟ್ ರೇಟುಗಳಿಗೂ ಇವಕ್ಕೂ ಏನು ಸಂಬಂಧವಿದೆ, ಯಾರನ್ನು ಕೇಳಿ ಮಾಡುತ್ತಾರೆ, ಅಥವಾ ಫಾರಿನ್ ಎಕ್ಸ್‌ಪರ್ಟ್ಸ್‌ನ್ನು ಏನಾದರೂ ಕೇಳಿ ಮಾಡುತ್ತಾರೆಯೋ? ಅಥವ ಕಂಟ್ರಾಕ್ಟರುಗಳ ಕಷ್ಟ ಸುಖಗಳನ್ನು ತಿಳಿದುಕೊಂಡು, ಅವರ ಕಷ್ಟದ ಮೇಲೆ ತೀರ್ಮಾನ ಮಾಡುತ್ತಾರೆಯೆ, ಮಾರ್ಕೆಟ್ ಬೆಲೆಗಳ ಮೇಲೆ ನಿರ್ಧಾರ ಮಾಡುತ್ತಾರೆಯ ಎಂಬುದು ಗೊತ್ತಿಲ್ಲ. ಈ ಷೆಡ್ಯೂಲ್ಡ್ ರೇಟುಗಳು ಆಡಿಟ್‌ಗೆ ಸಿಕ್ಕುವುದಿಲ್ಲ. ಆದುದರಿಂದ ಇದನ್ನು ಪರಿಶೀಲಿಸಿ ಇದೂ ಆಡಿಟ್‌ಗೆ ಸಿಕ್ಕುವ ಹಾಗೆ ಮಾಡಿ, ಈ ರೇಟು ಗೊತ್ತುಮಾಡುವುದು ಸರಿಯೇ ಇಲ್ಲವೇ, ನ್ಯಾಯವೇ ಅನ್ಯಾಯವೆ ಎಂಬುದನ್ನು ತಿಳಿದುಕೊಳ್ಳಬೇಕು. ಇದು ಟೆಕ್ನಿಕಲ್ ಎಂದು ಹೇಳಬಹುದು, ಭಯಪಡಬಹುದು; ಇದಕ್ಕವಕಾಶವಿಲ್ಲ. ಇದಕ್ಕೆ ಸರ್ಕಾರ ನಿಗಾ ಕೊಡಬೇಕು.

ಸ್ಥಳೀಯ ಕಷ್ಟನಿಷ್ಠುರಗಳನ್ನು ಸರ್ಕಾರಕ್ಕೆ ಹೇಳುವುದು ಖೋತಾ ಸೂಚನೆಗಳನ್ನು ಚರ್ಚಿಸುವ ಕಾಲದಲ್ಲಿ ಸ್ವಾಭಾವಿಕ. ನಮ್ಮ ತಾಲ್ಲೂಕಿನ ಕೆಲವು ತೊಂದರೆಗಳನ್ನು ಹೇಳಿರುವುದಕ್ಕಾಗಿ ಶ್ರೀಮಾನ್ ಗೋವಿಂದರಾಜ್ ಅವರನ್ನು ವಂದಿಸಬೇಕಾಗಿದೆ. ಕೆಲವು ವಿಚಾರಗಳನ್ನು ಮೂರು ನಾಲ್ಕು ವರ್ಷಗಳಿಂದ ಸರ್ಕಾರದ ಗಮನಕ್ಕೆ ನಾನೂ ಅವರೂ ತರುತ್ತಿದ್ದೇವೆ. ಒಂದು ಉದಾಹರಣೆಯನ್ನು ಹೇಳಿದರೆ ನಮ್ಮ ಕಷ್ಟ ಸರ್ಕಾರಕ್ಕೆ ಕೈಗನ್ನಡಿಯ ಹಾಗೆ ತಿಳಿಯಬಹುದು. ನೆಲಮಂಗಲ ತಾಲ್ಲೂಕು ಮೈದಾನಪ್ರದೇಶ. ಅಲ್ಲಿ ಕೆರೆಗಳು ಹೆಚ್ಚಾಗಿಲ್ಲ, ನದಿಯ ವ್ಯಾಲಿ ಕೂಡ ಇಲ್ಲ. ಮಾಗಡಿ ತಾಲ್ಲೂಕಿನಲ್ಲೇನೋ ಪ್ರಕೃತಿ ಸೌಲಭ್ಯಗಳಿವೆ, ಅಲ್ಲಿನವರಿಗೆ ಅದರಿಂದ ಸಹಾಯವಾಗಿದೆ. ನೆಲಮಂಗಲ ತಾಲ್ಲೂಕಿನಲ್ಲಿರುವ ಅಲ್ಪಸ್ವಲ್ಪ ಕೆರೆಗಳೂ ಹೂಳು ತುಂಬಿಕೊಂಡಿವೆ. ಇವುಗಳ ಹೂಳು ತೆಗೆಸಿ ಕೊಡಿ ಎಂದು ಸರ್ಕಾರವನ್ನು ಕೇಳುತ್ತಿದ್ದೇವೆ. ಕುಮುದ್ವತಿ ವ್ಯಾಲಿ ಒಂದುವಿನಾ ನೆಲಮಂಗಲ ತಾಲ್ಲೂಕಿನಲ್ಲಿ ಬೇರಾವ ಪ್ರಕೃತಿಯ ಸಹಾಯವೂ ಇಲ್ಲ. 1900ನೆಯ ಇಸವಿಯಲ್ಲಿ ವಿಶ್ವೇಶ್ವರಯ್ಯನವರ ಕಾಲದಲ್ಲಿ ವಿಕ್ಟೋರಿಯಾ ಆಸ್ಪತ್ರೆಯನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದಕಾಲದಲ್ಲಿ ಕುಮುದ್ವತಿಗೆ ಕಟ್ಟೆಕಟ್ಟಬೇಕೆಂದು ಹತ್ತಾರು ಸಾವಿರ ರೂಪಾಯಿ ಖರ್ಚು ಮಾಡಿ ಬೆಂಚ್ ಮಾರ್ಕ್ ಸ್ಟೋನ್ಸ್ ಹಾಕಿಬಿಟ್ಟಿದ್ದಾರೆ. ಮುಂದೆ ಸರ್ಕಾರ, ಅಂದರೆ, ದಿವಾನರುಗಳು ಬದಲಾವಣೆ ಆಗುವುದರಲ್ಲಿ ಅದನ್ನು ಅಲ್ಲಿಗೇ ಕೈಬಿಟ್ಟರು. ಸುಮಾರು ಎರಡುಲಕ್ಷಕ್ಕೆ ಯೋಜನೆ ಮಾಡಿದ್ದರು. ಕೊನೆಗೆ ಅದೇನಾಯಿತು ಎನ್ನುವುದರ ಬಗ್ಗೆ ಆ ಇಲಾಖೆಯಲ್ಲಿ ರಿಕಾರ್ಡುಗಳು ಕೂಡ ಸಿಕ್ಕುವುದಿಲ್ಲ. ಅದನ್ನು ಸರ್ವೆಮಾಡಿದವರು ನಿಮ್ಮ ಹಳ್ಳಿಯಲ್ಲಿ ಕ್ಯಾಂಪ್ ಮಾಡಿದ್ದಾಗ, ಒಂದು ಅಂಗಡಿಯಲ್ಲಿ ಸಾಮಾನನ್ನು ತೆಗೆದುಕೊಂಡಿದ್ದರು. ಆ ಅಂಗಡಿಯವನ ಲೆಕ್ಕದ ಪುಸ್ತಕದಲ್ಲಿ ಆ ತಾರೀಖು ಸಿಕ್ಕಿತು. ಅದನ್ನು ನೋಡಿ ನಾನು ಶಾನುಭೋಗರಲ್ಲಿ ವಿಚಾರಿಸಿ ತಾರೀಖು ಮುಂತಾದ ಕೆಲವು ವಿವರಗಳನ್ನು ಹುಡುಕಿ, ಅದನ್ನು ಸರ್ಕಾರದ ಗಮನಕ್ಕೆ ತಂದೆ. ಆಮೇಲೆ ಎಗ್ಸಿಕ್ಯುಟಿವ್ ಇಂಜಿನಿಯರನ್ನು ಕರೆದುಕೊಂಡು ಹೋಗಿ ಹುಡುಕಲು ಆ ಬೆಂಚ್ ಮಾರ್ಕ್ ಕಲ್ಲುಗಳೂ ಸಿಕ್ಕಿದವು. ಆ ಕಲ್ಲಿನ ಆಧಾರದ ಮೇಲೆ ಖೋತಾ ಸೂಚನೆ, ನಿರ್ಣಯ, ಪ್ರಶ್ನೆಗಳನ್ನು ಕಳುಹಿಸಿ, ನಿಜಾಂಶವನ್ನು ತಿಳಿಯಲು ಸರ್ಕಾರವನ್ನು ಒತ್ತಾಯಮಾಡಿದೆವು. ಸಂಬಂಧಪಟ್ಟ ಮಂತ್ರಿಗಳು ಅದನ್ನು ಪರಿಶೀಲನೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರು, ಒಪ್ಪಿಕೊಂಡರು, ಇಲ್ಲವೆಂದು ಹೇಳಲಿಲ್ಲ. ಈ ಯೋಜನೆಯನ್ನು ಕಾರ್ಯಗತ ಮಾಡಿದರೆ, ನೆಲಮಂಗಲ ತಾಲ್ಲೂಕಿನಲ್ಲಿ ಸಾವಿರ ಎಕರೆ ಮತ್ತು ಮಾಗಡಿ ತಾಲ್ಲೂಕಿನಲ್ಲಿ ಎಂಟುನೂರು ಎಕರೆಯಷ್ಟು ಜಮೀನು ತರಿಯಾಗುವ ಸಂಭವವಿದೆ. ನಮ್ಮ ತಾಲ್ಲೂಕಿನಲ್ಲಿ ಇಂಥ ಸೌಲಭ್ಯ ಇನ್ನಾವುದೂ ಇಲ್ಲ. ಸಾವಿರಾರು ರೈತರಿಗೆ ಇದರಿಂದ ಸಹಾಯವಾಗುವುದರಿಂದ ಇದನ್ನು ಇಷ್ಟು ಒತ್ತಾಯಮಾಡುತ್ತಿದ್ದೇವೆ. ತಿಪ್ಪಗೊಂಡನಹಳ್ಳಿ ಕೆರೆಗೆ ಇದು ಒಂಬತ್ತು ಹತ್ತು ಮೈಲಿ ದೂರದಲ್ಲಿದೆ. ಈಗ ತಿಪ್ಪಗೊಂಡನಹಳ್ಳಿ ಕೆರೆಗೆ 'ಸಿಲ್ಟ್‌ಡ್ಯಾಮ್' ಕಟ್ಟಬೇಕೆಂದೂ ಅದನ್ನು ಕಟ್ಟದಿದ್ದರೆ ಅದು ಹೂಳು ತುಂಬುತ್ತದೆಂದೂ ಹೇಳುತ್ತಾರೆ. ಇದನ್ನು ಕಟ್ಟಿದರೆ ಸಿಲ್ಟ್‌ಡ್ಯಾಮ್ ಬೇಕಾಗುವುದಿಲ್ಲ. ಈ ದೃಷ್ಟಿಯಿಂದ ಕೂಡ ಇದನ್ನು ಕಟ್ಟಬೇಕು. ಆ ಸ್ಥಳದ ಕೆಲವರು ಕಟ್ಟಕೂಡದೆಂದು ಹೇಳುತ್ತಾರೆ. ಬೆಂಗಳೂರು ನೀರು ಸರಬರಾಯಿ ಇಲಾಖೆಯವರು ಎಲ್ಲಿ ಕಟ್ಟಬೇಕೆಂದು ಹೇಳುತ್ತಾರೋ ಆ ಸ್ಥಳದಲ್ಲಿ ರೈತರ ಸಮ್ಮೇಳನ ಕರೆದು ಇದರ ಪರ ಮತ್ತು ವಿರೋಧವಿರುವ ರೈತರನ್ನು ಸೇರಿಸಿ, ಒಂದು ನಿರ್ಣಯಕ್ಕೆ ಬರುವಂತೆ ಮಾಡುತ್ತೇನೆಂದು ಪಬ್ಲಿಕ್ ವರ್ಕ್ಸ್ ಮಂತ್ರಿಗಳೂ ಹೇಳಿದರು. ಆ ಯೋಜನೆ ಈಗ ಪ್ರಾಜೆಕ್ಟ್ ಸೆಕ್ಷನಲ್ಲಿದೆಯೆಂದು ಕೇಳಿದೆ. ಅವರು ಇದಕ್ಕೆ ಖರ್ಚು ಹೆಚ್ಚೆಂದು ಅಭಿಪ್ರಾಯ ಕೊಡುತ್ತಾರೋ ಏನೋ ತಿಳಿಯದು. ಏನೇ ಆದರೂ ಅದನ್ನು ಮಾಡದೇಯಿದ್ದರೆ ಅಲ್ಲಿನ ರೈತರು ತಂಡೋಪತಂಡವಾಗಿ ಅಠಾರ ಕಛೇರಿಯ ಮುಂದೆ ಬಂದು ನಿಲ್ಲುತ್ತಾರೆ.

12 NOON.

ನಾನು ಹೇಳುವುದೇನೆಂದರೆ ಇಷ್ಟು ದರದು ಆ ಕೆರೆಗೆ ಇದೆ. ಆದುದರಿಂದ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕು ಎಂದು ಹೇಳುತ್ತೇನೆ. ಈ ಕೆರೆಯನ್ನು ಕಟ್ಟಿದರೆ ಬೆಂಗಳೂರಿಗೆ ನೀರು ಸರಬರಾಯಿ ವ್ಯವಸ್ಥೆ ಸರಿಯಾಗಿ ಆಗುವುದಿಲ್ಲವೆಂದರೆ ಇದು ನನಗೇ ಅರ್ಥವಾಗುವುದಿಲ್ಲ. ಏಕೆಂದರೆ ತಿಪ್ಪಗೊಂಡನಹಳ್ಳಿ ಕೆರೆ ತುಂಬಿ, ಅದರ ಕೆಳಗೆ ಒಂದು ಕೆರೆ ಕಟ್ಟಿದರೆ, ಅದಕ್ಕೂ ನೀರು ಉಳಿಯುತ್ತದೆಂದು ಹೇಳುತ್ತಾರೆ. ಆದರೆ, ಇದಕ್ಕೆ ಮೇಲ್ಗಡೆ ಒಂದು ಕೆರೆಯನ್ನು ಕಟ್ಟಿ ಅದರ ನೀರನ್ನು ಉಪಯೋಗಿಸಿಕೊಳ್ಳುವುದಾದರೆ, ಬೆಂಗಳೂರಿಗೆ ನೀರು ಸರಬರಾಯಿ ಮಾಡಲು ತೊಂದರೆಯಾಗುತ್ತದೆಂದು ಹೇಳುತ್ತಾರೆ. ಇದು ಯಾಕೋ ಗೊತ್ತಾಗಲಿಲ್ಲ. ಆದುದರಿಂದ ಸರ್ಕಾರದವರು ಎಲ್ಲ ವಿಷಯಗಳನ್ನು ಪರಿಶೀಲಿಸಿ ಈ ಒಂದು ಕೆರೆಯನ್ನು ಕಟ್ಟಿಸಿಕೊಟ್ಟು ಉಪಕಾರ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಸ್ವಾಮಿ, ಈ ಡಿಮ್ಯಾಂಡಿನ ಮೇಲೆ ಮಾತನಾಡುವುದಕ್ಕೆ ಮುಂಚೆ ಒಂದು ವಿಷಯವನ್ನು ತಮ್ಮ ಅವಗಾಹನೆಗೆ ತರಬೇಕೆಂದು ನನ್ನ ಅಭಿಲಾಷೆ. ಹಿಂದಿನ ಪ್ರೊಸೀಡಿಂಗ್ಸ್

(ಶ್ರೀ ಎಲ್. ಸಿದ್ದಪ್ಪ.)

ನಲ್ಲಿ ಇಂಡೆಕ್ಸ್ ಇರುತ್ತಿತ್ತು, ಎಂದರೆ ರೆಫರೆನ್ಸ್ ನೋಡಿಕೊಳ್ಳುವುದಕ್ಕೆ ಒಂದು ಅನುಕೂಲವಿತ್ತು. ಇತ್ತೀಚೆಗೆ ಬರತಕ್ಕ ಪ್ರೊಸೀಡಿಂಗ್ಸ್‌ನಲ್ಲಿ ಇಂಡೆಕ್ಸ್ ಇಲ್ಲದೆ ಇರುವುದರಿಂದ ನಾವು ಹಿಂದಿನ ಪ್ರೊಸೀಡಿಂಗ್ಸ್‌ನಲ್ಲಿ ರೆಫರೆನ್ಸ್ ನೋಡಬೇಕಾದರೆ ಪ್ರತಿಯೊಂದು ದಿವಸದ ಪ್ರೊಸೀಡಿಂಗ್ಸ್ ನೋಡಬೇಕು. ಆದುದರಿಂದ ದಯವಿಟ್ಟು ಇಂಡೆಕ್ಸ್ ಇರುವ ಹಾಗೆ ಪ್ರೊಸೀಡಿಂಗ್ಸ್ ಪ್ರಿಂಟ್ ಮಾಡಿಸಿ ಕೊಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು.

ಇನ್ನು ಈ ಡಿಮ್ಯಾಂಡಿನ ಮೇಲೆ ಮಾತನಾಡುತ್ತ ಒಂದು ವಿಷಯವನ್ನು ಸರ್ಕಾರದ ಅವಗಾಹನೆಗೆ ತರುವುದಕ್ಕೆ ಇಷ್ಟಪಡುತ್ತೇನೆ. ಚನ್ನಗಿರಿ ತಾಲ್ಲೂಕು ಮಾವಿನಹೊಳೆ ಪ್ರಾಜೆಕ್ಟ್ ವಿಚಾರವಾಗಿ ಸುಮಾರು ಮೂರು-ನಾಲ್ಕು ಸಲ ಈ ಸಭೆಯಲ್ಲಿ ಪ್ರಸ್ತಾಪ ಮಾಡಿದೆ. ಈ ಪ್ರಾಜೆಕ್ಟ್ 1948ನೆಯ ಇಸವಿ ಡಿಸೆಂಬರು ೧ ದನೇ ತಾರೀಖು ಮಂಜೂರಾಯಿತು. 1952ನೆಯ ಇಸವಿಯಲ್ಲಿ ಅಕ್ಟೋಬರು ಅಧಿವೇಶನದಲ್ಲಿ ಒಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಕೊಡುತ್ತ ಈ ಪ್ರಾಜೆಕ್ಟ್ 1948ನೆಯ ಇಸವಿ ಡಿಸೆಂಬರು ಮಾಹೆ ಒಂದನೆಯ ತಾರೀಖು ಮಂಜೂರಾಯಿತು ಎಂದು ತಿಳಿಸಿದರು. ಸರ್ಕಾರದವರು ಇದನ್ನು ಮಂಜೂರು ಮಾಡಿರಬೇಕಾದರೆ ನನಗೆ ತಿಳಿದ ಮಟ್ಟಿಗೆ ಎಲ್ಲವನ್ನೂ ಪರಿಶೀಲನೆ ಮಾಡಿ ಸಾಧ್ಯವಿದೆ ಎಂದು ಕಂಡು ಬಂದಮೇಲೆಯೇ ಮಾಡಿರುತ್ತಾರೆ. 1950-51ರಲ್ಲಿ ಬಡ್ಜೆಟ್ಟಿನಲ್ಲಿ 30 ಸಾವಿರ ರೂಪಾಯಿಗಳನ್ನು ಒದಗಿಸಿದರು. 1951-52ರಲ್ಲಿ ಪುನಃ 50 ಸಾವಿರ ರೂಪಾಯಿಗಳನ್ನು ಒದಗಿಸಲಾಯಿತೆಂದು ಹೇಳಿದರು. ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದೇ ಹೊರತು ಕೆಲಸವಾಗಲಿಲ್ಲ. ಯಾಕೆ ಕೆಲಸ ಮಾಡಲಿಲ್ಲವೆಂದರೆ ಈ ನದಿಯೊಳಗೆ ನೀರು ಕಡಿಮೆ ಬರುವುದರಿಂದ ಕೆಲಸ ಪ್ರಾರಂಭ ಮಾಡಲಿಲ್ಲವೆಂದು ಹೇಳಿದರು. 1953-54ನೆ ಸಾಲಿನಲ್ಲಿ ಇದೇ ವಿಷಯದಲ್ಲಿ ಒಂದು ಪ್ರಶ್ನೆ ಹಾಕಿದೆ. ಅದಕ್ಕೆ ಜವಾಬು ಕೊಡುವಾಗ ಇಲ್ಲಿಂದ ಕೆಳಗೆ ಸೂಳೆ ಕೆರೆಗೆ ನೀರು ಹೋಗುತ್ತದೆ, ಇಲ್ಲಿ ಒಂದು ಪ್ರಾಜೆಕ್ಟನ್ನು ಕಟ್ಟಿದರೆ ಸೂಳೆ ಕೆರೆಗೆ ನೀರು ಕಡಿಮೆಯಾಗುತ್ತದೆ ಎಂದು ಇದನ್ನು ತೆಗೆದುಕೊಳ್ಳಲಿಲ್ಲವೆಂದು ಹೇಳಿದರು. 1955ನೆ ಇಸವಿಯಲ್ಲಿ ಅಂದರೆ ಕಳೆದ ವರ್ಷ ಒಂದು ಇಂಟರ್‌ಪೆಲ್ಲೇಷನ್‌ಗೆ ಜವಾಬು ಕೊಡುತ್ತ ಭದ್ರ ರಿಸರ್ವಾಯರ್ ಪ್ರಾಜೆಕ್ಟಿನಿಂದ ಈ area serve ಆಗುತ್ತದೆ ಆದುದರಿಂದ ಇದನ್ನು ತೆಗೆದುಕೊಳ್ಳಲಿಲ್ಲವೆಂದು ಹೇಳಿದರು. ಒಂದೊಂದು ಸಲ ಕೇಳಿದಾಗಲೂ ಕೂಡ ಒಂದೊಂದು ರೀತಿಯಲ್ಲಿ ಜವಾಬು ಕೊಟ್ಟಿರುತ್ತಾರೆ ಎಂದು ಮರಾಮತ್ತು ಶಾಖೆಯ ಮಂತ್ರಿಗಳಿಗೆ ಪತ್ರ ಬರೆದು ಮಂತ್ರಿಗಳ ಛೇಂಬರಿನಲ್ಲಿ ಒಂದು ಮೀಟಿಂಗ್ ಮಾಡಿ ಚೀಫ್ ಇಂಜಿನಿಯರ್‌ರವರನ್ನು ಕರೆಸಿ, ಪಬ್ಲಿಕ್ ವರ್ಕ್ಸ್ ಸೆಕ್ರೆಟರಿಯವರನ್ನು ಇಟ್ಟುಕೊಂಡರೆ ನಾನೂ ಬರುತ್ತೇನೆ, ವಿಚಾರ ಮಾಡೋಣವೆಂದು ತಿಳಿಸಿದೆ. ಅದಕ್ಕೆ ಸುಮಾರು 8-10 ತಿಂಗಳ ಕೆಳಗೆ ಪಬ್ಲಿಕ್ ವರ್ಕ್ಸ್ ಸೆಕ್ರೆಟರಿಯವರಿಂದ ಜವಾಬು ಬಂತು. ಅದರಲ್ಲಿ ಪ್ರಾಜೆಕ್ಟನ್ನು ಪುನಃ ಚೀಫ್ ಇಂಜಿನಿಯರ್‌ರವರಿಗೆ ಕಳುಹಿಸಿದ್ದೇವೆ. ಈಗಿನ ತತ್ಕಾಲದ ಪರಿಸ್ಥಿತಿಗೆ ಅನುಸರಿಸಿ, ಎಸ್ಟಿಮೇಟು ರಿವೈಸ್ ಮಾಡಬೇಕೆಂದು ಕಳುಹಿಸಿದ್ದೇವೆ. ಅದು ಬಂದನಂತರ ಒಂದು ಮೀಟಿಂಗ್ ಮಾಡುವುದು ಸೂಕ್ತವೇ ಹೊರತು ಈಗಲೇ ಒಂದು ಮೀಟಿಂಗ್ ಕರೆಯುವುದು ಅನಾವಶ್ಯಕವೆಂದು ಅಭಿಪ್ರಾಯವನ್ನು ತಿಳಿಸಿದ್ದರು. ಅದನ್ನು ನಾನೂ ಒಪ್ಪಿಕೊಂಡೆ. ಮೊದಲನೆ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಪ್ರಾಜೆಕ್ಟು ಸೇರಿತು. ಅದರಲ್ಲಿ ಸೇರಿದ್ದರಿಂದ ಈ ಪ್ರಾಜೆಕ್ಟ್ ತೆಗೆದುಕೊಂಡು ಮುಗಿಸುತ್ತಾರೆ ಎಂಬ ಭರವಸೆ ಇತ್ತು. ಈಗ ಮೊದಲನೆ ಪಾಂಚವಾರ್ಷಿಕ ಯೋಜನೆ ಮುಗಿಯಿತು. ಆದರೆ ಕೆಲಸವನ್ನು ತೆಗೆದುಕೊಳ್ಳಲಿಲ್ಲ. ಪುನಃ ಪರಿಶೀಲನೆ ಮಾಡಿಸಿ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿಯಾದರೂ ಸೇರಿಸಿದ್ದಾರೆಯೇ ಎಂದರೆ ಅದರಲ್ಲಿಯೂ ಸಹ ಇಲ್ಲ. ಯಾತಕ್ಕೆ ಹೀಗಾಯಿತು ಎನ್ನುವುದು ಗೊತ್ತಾಗಲಿಲ್ಲ. ಚನ್ನಗಿರಿ ತಾಲ್ಲೂಕಿನಲ್ಲಿ ಭದ್ರ ರಿಸರ್ವಾಯರಿನ ನಾಲೆ ಹೋಗುತ್ತಿದ್ದರೂ ಕೂಡ ತಮಗೆ ಗೊತ್ತಿರುವಹಾಗೆ ಕಸಬ ಮತ್ತು ಉಬ್ರಾಣಿ ಹೋಬಳಿಗಳಿಗೆ ಅದರಿಂದ ಪ್ರಯೋಜನವಾಗುವುದಿಲ್ಲ. ಸಂತೆಬೆನ್ನೂರು ಮತ್ತು ಬಸವಾಪಟ್ಟಣ ಹೋಬಳಿಗಳಿಗೆ ಮತ್ತು ಕಸಬ ಹೋಬಳಿಯ ಮೂರು ನಾಲ್ಕು ಗ್ರಾಮಗಳಿಗೆ ಮಾತ್ರ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಮಾವಿನ ಹೊಳೆ ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಕೆಂದು ಸುಮಾರು 10-15 ವರ್ಷಗಳಿಂದ ಪತ್ರವ್ಯವಹಾರ ನಡೆದು, ಪ್ರಾಜೆಕ್ಟನ್ನು ಸರ್ಕಾರಕ್ಕೆ ಕಳುಹಿಸಿ ಎಂಟು ವರ್ಷಗಳ ಹಿಂದೆಯೇ ಮಂಜೂರಾಗಿ, ನಂತರ ಎರಡು ವರ್ಷಗಳು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದರೂ ಸಹ ಕೆಲಸವನ್ನು ತೆಗೆದುಕೊಳ್ಳದೆ ಇರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಯಿತು. ಅಲ್ಲಿಂದೀಚೆಗೆ ಇದನ್ನು ಯಾಕೆ ತೆಗೆದುಕೊಳ್ಳಲಿಲ್ಲವೆಂದು ಕೇಳಿದ್ದಕ್ಕೆ ಒಂದೊಂದು ಸಲ ಒಂದೊಂದು ರೀತಿಯ ಜವಾಬು ಕೊಡುತ್ತಿರುವುದು ತುಂಬ ವಿಷಾದವಾದ ಸಂಗತಿ. ಈಗಲಾದರೂ ಈ ಪ್ರಾಜೆಕ್ಟಿಗೆ ಹೆಚ್ಚು ಗಮನಕೊಟ್ಟು, ಪರಿಶೀಲನೆ ಮಾಡುವ ಹಾಗಿದ್ದರೆ ಪರಿಶೀಲನೆ ಮಾಡಿಸಿ, ಹಿಂದೆ ತಯಾರು ಮಾಡಿರುವ ಅಂದಾಜುಗಳನ್ನು ಬೇಕಾದರೆ ರಿವೈಸ್ ಮಾಡಿಸಿ ಈ ಕೆಲಸವನ್ನು ಕೂಡಲೇ ಮಾಡಿಸಿಕೊಡಬೇಕೆಂದು ಮಾತ್ರ ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಕೊಟ್ರ ಬಸವನಗೌಡ (ಕೂಡ್ಲಿಗಿ).—ಸ್ವಾಮಿ, ನೀರಾವರಿ ಮನವಿಯ ಸಂದರ್ಭದಲ್ಲಿ ನಾನು ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಬಳ್ಳಾರಿ ಜಿಲ್ಲೆಯಲ್ಲಿ ಇರಿಗೇಷನ್ ಆಕ್ಟನ್ನು ಜಾರಿಗೆ ತಂದಿದ್ದಾರೆ. ಈ ಆಕ್ಟ್ ಪ್ರಕಾರ ಕೆರೆಗಳ ರಿಪೇರಿ ಮಾಡಿದರೆ ಅದರಲ್ಲಿ ಅರ್ಧ ಭಾಗವನ್ನು ಸರ್ಕಾರದವರೂ ಮತ್ತು ಇನ್ನು ಅರ್ಧ ಭಾಗವನ್ನು ರೈತರೂ ಕೊಡಬೇಕು. ಮತ್ತು ನೀರು ಸರದಿ ಸಹ ಕೊಡಬೇಕು. ಕೆರೆ ರಿಪೇರಿಗೆ ಎಷ್ಟು ಖರ್ಚಾಗುತ್ತದೆಯೋ ಅದರ ಮೇಲೆ ಶೇಕಡ 3-ಶೇಕಡ 4 ಪ್ರತಿಫಲ ಬರುವ ಹಾಗೆ ಮಾಡುತ್ತಾರೆ. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಇದುವರೆಗೂ ಈ ರೀತಿಯ ಅಭ್ಯಾಸವಿಲ್ಲ. ಸರ್ಕಾರದವರೇ ರಿಪೇರಿ ಮಾಡುತ್ತಾರೆಯೇ ಹೊರತು ರೈತರಿಂದ ತೆಗೆದುಕೊಳ್ಳುವ ಪದ್ಧತಿ ಇರಲಿಲ್ಲ. ಈಗ ಮೈಸೂರು ಇರಿಗೇಷನ್ ಆಕ್ಟ್ ಬಳ್ಳಾರಿಗೆ ಅನ್ವಯಿಸಿರುವುದರಿಂದ ಬಹಳ ತೊಂದರೆಯಾಗಿದೆ. ಇದನ್ನು ಕೊಡುವುದಕ್ಕೆ ಚಿಂತಿಸುವುದಿಲ್ಲ. ಆದರೆ ತಮಗೆ ಹಣ ಬರುವ ಬಾಬುಗಳಿಗೆಲ್ಲ ಒಂದು ಕಾನೂನು, ತಾವು ಕೊಡಬೇಕಾದ್ದಕ್ಕೆ ಮತ್ತೊಂದು ಕಾನೂನು, ಹೀಗೆ ಮದರಾಸು ಮತ್ತು ಮೈಸೂರು ಕಾನೂನುಗಳನ್ನು ಸರ್ಕಾರಕ್ಕೆ ಅನುಕೂಲವಿರುವ ರೀತಿಯಲ್ಲಿ ಜಾರಿಯಲ್ಲಿಟ್ಟಿದ್ದಾರೆ. ಇದು ಸರಿಯಲ್ಲವೆಂದು ಹೇಳುತ್ತೇನೆ. ತಾವು ಬೇಕಾದರೆ ಎಲ್ಲ ಮೈಸೂರು ಆಕ್ಟ್‌ಗಳನ್ನೂ ಜಾರಿಗೆ ತಂದು ತಕ್ಷಣ ಮದರಾಸು ಆಕ್ಟ್‌ಗಳನ್ನು

ರದ್ದುಮಾಡಿ, ಅಥವಾ ಮದರಾಸು ಆಕ್ಟ್‌ಗಳನ್ನೇ ಮುಂದುವರಿಸಿಕೊಂಡು ಬನ್ನಿ. ತಾವು ಮದರಾಸು ಕಾನೂನುಗಳನ್ನೂ ಕೆಲವನ್ನೂ, ಮೈಸೂರು ಕಾನೂನುಗಳನ್ನು ಕೆಲವನ್ನೂ ಜಾರಿಯಲ್ಲಿಟ್ಟಿರುವುದರಿಂದ ಅಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೇ ಕನ್‌ಫ್ಯೂಸ್ ಆಗಿದೆ. ಒಂದು ಆರ್ಡರ್ ಕೊಡಬೇಕಾದರೆ ಒಂದು ಸಲ ಮೈಸೂರು ಆಕ್ಟ್ ಎಂದು ಹೇಳುತ್ತಾರೆ. ಮತ್ತೊಂದು ಸಲ ಅಂಥದೇ ಸನ್ನಿವೇಶದಲ್ಲಿ ಮದರಾಸು ಆಕ್ಟ್ ಎಂದು ಹೇಳುತ್ತಾರೆ. ಈ ರೀತಿಯಾಗಿ ಅವರಿಗೆ ಕನ್‌ಫ್ಯೂಷನ್ ಆಗಿ ಆಡಳಿತದ ತೊಂದರೆ ಬಹಳ ಇವೆ. ಆದುದರಿಂದ ಮೈಸೂರು ಆಕ್ಟ್‌ಗಳನ್ನೆಲ್ಲ ವಾಪಸು ತೆಗೆದುಕೊಂಡು ಮದರಾಸು ಆಕ್ಟ್‌ಗಳನ್ನು ಮುಂದುವರಿಸಿ ಅಥವಾ ಎಲ್ಲ ಮೈಸೂರು ಆಕ್ಟ್‌ಗಳನ್ನೂ ಇಟ್ಟುಕೊಳ್ಳಿ. ಯಾವ ರೀತಿಯಾದರೂ ನಮಗೆ ಸಮ್ಮತಿಯುಂಟು.

ನಮ್ಮಲ್ಲಿ ಒಂದು ಕೆರೆಯ ರಿಪೇರಿಯಾಗಬೇಕಾಗಿತ್ತು. ಅದಕ್ಕೆ ಫೀಡರ್, ಚಾನಲ್ ಸರಿಯಿಲ್ಲ, ಸ್ಲೂಯಿಸ್ ಇಲ್ಲ, ಕೆರೆ ಸರಿಯಾಗಿ ತುಂಬುವುದಿಲ್ಲ. ಮೂರು ನಾಲ್ಕು ವರ್ಷಗಳಿಗೆ ಒಂದು ಸಲ ಮಾತ್ರ ತುಂಬುತ್ತಿತ್ತು. ಅದಕ್ಕೋಸ್ಕರ ಕೆರೆಯನ್ನು ರಿಪೇರಿ ಮಾಡಬೇಕು ಎಂದೆವು. ಅದಕ್ಕೆ ಸುಮಾರು ಒಂದು ಲಕ್ಷ ರೂಪಾಯಿಗಳ ಅಂದಾಜು ಮಾಡಿದರು. ಅದರಲ್ಲಿ ಅರ್ಧ ಭಾಗವನ್ನು ಕಂಟ್ರಿಬ್ಯೂಷನ್ ಕೊಡಬೇಕು ಎಂದರು. ಆವಾಗ ಒತ್ತಾಯಮಾಡಿ ಶೇಕಡ 25ಕ್ಕೆ ಒಪ್ಪಿಸಿದೆವು. ಇದರ ಜೊತೆಗೆ water rate ಪ್ರತಿ ವರ್ಷವೂ ಕೊಡಬೇಕು ಎಂದು ತಿಳಿಸಿದರು. Water rate ಕೊಡುವುದು ಕಷ್ಟ, ಯಾಕೆಂದರೆ ನಮ್ಮಲ್ಲಿ ಲ್ಯಾಂಡ್ ರೆವಿನ್ಯೂ ಮದರಾಸು ರೂಲ್ಸ್ ಪ್ರಕಾರ ಬಹಳ ಜಾಸ್ತಿ ಇದೆ. ಎಕರೆಗೆ 10-12 ರೂಪಾಯಿಗಳು ಕಂದಾಯವನ್ನು ಪ್ರತಿ ವರ್ಷವೂ ಕೊಡಬೇಕು. ನಮ್ಮ ಕಡೆ ಕೆರೆಗಳು ಮೂರು ವರ್ಷಕ್ಕೆ ಒಂದು ಸಲ ತುಂಬುತ್ತವೆ. ಪ್ರತಿ ವರ್ಷ ಅರ್ಧ ಕೆರೆ ತುಂಬಿದರೂ ಸಹ ನಾಲ್ಕಾಣೆ ಬೆಳೆ ಅಥವ, ಎಂಟಾಣೆ ಬೆಳೆಗಿಂತಲೂ ಕಡಿಮೆ ಬಂದರೆ ಪ್ರತಿಯೊಂದು ವಿವರಗಳನ್ನೂ ಬರೆಯಬೇಕು. ಆದರೆ ಈ ಲೆಕ್ಕಗಳನ್ನು ಶ್ಯಾನುಭೋಗರು ಮನೆಯಲ್ಲಿ ಕುಳಿತು ಎಂಟಾಣೆ ಮೇಲ್ಪಟ್ಟು ಬೆಳೆಯಾಯಿತೆಂದು ಬರೆಯುತ್ತಾರೆ. ಇದರಿಂದ ಭೂಕಂದಾಯ ಕೊಡುವುದು ಮಾತ್ರ ತಪ್ಪುವುದಿಲ್ಲ. ನಮಗೆ ರಿಟರ್ನ್ ಮಾತ್ರ ಏನೂ ಇರುವುದಿಲ್ಲ. ಅದೇ ಸರ್ಕಾರದವರು ಹಣ ಖರ್ಚು ಮಾಡಬೇಕಾದರೆ ಇಷ್ಟೇ ರಿಟರ್ನ್ ಇರಬೇಕು ಎನ್ನುವುದು ಬಹಳ ಅನ್ಯಾಯವಾದದ್ದು. ಕೆರೆಗಳ ಅಂದಾಜ ಮೇಲೆ ಕಂಟ್ರಿಬ್ಯೂಷನ್ ಕೊಡಬೇಕು, ಆ ಕಡೆ ನೀರು ಸರದಿ ಕೊಡಬೇಕು ಮತ್ತು ಲ್ಯಾಂಡ್ ರೆವಿನ್ಯೂ ಮದರಾಸ್ ರೇಟ್ ಪ್ರಕಾರ ಕೊಡಬೇಕು. ಇದು ಯಾವ ನ್ಯಾಯ ? ಮೈಸೂರು ರೇಟ್ ಪ್ರಕಾರ ಕಂದಾಯ ಮಾಡಿ, ನಾವು ಕಂಟ್ರಿಬ್ಯೂಷನ್ ವಗೈರೆ ಕೊಡಲು ಸಿದ್ಧರಾಗಿದ್ದೇವೆ. ಆಕಡೆ ಮದರಾಸ್ ಆಕ್ಟ್ ಇಲ್ಲ, ಈಕಡೆ ಮೈಸೂರು ಆಕ್ಟ್ ಇಲ್ಲ, ಹೀಗೆ ಏನೋ ಒಂದು ರೀತಿಯಾಗಿ ಎರಡೂವರೆ ವರ್ಷಗಳಿಂದ ಕಷ್ಟಪಟ್ಟಿದ್ದೇ ಸಾಕು. ಇನ್ನು ಮುಂದಾದರೂ ಈ ರೀತಿಯ ತೊಂದರೆಯನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ. ಕೊಟ್ಟೂರು ಕೆರೆ ಬಗ್ಗೆ ಒಂದು ಲಕ್ಷ ಚಿಲ್ಲರೆ ರೂಪಾಯಿಗಳಿಗೆ ಅಂದಾಜಾಗಿದೆ. ಅದರ ಅಚ್ಚುಕಟ್ಟು 800 ಎಕರೆಯಿದೆ ; ರಿಪೇರಿ ಮಾಡಿದರೆ 400 ಎಕರೆ ಅಚ್ಚುಕಟ್ಟು ಜಾಸ್ತಿಯಾಗುತ್ತದೆ. ನಾವು ಪ್ರತಿ ವರ್ಷ 8-10 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಕಂದಾಯ ಕೊಡುತ್ತಿದ್ದೇವೆ. ಈ ಕೆರೆ ಬಹಳ ಹಿಂದೆಯೆ ಕಟ್ಟಿದ್ದು. ಹೊಸದಾಗಿ ಅಚ್ಚುಕಟ್ಟಿಗೆ ಬರುವುದಕ್ಕೆ ಮೈಸೂರು ಆಕ್ಟ್ ಪ್ರಕಾರ ಕಂಟ್ರಿಬ್ಯೂಷನ್ ಕೇಳಿದ್ದಾರೆ, ವಾಟರ್ ರೇಟ್ ಕೇಳಿದ್ದಾರೆ. ಅದರ ದರವನ್ನು ಮೈಸೂರು ಆಕ್ಟ್ ಪ್ರಕಾರ ರಿವೈಸ್ ಮಾಡಬೇಕು. ಒಟ್ಟು 1,200 ಎಕರೆ ತರಿಯಾಗುವುದರಿಂದ ಜಾಗ್ರತೆ ಈ ಕೆಲಸವಾಗಬೇಕು. ನಮ್ಮಲ್ಲಿ ಬಹಳ ಕೆರೆ ರಿಪೇರಿಯಾಗಿಲ್ಲ. ಅವನ್ನು ಜಾಗ್ರತೆ ರಿಪೇರಿಮಾಡಿ ಜನರಿಗೆ ಸಹಾಯ ಮಾಡಬೇಕು.

*ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ಈ ಸಭೆಯ ಮಾನ್ಯ ಸದಸ್ಯರು ಡಿಮ್ಯಾಂಡಿನ ಮೇಲಾಗಲಿ ಅಥವಾ ಬಜೆಟ್ಟಿನ ಮೇಲಾಗಲಿ ಮಾತನಾಡಿ ಅಭಿಪ್ರಾಯಗಳನ್ನು ಕೊಟ್ಟರೆ ಮಂತ್ರಿಗಳು ಅದನ್ನು ನೋಟ್ ಮಾಡಿಕೊಂಡು ಉತ್ತರ ಕೊಡುತ್ತಾರೆ, ಮುಂದೆ ನಾವು ಹೇಳಿದ ಕೆಲಸವಾಗಿ ನಮ್ಮ ಕಷ್ಟ ಪರಿಹಾರವಾಗುತ್ತದೆ ಎಂಬ ದೃಷ್ಟಿಯಿಂದ ನಾವು ಮಾತನಾಡುತ್ತೇವೆ. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಮೊದಲು ತಿಳಿಸಿ ನನ್ನ ಭಾಷಣವನ್ನು ಪ್ರಾರಂಭಿಸುತ್ತೇನೆ.

Sri H. M. CHANNABASAPPA (Minister for Industries).—I would like to submit that I am noting down every point raised by Hon'ble member and getting information on those points so that I may give them a convincing reply.

ಶ್ರೀ ಎನ್. ಹುಚ್ಚಮಾಸ್ತಿಗೌಡ—ಈ ಸಭೆ ಸಾಮಾನ್ಯವಾಗಿ ಆ ರೀತಿ ಆಗಬೇಕೆಂದು ಕೇಳುವುದನ್ನು ನಾನು ಹೇಳಿದೆ. ಮರಾಮತ್ ಇಲಾಖೆಯಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ವರ್ಷೇ ವರ್ಷ 1951-1952 ನೆಯ ಸಾಲಿನಿಂದ ನಾಲ್ಕು ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದರೆ 1956-57ಕ್ಕೆ 12 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಇಷ್ಟು ಕೋಟ್ಯಾಂತರ ರೂಪಾಯಿ ಖರ್ಚು ಮಾಡುವ ಇಲಾಖೆಯಲ್ಲಿ ಅಧಿಕಾರಿಗಳು ಮೇಲ್ಕಟ್ಟದವರಾಗಿರಬೇಕು, ಪ್ರಾಮಾಣಿಕತೆಯಿಂದ ಕೆಲಸ ಮಾಡುವವರಾಗಬೇಕು, ದಕ್ಷತೆಯುಳ್ಳವರಾಗಿರಬೇಕು ಎಂಬುದು ನಮ್ಮ ನಿರೀಕ್ಷೆ. ಆ ರೀತಿಯಾಗಿಲ್ಲದಿದ್ದರೆ ಸಮರ್ಪಕವಾಗಿ ಖಂಡಿತ ಕೆಲಸವಾಗುವುದಿಲ್ಲ. ಇಷ್ಟು ಹಣ ಖರ್ಚಾಗುವುದಕ್ಕೆ ಲೆಕ್ಕ ಕಾಣಬಹುದು. ಆದರೆ ಪ್ರಾಮಾಣಿಕತನದಿಂದ ಕೆಲಸವಾಗಿದೆಯೆ' ರೈತರಿಗೆ ನಿಜವಾಗಿಯೂ ಉಪಕಾರವಾಗಿದೆಯೆ, ಹೆಚ್ಚಾಗಿ ಲಾಭಕರವಾಗಿದೆಯೆ ಎಂಬುದನ್ನು ಗಮನಿಸಬೇಕು. ಈ ಇಲಾಖೆ ಕೆಲಸ ಕಾರ್ಯ ನಡೆಯುವಾಗ ಏನು ನ್ಯೂನತೆ ಕಂಡುಬರುತ್ತಿದೆಯೆಂಬುದನ್ನು ಹಿಂದಿನಿಂದ ಈ ಸಭೆಯ ಮಾನ್ಯ ಸದಸ್ಯರಾಗಲಿ, ರೈತರಾಗಲಿ ಇತರೆ ಮುಖಂಡರಾಗಲಿ ಸರ್ಕಾರದ ಗಮನಕ್ಕೆ ತಂದಾಗ ಅವನ್ನು ಸರಿಪಡಿಸದೆ ಹೋದರೆ ನಮ್ಮ ಸಲಹೆಗಳು, ಅನುಭವಗಳು ಎಲ್ಲವೂ ವ್ಯರ್ಥವಾಗಿ ಈ ಇಲಾಖೆಯಲ್ಲಿರುವ ನ್ಯೂನತೆ ಮುಂದುವರಿದುಕೊಂಡು ಹೋಗುತ್ತದೆ. ಇದಕ್ಕೆ ಅವಕಾಶ ಕೊಡಬಾರದು ಎಂದು ಮೊಟ್ಟ ಮೊದಲೇ ಸೂಚನೆ ಮಾಡುತ್ತೇನೆ.

ಇನ್ನು ಒಂದೆರಡು ಇಂಥ ನ್ಯೂನತೆಗಳನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಯಾವುದಾದರೂ ಒಂದು ಅಂದಾಜು ಮಂಜೂರಾದರೆ ಆ ಕೆಲಸಕ್ಕೆ ಸಿಬ್ಬಂದಿಯನ್ನು ಹೊಸದಾಗಿ ಒದಗಿಸುತ್ತಾರೆ. ಆ ಶಿಬ್ಬಂದಿಯನ್ನು ಬೇರೆ ಕೆಲಸಕ್ಕೆ

(ಶ್ರೀ ಎಚ್. ಹುಚ್ಚಮಾಸ್ತಿಗೌಡ)

ಉಪಯೋಗಿಸುವುದು ಇನ್ನೊಂದು ಕೆಲಸಕ್ಕೆ ಒದಗಿಸಿದ್ದುದನ್ನು ಮತ್ತೊಂದು ಕೆಲಸಕ್ಕೆ ಉಪಯೋಗಿಸುವುದು ಹೊಸದಾಗಿ ಲಾರಿ ಕೊಟ್ಟರೆ, ಸಾಮಾನು ಕೊಟ್ಟರೆ ಅದನ್ನು ಬೇರೆ ಕೆಲಸಕ್ಕೆ ಉಪಯೋಗಿಸುವುದು, ಹೀಗೆ ಇಲ್ಲಿ ಒಂದು ಕೆಲಸಕ್ಕೆ ಒದಗಿಸಿದ್ದನ್ನು ಮತ್ತೊಂದು ಕೆಲಸಕ್ಕೆ ಉಪಯೋಗಿಸುವ ಪದ್ಧತಿಯಿದೆ. ಇದನ್ನು ಮೊಟ್ಟ ಮೊದಲು ತಪ್ಪಿಸಬೇಕೆಂದು ಸಲಹೆ ಮಾಡುತ್ತೇನೆ. ಯಾವುದೋ ಒಂದು ಸಬ್-ಡಿವಿಜನ್‌ಗೆ ಸಿಬ್ಬಂದಿ ಕೊಟ್ಟರೆ ಬೇರೆ ಕಡೆ ಅವರಿಂದ ಕೆಲಸ ಮಾಡಿಸುವುದು, ಸಾಮಾನು ಒಂದು ಕಡೆಗೆ ಕೊಟ್ಟರೆ ಬೇರೆ ಕಡೆ ಅದನ್ನು ಉಪಯೋಗಿಸಿಕೊಳ್ಳುತ್ತಿರುವುದು ಕಡ್ಡಾಯವಾಗಿ ತಪ್ಪುವುದಕ್ಕೆ ಅವಕಾಶ ಮಾಡಬೇಕು. ಇದು ಅನಿವಾರ್ಯವೆಂದು ಭಾವಿಸುವುದಿಲ್ಲ. ಯಾವ ಕೆಲಸಕ್ಕೆ ಎಷ್ಟು ಅವಶ್ಯಕವೋ ಅಷ್ಟು ಸಿಬ್ಬಂದಿಯನ್ನು ಮಂಜೂರು ಮಾಡಿಸಿಕೊಂಡ ಮೇಲೆ ಅಲ್ಲೇ ಅದಕ್ಕೆ ಸಂಬಳ ಕೊಟ್ಟು ಕೆಲಸ ಮಾಡಿಸಬೇಕು, ಬೇರೆ ಕಡೆ ಅದಕ್ಕೆ ಕೆಲಸ ಕೊಡಬಾರದು ಎಂದು ಸಲಹೆ ಮಾಡುತ್ತೇನೆ.

ಇನ್ನು ಟೆಂಡರು ಹಾಕುವಾಗ ಸಾವಿರ ರೂಪಾಯಿಗೆ ಮೇಲ್ಪಟ್ಟ ಕೆಲಸವನ್ನು ಟೆಂಡರು ಮೂಲಕ ಕೊಡಬೇಕೆಂಬ ಆಜ್ಞೆಯಿದೆ. ಆದರೆ ಯಾವ ಸಬ್-ಡಿವಿಜನ್ ಅಥವಾ ಡಿವಿಜನ್ ನೋಡಿದರೂ ನೂರಾರು ಕೆಲಸ ಸಾವಿರ ರೂಪಾಯಿಗೆ ಮೇಲ್ಪಟ್ಟು ಇರುವುದು ಟೆಂಡರಿಲ್ಲದೆ ವಹಿಸಲ್ಪಡುವುದು ತಪ್ಪಿಲ್ಲ. ಇದನ್ನು ಕಡ್ಡಾಯವಾಗಿ ನಿಲ್ಲಿಸಿ ಆಜ್ಞೆಯನ್ನು ಪಾಲಿಸಬೇಕೆಂದು ಹೋದ ಸಲ ಬಜೆಟ್ ಅಧಿವೇಶನದಲ್ಲಿ ಒಂದು ಪ್ರಶ್ನೆ ಕಳುಹಿಸಿದ್ದೆ. ತುಮಕೂರು ಡಿಸ್ಟ್ರಿಕ್ಟ್ ಒಂದರಲ್ಲೇ ಇಂಥ ನೂರಾರು ಕೆಲಸ ಟೆಂಡರಿಲ್ಲದೆ ಕೊಟ್ಟಿರುವ ಉದಾಹರಣೆಗಳಿವೆ. ಇದರ ಉದ್ದೇಶವೇನು ? ಲೋಪದೋಷವಿರಬಾರದು, ಮಿತವ್ಯಯ ಮಾಡಬೇಕು, ಮೋಸವಾಗಬಾರದು ಎಂಬ ಉದ್ದೇಶದಿಂದ ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಕೆಲಸ ಟೆಂಡರು ಮೂಲಕ ಕೊಡಬೇಕೆಂದು ಹೇಳಿರುವಾಗ ಟೆಂಡರು ಕರೆಯದೆ ಅವನ್ನೇಕೆ ಕೊಡಬೇಕು ? ಆರ್ಡರನ್ನು ಕಡ್ಡಾಯಮಾಡಿ ಸರ್ಕಾರದವರು ಈಗ ನಡೆಯುತ್ತಿರುವ ಲೋಪವನ್ನು ತಪ್ಪಿಸದಿದ್ದರೆ ಉದ್ದೇಶ ಸಾರ್ಥಕವಾಗುವುದಿಲ್ಲ. ಟೆಂಡರಿಲ್ಲದೆ ಯಾರಾದರೂ ಆ ಕೆಲಸ ಕೊಟ್ಟರೆ ಅಂಥವರಿಗೆ ಸರ್ಕಾರ ಶಿಕ್ಷೆ ಮಾಡಬೇಕು, ಇರುವ ಆರ್ಡರನ್ನು ಪಾಲಿಸಬೇಕು ಎಂದು ತಿಳಿಸುವುದಕ್ಕೆ ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ.

ಟೆಂಡರು ಕರೆದಮೇಲೆ ಅದನ್ನು ವಿಲೆಮಾಡುವುದರಲ್ಲಿ ಬಹಳ ದೋಷವಿದೆ. ಹೋದ ಸಲ ನಮ್ಮ ತಾಲ್ಲೂಕಿಗೂ ಮದ್ದೂರು ತಾಲ್ಲೂಕಿಗೂ ಮಧ್ಯೆ ಶಿಂಷಾ ನದಿಗೆ ಕೌಡ್ಲೆ ಹತ್ತಿರ ಸೇತುವೆ ಕಟ್ಟಲು ನಾಲ್ಕು ಲಕ್ಷ ರೂಪಾಯಿಗಳ ಕೆಲಸಕ್ಕೆ ಟೆಂಡರು ಕರೆದರು. ಟೆಂಡರು ಒಡೆಯುವಾಗ ಏನಾಯಿತೆಂದರೆ ಎಗ್ಜಿಕ್ಯುಟಿವ್ ಇಂಜನಿಯರ ಆಫೀಸಿನಲ್ಲಿ ಒಂದು ಕಡೆ ಟೆಂಡರ್ ಪೇಪರ್ ಮೇಲೆ ಬ್ಲೇಡಿನಲ್ಲೋ ಅಥವಾ ಬೇರೆ ಏತರಲ್ಲೋ ಕೆರೆದು ತಿದ್ದಿದರು. ಆಮೇಲೆ ಸರ್ಕಾರಕ್ಕೆ ಅದು ಬಂತು. ವರ್ತಮಾನ ಗೊತ್ತಾಯಿತು. ಮಂತ್ರಿಗಳ ಬಳಿಗೆ ಆ ಪೇಪರ್ ಬರುವವರೆಗೆ ಈ ವಿಷಯ ಯಾರಿಗೂ ನಾನು ಹೇಳಲಿಲ್ಲ. ಮಂತ್ರಿಗಳಲ್ಲಿಗೆ ಬಂದಾಗ ಹೇಳಿದೆ. ಅವರು ಅದು ನಿಜವೆಂದು ಒಪ್ಪಿಕೊಂಡು ಮತ್ತೆ ಟೆಂಡರು ಕರೆದರು. ಆಗ 70 ಸಾವಿರ ರೂಪಾಯಿ ಕಡಮೆಯಾಗಿ ಟೆಂಡರು ಬಂತು. ಒಂದು ಟೆಂಡರಿನಲ್ಲಿ ಎಗ್ಜಿಕ್ಯುಟಿವ್ ಇಂಜನಿಯರ ಆಫೀಸಿನಲ್ಲೂ ಸಹ ಇಂಥ ಮೋಸವಾಗಿ 70 ಸಾವಿರ ರೂಪಾಯಿ ಕಡಮೆ ಬಂದಿರುವುದು ಗೊತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳ ಮೇಲೇಕೆ ಕಾರ್ಯಕ್ರಮ ತೆಗೆದುಕೊಂಡಿಲ್ಲ ? ಈ ರೀತಿ ಒಂದೊಂದು ಇಂಥ ಕೆಲಸ, ಅಗಾಧವಾದ ಅಪರಾಧ ನಡೆದಿರುವುದು ಸರ್ಕಾರದ ಕಣ್ಣಿಗೆ ಕಂಡರೂ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಂಡು ಸಂಬಂಧಪಟ್ಟ ಅಧಿಕಾರಿಗಳಲ್ಲಿಯಾರು ಈ ತಪ್ಪು ಮಾಡಿದ್ದಾರೆಂದು ಪತ್ತೆಮಾಡಿ ಶಿಕ್ಷೆ ಮಾಡದಿದ್ದರೆ 12 ಕೋಟಿ ರೂಪಾಯಿಗಳು ಖರ್ಚಾಗುವ ಕಡೆ ಎಷ್ಟು ಹೋಗುತ್ತದೆಂದು ಅಳತೆ ಮಾಡುವುದಕ್ಕಾಗುವುದಿಲ್ಲ, ಅದು ಹಿಡಿತಕ್ಕೆ ಸಿಕ್ಕುವುದಿಲ್ಲ, ಈ 12 ಕೋಟಿ ರೂಪಾಯಿಗಳ ಸಹಾಯ ಪ್ರಜೆಗಳಿಗೆ ದೊರೆಯುವುದಿಲ್ಲ.

ಇನ್ನು ಕೆಲವು ಸಬ್-ಡಿವಿಜನ್‌ಗಳಲ್ಲಿ ಕೆಲಸ ನಡೆಯುವ ವಿಷಯ ತೆಗೆದುಕೊಂಡರೆ ಕೆಲವು ಕಡೆ ಒಂದು ತಿಂಗಳಿಗೆ ಎರಡು ಸಾವಿರ ರೂಪಾಯಿಗಳು ಕೂಡ ಖರ್ಚಾಗುವುದಿಲ್ಲ, ಕೆಲವು ಕಡೆ 40-50-60 ಸಾವಿರ ರೂಪಾಯಿಗಳ ಖರ್ಚಿದೆ. ಆದರೂ ಎರಡು ಸಾವಿರ ರೂಪಾಯಿಗಳಿಗಾಗಿಯೇ ಒಂದು ಸಬ್-ಡಿವಿಜನ್ ಮುಂದುವರಿಸುತ್ತಿದ್ದಾರೆ. ಇನ್ನು ಕೆಲವು ಕಡೆ ಹೆಚ್ಚು ಕೆಲಸ ಚೆನ್ನಾಗಿ ನಡೆದರೂ ಅಧಿಕಾರಿಗಳಿಗೆ ನಿರುತ್ಸಾಹವುಂಟಾಗುವ ಹಾಗೇಕೆ ಮಾಡುತ್ತಾರೋ ಗೊತ್ತಾಗುವುದಿಲ್ಲ. ಇಲಾಖೆ ಅಧಿಕಾರಿಗಳು ಸಾಮಾನ್ಯವಾಗಿ ಒಂದು ಸಬ್-ಡಿವಿಜನ್‌ನಲ್ಲಿ ಇಷ್ಟು ಕೆಲಸ ಮಾಡುವುದುವುಕ್ಕೆ ಸಾಧ್ಯವೆಂದು ಹೇಳಿ ದಕ್ಷತೆಯನ್ನು ತೋರಿಸುವುದಕ್ಕೆ ನಿರುತ್ಸಾಹವಾಗುವಂತೆ ಮಾಡಬಾರದು. ಎರಡು ಸಾವಿರ ರೂಪಾಯಿ ಕೆಲಸ ನಡೆಯುವ ಸಬ್-ಡಿವಿಜನ್ ಹೆಚ್ಚಾಗಿದ್ದರೆ ಅನೇಕರಿಗೆ ಕೆಲಸವಿರುತ್ತದೆ, ಅಸಿಸ್ಟೆಂಟ್ ಇಂಜನಿಯರಾಗಲು ಅವಕಾಶವಿರುತ್ತದೆಂದು ಅವನ್ನು ಮುಂದುವರಿಸಬಾರದು. ಸರ್ಕಾರದವರು ಕೂಡಲೆ ಯಾವಯಾವ ಸಬ್-ಡಿವಿಜನ್ನಿಗೆ ಎಷ್ಟು ಕೆಲಸವಿದೆ, ಅದನ್ನು ಮುಂದುವರೆಸುವುದು ಅಗತ್ಯವೆ, ಇಲ್ಲವೆ ಎಂದು ಬಜೆಟ್ ಅಧಿವೇಶನಕ್ಕೆ ಪೂರ್ವಭಾವಿಯಾಗಿ ಆಯಾ ವರ್ಷ ಯಾವಯಾವ ಸಬ್-ಡಿವಿಜನ್ ಇರುವುದು ಆವಶ್ಯಕ ಎಂದು ಇಲಾಖೆಯಿಂದ ವರದಿ ತರಿಸಿ ವಜಾ ಮಾಡಬೇಕಾದದ್ದನ್ನು ವಜಾ ಮಾಡಿ ಮುಂದುವರಿಸಬೇಕಾದದ್ದನ್ನು ಮುಂದುವರಿಸಿ ಅದಕ್ಕೆ ತಕ್ಕಂತೆ ಬಜೆಟ್ಟಿನಲ್ಲಿ ಹಣ ಒದಗಿಸುವ ಏರ್ಪಾಡು ಪ್ರತಿ ವರ್ಷ ನಡೆಯುವುದು ಬಹಳ ಅಗತ್ಯ.

ಸ್ವಾಮಿ, ಇನ್ನು ಈ ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟುತ್ತಿರುವಕಡೆಗಳಲ್ಲಿ ಆ ಜಮೀನು ಮುಳುಗಡೆ, ಗ್ರಾಮಗಳು ಮುಳುಗಡೆ ಆಗತಕ್ಕಂಥ ಸಂದರ್ಭಗಳಲ್ಲಿ ಆ ಜನರಿಗೆ ಅಲ್ಲಿ ನೀರುನಿಲ್ಲುವುದಕ್ಕೆ ಮುಂಚಿತವಾಗಿಯೇ ಅವರಿಗೆ ನೆಲಸಲು ಬೇರೆ ಸ್ಥಳಗಳನ್ನೂ ಮತ್ತು ಮನೆಗಳನ್ನೂ ಕಟ್ಟಿಕೊಳ್ಳಲು ಅವರಿಗೆ ಸೂಕ್ತ ಪರಿಹಾರ ದ್ರವ್ಯವನ್ನು ಅತಿ ಜರೂರಾಗಿ ಕೊಡತಕ್ಕದ್ದು ತೀರಾ ಅಗತ್ಯ. ಆ ರೈತಾಪಿ ಜನರು ಅಲ್ಲಿ ತಮಗಿದ್ದಂಥ ಜಮೀನು, ಆಸ್ತಿಪಾಸ್ತಿಗಳನ್ನೆಲ್ಲಾ ನೀರು ಮುಳುಗಡೆ ಮಾಡಿಕೊಂಡು ಅವರು ಕಷ್ಟಗಳನ್ನು ಅನುಭವಿಸುತ್ತಿರುವಾಗ ಅವರ ಪಕ್ಕದಲ್ಲಿ ಬೇರೆ ಜನರು ಸುಖಪಡುತ್ತಿರುವುದನ್ನು ಆ ಜನರು ನೋಡಿ ಅನುಭವಿಸುತ್ತಿರುವಂಥ ಅವರ ವ್ಯಥೆಯನ್ನು ಹೇಳತೀರದಾಗಿದೆ. ಅವರನ್ನು ಆ ಸ್ಥಿತಿಯಲ್ಲಿ ನೋಡುವುವುದಕ್ಕೆ ನಮಗೇ ತುಂಬ ಕಷ್ಟವಾಗಿದೆ. ಕೃಷ್ಣರಾಜಸಾಗರ ಜಲಾಶಯವನ್ನು ಕಟ್ಟಿ ಇಲ್ಲಿಗೆ ಎಷ್ಟೋ ವರ್ಷಗಳಾದವು. ಆದರೆ ಇನ್ನೂ ಈ ಹೊತ್ತಿನವರೆಗೂ ಕೂಡ ಕೆಲವರಿಗೆ ಆ ಜಮೀನು ಮುಳುಗಡೆಯಾದ

ಬಗ್ಗೆ ಅವರಿಗೆ ಸಲ್ಲಬೇಕಾದ ಪ ಹಾರ ದೊರೆತಿಲ್ಲ. ಅನೇಕರಿಗಿನ್ನೂ ಆ ಲೆಕ್ಕದ ಪ್ರಕಾರ ಕೊಡಬೇಕಾದ್ದು ಹಾಗೆ ಮುಲ್ಕಿ ನಿಂತು ಬಂದಿರುವುದಾಗಿ ನಾನು ಕೇಳುತ್ತಿದ್ದೇನೆ. ಇನ್ನು ಹೀಗೆಯೇ ಆ ಮಾರ್ಕೋನಹಳ್ಳಿ ಜಲಾಶಯವನ್ನು ಕಟ್ಟಿ ಇಲ್ಲಿಗೆ 14 ವರ್ಷಗಳ ಮೇಲಾಯಿತು. ಆ ಮುಳುಗಡೆಯಾದ ಜಮೀನಿನ ಬಗ್ಗೆ ಜನರಿಗೆ ಪಾವತಿಯಾಗಬೇಕಾದಂಥ ಆ ಪರಿಹಾರದ ಬಗ್ಗೆ ಹಿಂದಿನ ಬಡ್ಜೆಟ್ಟಿನಲ್ಲಿ 4 ಲಕ್ಷ 60 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದ್ದಿತು. ಆದರೆ ಈವರೆಗೆ ಆ ರೀತಿ ಪಾವತಿ ಮಾಡಿರತಕ್ಕ ಹಣ ಕೇವಲ 56 ಸಾವಿರ ರೂಪಾಯಿಗಳು ಮಾತ್ರ. ಹಾಗೆ ಜಮೀನು ಮತ್ತು ಗ್ರಾಮಗಳು ಮುಳುಗಡೆಯಾದಂಥ ಜನರಿಗೆ ಆ ಕೂಡಲೇ ಅವರಿಗೆ ಅತ್ಯಗತ್ಯವಾಗಿ ಬೇಕಾಗಿರತಕ್ಕಂಥ ಕುಡಿಯುವ ನೀರಿನ ಬಾವಿ, ವಾಸಕ್ಕೆ ಮನೆ ಇತ್ಯಾದಿ ಅನುಕೂಲಗಳನ್ನು ಕಲ್ಪಿಸಿಕೊಡದೆ ಹೋದರೆ ಅವರು ಅನುಭವಿಸುತ್ತಿರತಕ್ಕಂಥ ಕಷ್ಟಪಡತಕ್ಕ ಯಾತನೆ ಅದನ್ನು ಅನುಭವಿಸುತ್ತಿರುವವರಿಗೆ ಗೊತ್ತೇ ವಿನಃ ಇಲ್ಲಿ ಹೊರಗಡೆ ಹಾಯಾಗಿ ಕುಳಿತುಕೊಂಡು ಸಾವಿರ ರೂಪಾಯಿ ಸಂಬಳ ಪಡೆಯುತ್ತಿರುವಂಥ ಅಧಿಕಾರಿಗಳಿಗಾಗಲಿ ಅಥವಾ ಮಂತ್ರಿಗಳಿಗಾಗಲಿ ಆ ಕಷ್ಟಗಳು ಗೊತ್ತಾಗುವುದಿಲ್ಲ. ಅಂತೂ ಈಗಲಾದರೂ ಇಲ್ಲಿಯವರೆಗೆ ಆದದ್ದಾಯಿತು, ಹೀಗೆ ನೀರು ಮುಳುಗಡೆ ಆಗತಕ್ಕಂಥ ಜಮೀನಿನ ಮಾಲೀಕರುಗಳಿಗೆ ಆ ಕೆರೆಗಳಲ್ಲಿ ನೀರು ನಿಲ್ಲುವ ಪೂರ್ವಭಾವಿಯಲ್ಲೇ ಅವರಿಗೆ ಸಲ್ಲಬೇಕಾದ ಅನುಕೂಲಗಳನ್ನು ಕಲ್ಪಿಸಬೇಕು, ಅವರಿಗೆ ಲಭಿಸಬೇಕಾದ ಪರಿಹಾರ ಧನ ಅವರಿಗೆ ದೊರೆಯುವಹಾಗೆ ಕೆಲಸಗಳನ್ನು ಬೇಗ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಕೆರೆಗಳನ್ನು ಕೆಲವು ಕಡೆ ಕಟ್ಟಿದನಂತರ ಅಲ್ಲಿಯ ಜನರಿಗೆ ತಿರುಗಾಡಲು ಯಾವ ರಸ್ತೆಗಳೂ ಇರುವುದಿಲ್ಲವೆಂದು ಈಗಾಗಲೇ ಶ್ರೀ ಮಾಧವಾಚಾರ್ ಅವರು ಹೇಳಿದರು. ಯಾವ ಒಂದು ಊರಿಗೆ ಹೋಗುವುದಕ್ಕಾಗಲಿ ಅಥವಾ ರೈತಾಪಿ ಜನರಿಗೆ ವ್ಯವಸಾಯ ಸಂಬಂಧದಲ್ಲಿ ತಿರುಗಾಡಲು ಅಂಥ ಕೆರೆಗಳನ್ನು ಕಟ್ಟತಕ್ಕ ಪ್ರದೇಶದಲ್ಲಿ ಸರ್ಕಾರದವರೇ ಆ ರಸ್ತೆಗಳನ್ನು ಮಾಡಿಸಿ ಕೊಡಬೇಕು ಎಂಬುದಾಗಿ ಇರಿಗೇಷನ್ ಆಕ್ಟಿನಲ್ಲಿ ಒಂದು ಪ್ರಾವಿಷನ್ ಕೂಡ ಇದೆ. ಆದರೆ ಈ ದಿವಸ ಅಂಥ ಪ್ರಾಜೆಕ್ಟುಗಳನ್ನು ನಿರ್ಮಾಣ ಮಾಡತಕ್ಕ ಸಂದರ್ಭಗಳಲ್ಲಿ ಆ ರಸ್ತೆಗಳನ್ನು ನಿರ್ಮಾಣ ಮಾಡತಕ್ಕ ಬಗ್ಗೆ ಬಡ್ಜೆಟ್ಟಿನಲ್ಲಿ ಈ ಹಣವನ್ನು ಸೇರಿಸುತ್ತಿಲ್ಲ. ಆದರೆ ಆ ರಸ್ತೆಗಳನ್ನು ಇವರು ಇಂದಲ್ಲ ನಾಳೆಯಾದರೂ ಮಾಡಿಸಲೇ ಬೇಕಾಗಿರುತ್ತದೆ. ಆದರೆ ಮೊದಲೇ ಅಲ್ಲಿ ಈ ರಸ್ತೆಗಳನ್ನು ಮಾಡಿಸುವುದು ಸುಲಭ. ಅಲ್ಲಿ ಗದ್ದೆಗಳನ್ನು ಮಾಡಿದ ತರುವಾಯ, ಕಾಲುವೆಗಳನ್ನು ಅಗೆದನಂತರ ಈ ರಸ್ತೆಗಳನ್ನು ಮಾಡಿಸಬೇಕು ಎಂದರೆ ಒಂದಕ್ಕೆ ಹತ್ತರಷ್ಟು ಖರ್ಚು ಜಾಸ್ತಿಯಾಗುತ್ತದೆ. ಆದುದರಿಂದ ಇನ್ನು ಮುಂದಕ್ಕೆ ಈ ಇರಿಗೇಷನ್ ಟ್ರ್ಯಾಕ್ಸ್‌ಗಳನ್ನು ಮಾಡಲು ಆಯಾ ಪ್ರಾಜೆಕ್ಟಿನ ಬಡ್ಜೆಟ್ಟಿನಲ್ಲೇ ಈ ಒಂದು ಐಟಮ್ಮನ್ನು ಸೇರಿಸತಕ್ಕಂಥ ಒಂದು ವ್ಯವಸ್ಥೆ ಆಗಬೇಕಾದದ್ದು ಸೂಕ್ತ ಎಂದು ಹೇಳುತ್ತೇನೆ.

ಇನ್ನು ಈ ಅಂದಾಜಗಳನ್ನು ರಿವೈಜ್ ಮಾಡತಕ್ಕಂಥಾದ್ದು ಒಂದು ದೊಡ್ಡ ವಿಚಾರ. ಹಿಂದೆ ನಮ್ಮ ಶ್ರೀ ಎಲ್. ಸಿದ್ದಪ್ಪನವರು ಮಂತ್ರಿಗಳಾಗಿದ್ದ ಕಾಲದಲ್ಲಿ 73 ಸಾವಿರ ರೂಪಾಯಿಗಳಿಗೆ ಒಂದು ಅಣೆಯನ್ನು ಮಂಜೂರು ಮಾಡಿದ್ದರು. ಆ ಅಂದಾಜನ್ನು ಪುನಃ ರಿವೈಜ್ ಮಾಡಲಾಯಿತು. ಎಷ್ಟಕ್ಕೆ ಎಂದರೆ ಒಂದು ಲಕ್ಷ 75 ಸಾವಿರ ರೂಪಾಯಿಗಳಿಗೆ ಅದು ರಿವೈಜ್ ಆಯಿತು. ಮೊನ್ನೆ ಕೂಡ ಇಂಥಾದ್ದೇ ಒಂದು ವಿಚಾರ ನಡೆಯುವುದರಲ್ಲಿತ್ತು. ಆದರೆ ನಾವು ಆ ವಿಚಾರವನ್ನು ಕಾಲಕ್ಕೆ ಸರಿಯಾಗಿ ಸರ್ಕಾರದವರ ಗಮನಕ್ಕೆ ತಂದೆವು. ಹಾಗೆ ಮಾಡಿದ್ದರಿಂದ 34 ಸಾವಿರಕ್ಕೆ ಆಗುತ್ತಿದ್ದಂಥ ಅಂದಾಜ 24 ಸಾವಿರಕ್ಕೆ ಇಳಿಯಿತು. ಈ ದಿವಸ 60-70 ಸಾವಿರ ರೂಪಾಯಿಗಳಲ್ಲಿ ಆಗತಕ್ಕಂಥ ಯಾವುದಾದರೂ ಒಂದು ಕೆಲಸವನ್ನು ಕಂಟ್ರಾಕ್ಟರಿಗೆ ಒಪ್ಪಿಸಿದರೆ ಆತನು ಬೇಗ ಕೆಲಸವನ್ನೇ ನಡೆಸುವುದಿಲ್ಲ. ಏತಕ್ಕಾಗಿ ಹೀಗೆ ನಿಧಾನ ಮಾಡುತ್ತಿದ್ದೀಯೆಂದು ಕೇಳಿದರೆ ಈ ಅಂದಾಜಗಳು ಇನ್ನೂ ರಿವೈಜ್ ಆಗಿಲ್ಲ ಅದಕ್ಕಾಗಿ ಕಾಯುತ್ತಿದ್ದೇನೆ ಎಂದು ಹೇಳುತ್ತಾನೆ. ಇಲಾಖೆಯನ್ನು ನೀವು ಮೊದಲೇ ಏತಕ್ಕಾಗಿ ಆ ಅಂದಾಜನ್ನು ರೆವ್ಯೂ ಮಾಡಲಿಲ್ಲ ಎಂದು ಕೇಳಿದರೆ ಅವರು ಅದಕ್ಕೇನೋ ಒಂದು ಕಾರಣ ಹೇಳಿಬಿಡುತ್ತಾರೆ. ಹೀಗೆಲ್ಲಾ ಮಾಡುವುದು ಸರಿಯಲ್ಲ. ಈ ಪ್ರಾಜೆಕ್ಟ್ ಕೆಲಸಗಳನ್ನು ಮಂಜೂರು ಮಾಡುವಾಗಲೇ ಅದರ ಜೊತೆಯಲ್ಲೇ ಮೋಡಬಾಯಿ, ಇತ್ಯಾದಿಗಳ ಅಂದಾಜನ್ನು ಸೇರಿಸಿ ಒಟ್ಟಿಗೆ ಮಾಡತಕ್ಕದ್ದು ಅಗತ್ಯ, ಪ್ರತಿಯೊಂದು ಐಟಂಗೂ ಒಂದೊಂದಾವರ್ತಿ ಅಂದಾಜ ತಯಾರಿಸುವುದರಿಂದ ಪುನಃ ವೆಚ್ಚ ಹೆಚ್ಚಾಗುತ್ತದೆ. ಹಾಗೆ ಒಂದಾವರ್ತಿ ತಯಾರಿಸಿದ ಅಂದಾಜನ್ನು ಪುನಃಬದಲಾಯಿಸಬಾರದು. ತಯಾರು ಮಾಡುವಾಗಲೇ ಆಗಿನ ದರ ಇತ್ಯಾದಿಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಅದನ್ನು ಮಂಜೂರು ಮಾಡುವುದು ಅತ್ಯಗತ್ಯ. ಒಂದುಸಲ ಮಂಜೂರಾದ ಅಂದಾಜನ್ನು ಮತ್ತೆ ಒಂದುಸಲ ಪುನಃ ಇನ್ನೊಂದು ಸಲ ಹೀಗೆಲ್ಲಾ ರಿವೈಸ್ ಮಾಡುತ್ತಿರುವುದರಲ್ಲಿ ಏನೋ ಒಂದು ದುರುದ್ದೇಶವಿದೆ ಎಂಬುದನ್ನು ಸರ್ಕಾರದವರು ಗಮನವಿಟ್ಟು ನೋಡಬೇಕಾದದ್ದು ಅಗತ್ಯವೆಂದು ಹೇಳುತ್ತೇನೆ. ಇನ್ನು ಕೆಲವು ಕಡೆ ಈ ಮೋಡಬಾಯಿಗಳನ್ನು ಇಡತಕ್ಕ ಸಂದರ್ಭದಲ್ಲಿ ಅದೇನು ಗುಂಡಾಗಿರಬೇಕೇ ಅಥವಾ ಚಚೌಕವಾಗಿರಬೇಕೇ ಎಂಬುದನ್ನು ಪರೀಕ್ಷೆ ಮಾಡುವುದಕ್ಕೆ ಒಂದು ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. ಹೀಗೆ ಈ ಇಲಾಖೆಯವರು ಆಚರಣೆಯಲ್ಲಿ ತಂದಿರತಕ್ಕಂಥ ಕೆಲವು ದುರಭ್ಯಾಸಗಳನ್ನು ಬೇಗ ತಪ್ಪಿಸಬೇಕೆಂದು ನಾನು ಇಷ್ಟಪಡುತ್ತೇನೆ.

ಇನ್ನು ಈ ಎಕರೇಜ್ ಸೆಸ್ಸನ್ನು ತೆಗೆದುಕೊಳ್ಳುವ ವಿಚಾರ: 1900-1901ನೆಯ ಇಸವಿಯಲ್ಲಿ ಒಂದು ಅಣೆಯನ್ನು ಕಟ್ಟಲಾಗಿದೆ. ಅದರ ಕೆಳಗೆ 7-8 ಎಕರೆ ತರೀ ಜಮೀನಿದೆ. ಅಲ್ಲಿ ಈ ದಿವಸ ಕೂಡ ಎಕರೆ ಒಂದಕ್ಕೆ ಎಂಟು ಆಣೆ ಪ್ರಕಾರ ಸೆಸ್ಸನ್ನು ವಸೂಲ್ಮಾಡುತ್ತಿದ್ದಾರೆ. ಈ ರೀತಿ ಮಾಡಬೇಕೆಂಬುದಾಗಿ ಏನಾದರೂ ಒಂದು ಸರ್ಕಾರಿ ಹುಕುಂ ಇದೆಯೇ ಎಂದು ಕೇಳುತ್ತೇನೆ ? ಆದರೆ ಇದರ ಮೈನ್‌ಟನೆನ್ಸ್ ಜವಾಬ್ದಾರಿ ಸರ್ಕಾರಕ್ಕೆ ಸೇರಿರುತ್ತದೆ. ಇದು ನಮ್ಮ ಬದುಕು, ಇದರ ನಿಗಾವಣೆ ನಮಗೆ ಸೇರಿದ್ದು ಎನ್ನುವುದನ್ನು ಸರ್ಕಾರದ ಗಮನಕ್ಕೇ ಬಂದಹಾಗೆ ಕಾಣುವುದಿಲ್ಲ. ಇದರ ದುರಸ್ತಿ ವಿಚಾರ ಇತ್ಯಾದಿಗಳ ಬಗ್ಗೆ ಸಂಬಂಧಪಟ್ಟ ಇಂಜಿನಿಯರ್ ಅಧಿಕಾರಿಗಳಿಗೆ ತಿಳಿಸಿದ್ದಾಯಿತು. ಆದರೆ ಆ ಕೆಲಸವಿನ್ನೂ ಆಗಿಲ್ಲ.

ಇನ್ನು ಈ ಮೊದಲನೆಯ ಪಂಚವಾರ್ಷಿಕ ಯೋಜನೆ ಬಗ್ಗೆ ಶಿಂಷಾ ವ್ಯಾಲಿ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಈ ವ್ಯಾಲಿಯನ್ನು ಪೂರ್ಣವಾಗಿ ಡೆವಲಪ್ ಮಾಡುವುದಕ್ಕೆ

(ಶ್ರೀ ಎಚ್. ಹುಚ್ಚಮಾಸ್ತಿಗೌಡ.)

ಅವಕಾಶವಿದೆ. ಅಲ್ಲಿ ಒಂದು ಅಣೆಕಟ್ಟನ್ನು ಹಾಕುವುದಕ್ಕೆ ಅವಕಾಶವಿದೆ. ಈ ದಿವಸ ಅಲ್ಲಿ ನೀರೆಲ್ಲಾ ವೃಥಾ ಪೋಲಾಗಿ ಹೋಗುತ್ತಿದೆ. ಆದುದರಿಂದ ಆ ನೀರನ್ನು ಉಪಯೋಗಿಸಿಕೊಳ್ಳಲು ಸರ್ಕಾರದವರಿಗೆ ಅವಕಾಶವಿದೆ. ಆ ನದಿ ಯಾವ ಒಪ್ಪಂದಗಳಿಗೂ ಒಳಪಟ್ಟಿಲ್ಲ. ಅದು ಷೆಡ್ಯೂಲ್ಡ್ ರಿವರ್‌ಗಳ ಪಟ್ಟಿಗೆ ಸೇರಿರುವುದಿಲ್ಲ. ಆದಕಾರಣ ಈ ವ್ಯಾಲಿಯನ್ನು ಡೆವಲಪ್ ಮಾಡಿ ಅಲ್ಲಿ ಒಂದು ಅಣೆಕಟ್ಟನ್ನು ಹಾಕಬೇಕೆಂದು ಮೊದಲಿಂದಲೂ ಕೇಳುತ್ತಿದ್ದೇವೆ. ಆದರೆ ಆ ಕೆಲಸವಿನ್ನೂ ಆಗಿಲ್ಲ. ಮೊದಲನೆ ಪಾಂಚ ವಾರ್ಷಿಕ ಯೋಜನೆ ಮುಕ್ತಾಯವಾಯಿತು. ಆ ವಿಷಯವನ್ನು ಸರ್ಕಾರದವರು ಇನ್ನೂ ವಿಮರ್ಶೆ ಮಾಡಿಲ್ಲ. ಶ್ರೀ ಎಚ್. ಕೆ. ವೀರಣ್ಣಗೌಡರು ಅವರ ಭಾಷಣದಲ್ಲಿ ಒಂದು ಅಂಶವನ್ನು ತಿಳಿಸಬೇಕಾಗಿತ್ತು. ಆದರೆ ಅವರು ಅದನ್ನು ಮರೆತು ಕೈಬಿಟ್ಟಿದ್ದಾರೆ. ಈ ಮಾರ್ಕೋನಹಳ್ಳಿ ಕೆರೆಯ ಬೈಲಿನಿಂದ ಬರುತ್ತಿರುವ ಜೌಗು ನೀರು ಆ ಷಿಂಷಾ ನದಿಯ ಪಕ್ಕದಲ್ಲಿರುವ ನಾಲೆ ಎಂಬ ಸ್ಥಳದಲ್ಲಿ ಬಂದು ಆ ನದಿಗೆ ಸೇರುತ್ತದೆ. ಆ ಸ್ಥಳದಲ್ಲಿ ಒಂದು ಕೆರೆಯನ್ನು ಕಟ್ಟಿದರೆ ಆ ನೀರನ್ನೆಲ್ಲಾ ಉಪಯೋಗಿಸಿಕೊಳ್ಳಲು ಅವಕಾಶವಾಗುತ್ತದೆ. ಆದುದರಿಂದ ಅಲ್ಲಿ ಶಿಂಷಾ ನದಿಗೆ ಒಂದು ಪಿಕ್-ಅಪ್ಪನ್ನಾದರೂ ಕಟ್ಟತಕ್ಕದ್ದು ಅಗತ್ಯ. ಹಾಗೆ ಅಲ್ಲಿ ಅದನ್ನು ಕಟ್ಟಲು ಎಷ್ಟರ ಮಟ್ಟಿಗೆ ಸಾಧ್ಯಾಸಾಧ್ಯತೆ ಇದೆ ಎಂಬುದನ್ನಾದರೂ ನೋಡಿ ಎಂದು ನಾವು ಎಷ್ಟೋ ವೇಳೆ ಮನವಿ ಮಾಡಿಕೊಂಡಿದ್ದಾಯಿತು. ಆದರೆ ಅದಕ್ಕೆ ಗಮನಕೊಟ್ಟಿಲ್ಲ. ಈ ದಿವಸ ಆ ಮಾರ್ಕೋನಹಳ್ಳಿ ಕೆರೆಯಲ್ಲಿ ನಿಲ್ಲುವ ನೀರಿನ ಪ್ರಮಾಣ ಎಷ್ಟೆಂದರೆ 8,500 ಯೂನಿಟ್‌ಗಳು. ಇಷ್ಟು ನೀರು ಆ ಕೆರೆಗೆ ಹಿಡಿಸುತ್ತದೆ ಎಂದು ಹೇಳಿ ಅದನ್ನು ಕಟ್ಟಿದ್ದಾರೆ. ಆದರೆ ಈಗಾಗಲೇ ಆ ಕೆರೆಯ ಕೆಳಗೆ 12 ಸಾವಿರ ಎಕರೆ ತರೀ ಸಾಗುವಳಿ ಜಮೀನಾಗಿದೆ. ಈ ಅಚ್ಚುಕಟ್ಟಿಗೆ ಆ ನೀರು ಸಾಕಾಗುವುದಿಲ್ಲ. ಅದಕ್ಕಾಗಿ ಈಗಾಗಲೇ ಈ ವರ್ಷ ಆಗಸ್ಟ್ ತಿಂಗಳಿನಿಂದ—ಸೆಪ್ಟೆಂಬರ್ ತಿಂಗಳವರೆಗೆ ಇಂಟರ್‌ಮಿಟೆಂಟ್ ವಾಟರ್ ಸಪ್ಲೈ ಕೊಡುತ್ತಿದ್ದಾರೆ. ತಾವು ಇದನ್ನು ತಪ್ಪಿಸಬೇಕು. ಇದರಲ್ಲಿ ನೀರು ವ್ಯಯವಾಗದಂತೆ ಮಾಡಬೇಕಾಗಿದ್ದರೆ ಆ ಮೊಡಬಾಯಿಗಳನ್ನು ಬಂದೋಬಸ್ತಾಗಿ ಕಟ್ಟಬೇಕು. ಅದಕ್ಕಾಗಿ ಕಳೆದ ಎರಡು-ಮೂರು ವರ್ಷಗಳ ಬಡ್ಜೆಟ್ಟಿನಲ್ಲೂ ಹಣ ಒದಗಿಸಲಾಗಿದ್ದಿತು. ಆದರೆ ಈ ವರ್ಷ ಆ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿಲ್ಲ. ಇದರಿಂದ ಆ ಮಾರ್ಕೋನಹಳ್ಳಿ ಕೆರೆ ಕೆಳಗಿನ 12 ಸಾವಿರ ಎಕರೆ ಅಚ್ಚುಕಟ್ಟಿಗೂ ನೀರು ಸರಬರಾಯಿ ಆಗಲು ಬಹಳ ತೊಂದರೆಯಾಗುತ್ತಿದೆ. ಈ ಕಷ್ಟ ನಿವಾರಣೆಗೋಸ್ಕರವಾಗಿ ಬರಲಿರುವ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಾದರೂ ಮಾನ್ಯ ಮಂತ್ರಿಗಳು ಈ ಕೆಲಸವನ್ನು ಪೂರ್ವಭಾವಿಯಾಗಿಯೇ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

12-30 P.M.

ಇನ್ನೊಂದು ವಿಷಯ ಹೇಳಬೇಕಾಗಿದೆ. ವಿಶ್ವೇಶ್ವರಯ್ಯ ನಾಲೆಯ ಕಡೆ ಭಾಗದ ಕೆಲವು ಗ್ರಾಮಗಳು ಇವೆ. ಅವು ಮದ್ದೂರು ತಾಲ್ಲೂಕಿನ ಗ್ರಾಮಗಳು. ಆ ಗ್ರಾಮಗಳಿಗೆ ನೀರು ಒದಗದೆ ವರ್ಷೇ ವರ್ಷೇ ಬಹಳ ತೊಂದರೆಯಾಗುತ್ತಾ ಇದೆ. ಪ್ರತಿ ವರ್ಷವೂ ಅಲ್ಪ ಸ್ವಲ್ಪ ನಷ್ಟವಾಗುತ್ತಾ ಇದೆ. ಇದು ಸರಿಯಾಗಬೇಕಾದರೆ ಚಿಕ್ಕ ತೊರೆ ಎಂದು ಇದೆ ಅದರ ಹತ್ತಿರ ಒಂದು ಕಾಲುವೆ ತೆಗೆದರೆ ಮತ್ತೊಂದು ಸಾವಿರ ಎಕರೆಗೆ ಆಗುವಷ್ಟು ನೀರು ನಿಲ್ಲುತ್ತದೆ. ಅದನ್ನು ವಿಶ್ವೇಶ್ವರಯ್ಯ ನಾಲೆಯ ಕಡೆಯ ಭಾಗದ ಕೆಲವು ಜಮೀನುಗಳಿಗೆ ಉಪಯೋಗಿಸಿಕೊಳ್ಳಲು ಅವಕಾಶವಾಗುತ್ತದೆ. ಹೀಗೆ ಶಿಂಷಾವ್ಯಾಲಿಯಲ್ಲಿರತಕ್ಕ ಅನೇಕ ಪಿಕ್‌ಅಪ್ ಮತ್ತು ಕೆರೆಗಳನ್ನು ಕಟ್ಟುವುದರಿಂದ ಶಿಂಷಾ ವ್ಯಾಲಿ ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿ ಹೆಚ್ಚು ಪ್ರಯೋಜನವಾಗುತ್ತದೆ. ಸರ್ಕಾರದವರು ಇದಕ್ಕೆ ಸೂಕ್ತವಾದ ಕಾರ್ಯ ಕ್ರಮಗಳನ್ನೆಲ್ಲಾ ಮಾಡಬೇಕೆಂದು ಹೇಳಿ ಸಲಹೆ ಮಾಡಲಿಕ್ಕೆ ಇಷ್ಟಪಡುತ್ತೇನೆ.

*ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಇದುವರೆಗೂ ಈ ಡಿಮ್ಯಾಂಡಿನ ವಿಷಯವಾಗಿ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ತಮ್ಮ ಗಮನಕ್ಕೆ ತಂದಿದ್ದಾರೆ. ನಾನಾದರೋ ಸುಮಾರು ನಾಲ್ಕು ವರ್ಷಗಳಿಂದೀಚೆಗೆ ಈ ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಹೆಚ್ಚಿನ ಕೆಲಸ ನಡೆದಿದೆ, ಹೆಚ್ಚಿನ ಕೆಲಸ ನಡೆದು ಅದರಿಂದ ನಮಗೆ ಆಹಾರ ಉತ್ಪತ್ತಿಯೂಕೂಡ ಜಾಸ್ತಿಯಾಗಿದೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಹಿಂದೆ ಈ ಮಾನ್ಯ ಸಭೆಯ ಅನೇಕ ಮಾನ್ಯ ಸದಸ್ಯರು ಅಪ್ಪಣೆ ಕೊಡಿಸಿದ್ದಾರೆ; ಏನೆಂದರೆ, ಅನೇಕ ಕಡೆ ಸರ್ವೇ ಆದಂಥಾ ಕೆಲಸ ಕಾರ್ಯಗಳು ಮತ್ತು ಮಾಡಬೇಕಾದ ಕೆಲಸ ಕಾರ್ಯಗಳು ಹತ್ತಾರು ವರ್ಷಗಳಾಗಿ ಅಂದಾಜು ತಯಾರಾಗಿದ್ದರೂ ಕೂಡ ಅವನ್ನು ಗಮನಿಸಿಲ್ಲ ಎಂದು. ಅದರಿಂದಾಗಿ ನಮ್ಮಂಥಾ ಮಾನ್ಯ ಸದಸ್ಯರು ಕೆಲವು ಹೊಸ ಕೆರೆಗಳನ್ನು ಕಟ್ಟಬೇಕೆಂಬ ತತ್ಕಾಲಿಕವಾದ ಬೇಡಿಕೆಗಳನ್ನು ಇಡತಕ್ಕ ಸನ್ನಿವೇಶಗಳೊದಗುವುದರಿಂದ ಆ ಹಿಂದಿನ ಏನು ಒಂದು ಪದ್ಧತಿ ಇದೆ ಅದನ್ನು ಸ್ವಲ್ಪ ನಿಲ್ಲಿಸುವ ಮನೋಭಾವವನ್ನು ಉಂಟು ಮಾಡಿಕೊಳ್ಳುವುದು ಒಳ್ಳೆಯದು ಎಂದು ನಾನು ತಿಳಿದುಕೊಂಡಿದ್ದೇನೆ. ಮೈಸೂರು ಸಂಸ್ಥಾನದ ಪಿ. ಡಬ್ಲ್ಯು. ಡಿ. ಇಲಾಖೆಯವರು ದಕ್ಷತೆಯಿಂದ ಕೆಲಸ ಮಾಡುತ್ತಾರೆ. ಅವರ ದಕ್ಷತೆಯಿಂದಲೇ ಪಿ. ಡಬ್ಲ್ಯು. ಡಿ. ಇಲಾಖೆಯ ಕೆಲಸ ಕಾರ್ಯಗಳು ನಡೆಯುತ್ತಾ ಇವೆ ಎಂಬುವುದನ್ನು ಮಾನ್ಯ ಸಭೆಯ ಅನೇಕ ಸದಸ್ಯರು ಮತ್ತು ನಾನೂ ಕೂಡ ಮನಗಂಡಿದ್ದೇನೆ.

ಟೆಂಡರ್ ವಿಲೇವಾರಿ ವಿಚಾರದಲ್ಲಿ ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಅಪ್ಪಣೆ ಕೊಡಿಸಿದರು ಟೆಂಡರ್ ಕೊಟ್ಟಾಗ ಕವರ್ ಮೇಲೆ ಬ್ಲೇಡ್‌ನಿಂದ ಕೆರೆದು ಅಳಿಸಿದ್ದರು ಅದು ಸರ್ಕಾರಕ್ಕೆ ತಿಳಿದ ಮೇಲೆ ರೀಟೆಂಡರ್ ಕರೆದಾಗ 70 ಸಾವಿರ ರೂಪಾಯಿ ಕಮ್ಮಿ ಆಗಿ ಬಂತು ಎಂದು ಹೇಳಿದರು. ಅನೇಕ ವೇಳೆ ಕಂಟ್ರ್ಯಾಕ್ಟರುಗಳೇ ಆ ರೀತಿ ಕೆರೆಯುವುದುಂಟು; ನಮ್ಮ ತಾಲ್ಲೂಕಿನಲ್ಲಿ ಆ ರೀತಿ ಆಗಿರುವುದನ್ನು ನಾನು ನೋಡಿದ್ದೇನೆ. ಶ್ರೀ ಹುಚ್ಚಮಾಸ್ತಿಗೌಡರು ಹೇಳಿದ ಶೈಲಿಯಲ್ಲಿ ನಾನು ಹೇಳುವುದಿಲ್ಲ. ನನ್ನ ಶೈಲಿಯಲ್ಲೇ ನಾನು ಹೇಳುವುದಕ್ಕೆ ಪ್ರಯತ್ನಪಡುತ್ತೇನೆ.

ಅಧ್ಯಕ್ಷರೇ, ಈಗ ಮೈನರ್, ಮತ್ತು ಮೇಜರ್ ಕೆರೆಗಳ ಜೀರ್ಣೋದ್ಧಾರದ ವಿಷಯದಲ್ಲಿ ಸರ್ಕಾರದವರು ಒದಗಿಸಿರತಕ್ಕ ಮೊಬಲಗು ಬಹಳ ಕಮ್ಮಿ. ಕೆಲಸ ಬಹಳ ಹೆಚ್ಚಿನ ಮಟ್ಟದಲ್ಲಿ ನಡೆದಿಲ್ಲ. ಇನ್ನೂ ಹೆಚ್ಚಿನ ಮಟ್ಟದಲ್ಲಿ ನಡೆಯುವಂತಾಗಲು ಹೆಚ್ಚಿನ ಮೊಬಲಗನ್ನು ಒದಗಿಸಬೇಕೆಂದು ಹೇಳಿ ಒತ್ತಾಯ ಪಡಿಸುತ್ತೇನೆ. ಮಾಗಡಿ ತಾಲ್ಲೂಕಿನಲ್ಲಿ ಕೆಲವು ಕೆಲಸಗಳು ಅಗತ್ಯವಾಗಿ ಆಗಬೇಕಾಗಿವೆ. ಮಾಗಡಿ ತಾಲ್ಲೂಕು ಬಹಳ ಬೆಟ್ಟ ಮತ್ತು ಗುಡ್ಡಗಳಿಂದ ಕೂಡಿದ

ತಾಲ್ಲೂಕು. ಹೆಚ್ಚಿನ ನಾಲೆಗಳಾಗಲೀ ಹೆಚ್ಚಿನ ಕಾಲುವೆಗಳಾಗಲೀ, ಹೆಚ್ಚಿನ ಜಲಾಶಯಗಳಾಗಲೀ ಅಲ್ಲಿ ಇಲ್ಲ ಎಂಬುದು ಸರ್ಕಾರದವರಿಗೂ ಮಾನ್ಯಸಭೆಗೂ ಗೊತ್ತಿರತಕ್ಕ ವಿಷಯ ಕೆಲವು ಪಿಕ್‌ಅಪ್‌ಗಳನ್ನು ಹಾಕುವುದರ ಮೂಲಕ, ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದರ ಮೂಲಕ ಈ ಮಾಗಡಿ ತಾಲ್ಲೂಕಿನಲ್ಲಿ ಕೆಲವು ಅನುಕೂಲಗಳನ್ನು ಮಾಡುವುದಕ್ಕೆ ಅವಕಾಶವಿದೆ.

ನನ್ನ ತಾಲ್ಲೂಕಿಗೆ ಸಂಬಂಧ ಪಟ್ಟಂತೆ, ಹೊಸಕೆರೆ ವಿಷಯದಲ್ಲಿ ಒಂದು ಎಸ್ಟಿಮೇಟ್ ಕೂಡ ಆಗಿದೆ. ಮೋಟಗಾನಹಳ್ಳಿಯ ಹತ್ತಿರ ಹರಿಯುವ ಹಳ್ಳಕ್ಕೆ ಸಿದ್ದೇಶ್ವರಸ್ವಾಮಿ ದೇವಸ್ಥಾನದ ಹತ್ತಿರ ಒಂದು ಪಿಕ್-ಅಫ್ ಹಾಕಬೇಕೆಂದು ಹೇಳುತ್ತೇನೆ. ಇದಲ್ಲದೆ, ಮಾಗಡಿ ತಾಲ್ಲೂಕಿನ ಇನ್ನೂ ಅನೇಕ ಕೆರೆಗಳು ಜೀರ್ಣೋದ್ಧಾರವಾಗಬೇಕಾಗಿವೆ. ಆ ತಾಲ್ಲೂಕಿನಲ್ಲಿರುವ 24 ಮೇಜರ್ ಮತ್ತು 224 ಮೈನರ್ ಕೆರೆಗಳ ಪೈಕಿ ಕೇವಲ 100 ಕೆರೆಗಳು ಜೀರ್ಣೋದ್ಧಾರವಾಗಿ ಇನ್ನೂ 124 ಕೆರೆಗಳು ಹಾಗೆಯೇ ಇವೆ. ಕೆಲವು ಮಾನ್ಯಸ್ನೇಹಿತರು ಡಿ-ಸಿಲ್ಟ್ ಮಾಡಿಸಬೇಕೆಂದು ಸಲಹೆ ಮಾಡಿದರು. ಬೆಂಗಳೂರು ಡಿಸ್ಟ್ರಿಕ್ಟಿನ ದಾಸರಹಳ್ಳಿಯ ಹತ್ತಿರ ಡಿ-ಸಿಲ್ಟ್ ಮಾಡಿ ಎಷ್ಟು ಅನರ್ಥವಾಯಿತು, ಎಷ್ಟು ಹಣ ಖರ್ಚಾಯಿತೆಂದು ನೋಡಿ. ಸರಿಯಾಗಿ ನೋಡಿದಲ್ಲಿ, ಡಿಸಿಲ್ಟ್ ಮಾಡುವುದಕ್ಕೆ ತಗಲುವ ಹಣದಲ್ಲಿ ಒಂದು ಹೊಸಕೆರೆಯನ್ನೇ ಕಟ್ಟಿಸಬಹುದು. ಸರ್ಕಾರದವರು ಇದನ್ನು ಗಮನಿಸಬೇಕು.

ಆಮೇಲೆ, ಮಾನ್ಯ ನಾಗಯ್ಯರೆಡ್ಡಿಯವರು ಮಾತನಾಡುತ್ತಾ ಒಂದು ವಿಷಯವನ್ನು ಅಪ್ಪಣೆ ಕೊಡಿಸಿದರು. ಸರ್ಕಾರದವರು ಸರಿಯಾಗಿ ಕೆಲಸ ನಡೆಸುತ್ತಿಲ್ಲವೆಂದು ಆಕ್ಷೇಪಿಸಿದರು. ಆದರೆ ವಾಸ್ತವವಾಗಿ ನೋಡಿದರೆ ಕೋಲಾರ ಜಿಲ್ಲೆಯಲ್ಲಿ ಹೆಚ್ಚಿನಮಟ್ಟದ ನೀರಾವರೀ ಕಾಮಗಾರಿಗಳು ನಡೆದಿವೆ. ಈಗ ಸುಮಾರು ಎಂಟು ವರ್ಷಗಳಿಂದ ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗೂ ಖರ್ಚು ಮಾಡಿರುವ ಹಣವನ್ನು ನೋಡಿದರೆ, ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೆಲಸ ನಡೆದಿದೆಯೆಂದು ಗೊತ್ತಾಗುತ್ತದೆ. ಆದರೂ ಆ ಡಿಸ್ಟ್ರಿಕ್ಟಿನಲ್ಲಿ ಇನ್ನೂ ಮಾಡತಕ್ಕ ಕೆಲಸ ಉಳಿದಿದೆಯೆಂಬುದೇನೋ ವಾಸ್ತವಾಂಶ. ಮಾನ್ಯ ಶ್ರೀ ನಾಗಯ್ಯರೆಡ್ಡಿಯವರು ಬಹಳ ಪ್ರಾಮುಖ್ಯವಾದ ಸ್ಥಾನಗಳಲ್ಲಿ ಕೆಲಸ ಮಾಡಿದವರು; ಅವರಿಗೆ ದೇಶದ ಆಗುಹೋಗುಗಳೆಲ್ಲವೂ ಗೊತ್ತು. ಅಂಥವರಿಗೆ ಯಾವ ಯಾವ ಭಾಗಗಳಲ್ಲಿ ಎಷ್ಟೆಷ್ಟು ಕೆಲಸವಾಗಬೇಕಾಗಿದೆಯೆಂಬುದು ತಿಳಿದೇ ಇದೆ. ಇಷ್ಟು ಮಾತ್ರ ಅವರು ಮಾಡಿದ ಆರೋಪಣೆಯ ವಿಷಯವಾಗಿ ಹೇಳಿ, ನಾನು ನಮ್ಮ ಮಾಗಡಿ ತಾಲ್ಲೂಕಿನಲ್ಲಿ ಆಗಬೇಕಾದ ಕೆಲಸಗಳ ಕಡೆಗೆ ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಅನೇಕವಾಗಿ ಜೀರ್ಣೋದ್ಧಾರ ಮಾಡಬೇಕಾದ, ಪಿಕ್ ಅಪ್ ವರ್ಕ್‌ಗಳನ್ನು ಕೈಕೊಳ್ಳಬೇಕಾದ ಕೆಲಸವು ಉಳಿದಿವೆ. ಶ್ರೀಮಾನ್ ಮರಿಯಪ್ಪನವರು ಮಂತ್ರಿಗಳಾಗಿದ್ದಾಗ ಪದೇ ಪದೇ ನಮ್ಮ ತಾಲ್ಲೂಕಿಗೆ ಗಮನ ಕೊಟ್ಟು ಸಹಾಯ ಮಾಡಿದ್ದಾರೆ. ಅವರಿಗೆ ನಮ್ಮ ತಾಲ್ಲೂಕಿನ ಪರವಾಗಿ ನಾನು ಕೃತಜ್ಞತೆಗಳನ್ನು ಅರ್ಪಿಸಬೇಕಾಗಿದೆ. ಏಕೆಂದರೆ ಬಹಳ ಕಷ್ಟದೆಶೆಯಲ್ಲಿದ್ದಾಗ, ಒಂದು ಸೇರು ಅಕ್ಕಿ ಬೇಕಾಗಿದ್ದರೆ ಮನೆಯಲ್ಲಿರುವ ಒಡವೆಗಳನ್ನು ಗಿರಿವಿಯಿಟ್ಟು ತರುವ ದುರ್ದೆಶೆಯಲ್ಲಿದ್ದಾಗ ಆಗ್ಗೆ ಮಂತ್ರಿಗಳಾದ ಶ್ರೀಮಾನ್ ಮರಿಯಪ್ಪನವರು ಮಾಗಡಿ ತಾಲ್ಲೂಕಿಗೆ ಬಂದು ಈಗ ವಿಧಾನ ಸೌಧದ ಕಟ್ಟಡದ ಮುಂದೆ ಕೆಲಸ ಮಾಡುತ್ತಿರುವ ಅಮೋಘವಾದ ಯಂತ್ರಗಳನ್ನು ಕಳುಹಿಸಿಕೊಟ್ಟು ಬಹಳ ಸಹಾಯ ಮಾಡಿದ್ದಾರೆ. ಅಂಥ ಸಹಾಯ ಮಾಡಿದವರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವುದು ನಮ್ಮ ಕರ್ತವ್ಯ. ಉಳಿದಿರುವ ಇನ್ನೂ ಅನೇಕ ಕೆಲಸಗಳನ್ನೂ ಈ ಇಲಾಖೆಯವರು ದಕ್ಷತೆಯಿಂದ ಮಾಡುತ್ತಾರೆಂದು ನಂಬಿದ್ದೇನೆ. ದಕ್ಷತೆಯಿಂದ ಮಾಡಲೆಂದು ಹೇಳಿದ ಮಾತ್ರಕ್ಕೆ ಈಗ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲವೆಂದು ನನ್ನ ಭಾವನೆಯಲ್ಲ, ಮೈಸೂರು ಸಂಸ್ಥಾನದ ಎಂಜಿನಿಯರುಗಳು ದಕ್ಷರೆಂದು ಇತರೇ ಸಂಸ್ಥಾನಗಳವರು ನಮ್ಮವರನ್ನು ಕರೆದುಕೊಂಡು ಹೋಗುತ್ತಿರುವಾಗ ನಮ್ಮಲ್ಲಿ ದಕ್ಷತೆಯಿಲ್ಲವೆಂದರೆ ನಾನು ಒಪ್ಪುವುದಿಲ್ಲ. ದಕ್ಷತೆಯಿಲ್ಲದವರು ಎಲ್ಲಿಯೋ 15-20 ಜನರಿರಬಹುದು. ಎಂದ ಮಾತ್ರಕ್ಕೆ ಸಾರ್ವತ್ರಿಕವಾಗಿ ಇಲಾಖೆಯವರೆಲ್ಲರೂ ದಕ್ಷತೆಯಿಲ್ಲದವರೆಂದು ಹೇಳುವುದು ಸರಿಯಲ್ಲ. ಆದ್ದರಿಂದ ನಾನು ಹೇಳಿದ ನಾಲ್ಕಾರು ಕೆಲಸಗಳನ್ನು ಆದಷ್ಟು ಬೇಗ ಮಾಡಿಸಿಕೊಡಬೇಕೆಂದು ಹೇಳಿ ಮುಗಿಸುತ್ತೇನೆ.

*ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಈ ಡಿಮ್ಯಾಂಡ್ ಮನವಿ ಸಂಬಂಧದಲ್ಲಿ ನನ್ನ ಕ್ಷೇತ್ರದಲ್ಲಿ ಆಗಬೇಕಾಗಿರತಕ್ಕ ನೀರಾವರಿ ಕೆಲಸ ಕಾರ್ಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕು ಎಂದು ಇಚ್ಛಿಸುತ್ತೇನೆ. ಚಾಮರಾಜನಗರದಲ್ಲಿ ಸುವರ್ಣಾವತಿ ಎಂಬ ನದಿಯು ಹರಿಯುವುದು ಎಲ್ಲರಿಗೂ ಗೊತ್ತಿದೆ. ಅದು ಸುಮಾರು 40 ಮೈಲಿ ಉದ್ದದಲ್ಲಿ 30 ಮೈಲಿ ಉದ್ದ ನಮ್ಮ ಸಂಸ್ಥಾನದಲ್ಲಿ ಇನ್ನು 10 ಮೈಲಿ, ಬೇರೆ ಪ್ರಾಂತ್ಯದಲ್ಲಿ ಅಂದರೆ ಮದರಾಸ್ ಪ್ರಾಂತದಲ್ಲಿ ಹರಿಯುತ್ತದೆ. ಚಿಕ್ಕಹೊಳೆ, ದೊಡ್ಡಹೊಳೆ, ಸೇರಿ ಸುವರ್ಣಾವತಿ ನದಿಯಾಗಿದೆ. ಚಿಕ್ಕಹೊಳೆಗೆ ಸೇತುವೆ ಕಟ್ಟಬೇಕೆಂದು ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಅಂದಾಜು ತಯಾರುಮಾಡಿ, ಈ ವರ್ಷ ಬಡ್ಜೆಟ್ಟಿನಲ್ಲಿ ಕೂಡ, ಹಣವನ್ನು ಸರಕಾರದವರು ಒದಗಿಸಿದ್ದಾರೆ, ಅದಕ್ಕಾಗಿ ಸರಕಾರಕ್ಕೆ ಕೃತಜ್ಞರಾಗಿದ್ದೇವೆ, ಆದರೆ ನನ್ನಲ್ಲಿ ಶಂಕೆ ಇದೆ. ಸತ್ಯಮಂಗಲ—ಚಾಮರಾಜನಗರ ರೈಲ್ವೆ ಲೈನನ್ನು ಮೊದಲನೆ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿರುವುದನ್ನು ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಕೈಬಿಟ್ಟಿದ್ದಾರೆ. ಹಾಗೆಯೇ ಅದರಗತಿ ಇದಕ್ಕೆ ಬಾರದೆ ಇರಲಿ. ವರ್ಷವೇ ಇದನ್ನು ಕಾರ್ಯರೂಪಕ್ಕೆ ತರಬೇಕು ಎಂದು ಬಯಸುತ್ತೇನೆ. ಸುವರ್ಣಾವತಿಯಲ್ಲಿ ಬ್ರ್ಯಾಂಚ್ ಚಾನಲ್ಸ್ ಏಳು ಇವೆ. ಅದಕ್ಕೆ ಸಂಬಂಧಪಟ್ಟ 3 ಕೆರೆಗಳಿವೆ. ಒಟ್ಟು ಸುವರ್ಣಾವತಿ ನದಿಯಿಂದ ಆಸರೆ ಇರತಕ್ಕ ಕೆರೆಗಳು ಮತ್ತು ನಾಲೆಗಳ ಕೆಳಗೆ 13 ಸಾವಿರ ಎಕರೆ ಇದೆ. ಚಿಕ್ಕಹೊಳೆ ಪ್ರಾಜೆಕ್ಟ್ ಮಾಡುವುದರಿಂದ ಎರಡು ಸಾವಿರ ಎಕರೆ ಹೆಚ್ಚಿಗೆ ಸಾಗುವಳಿ ಮಾಡಿದ ಹಾಗಾಗುತ್ತದೆ. ಆದಷ್ಟು ಬೇಗ ಇದರ ಕೆಲಸವನ್ನು ಪ್ರಾರಂಭ ಮಾಡಬೇಕು ಎಂದು ಹೇಳುತ್ತೇನೆ. ಬ್ರಾಂಚ್ ಚಾನಲ್‌ಗಳಿಗೆ ನಾಲೆಗಳನ್ನು ತೆಗೆಸಬೇಕೆಂದು ಪ್ರತಿಸಾರಿಯೂ ಸರ್ಕಾರದವರಿಗೆ ಮನವಿ ಮಾಡಿರುತ್ತೇನೆ. ಇದರಮೇಲೆ ಅಂದಾಜು ತಯಾರುಮಾಡಿ ಸರ್ಕಾರಕ್ಕೆ ಬಂದಿದೆ. ಒಂದು ಅಂದಾಜನ್ನು ಬಡ್ಜೆಟ್ಟಿನಲ್ಲಿ ಸೇರಿಸಿದ್ದಾರೆ. ಇನ್ನೂ ಆರು ಅಂದಾಜುಗಳಿವೆ. ಪ್ರತಿಯೊಂದು ಬ್ರಷ್‌ವುಡ್ ನಾಲೆಗಳಿಗೆ 12-13 ಸಾವಿರ ರೂಪಾಯಿಗಳ ಖರ್ಚು ಅಂದಾಜು ಆಗಿದೆ. ಅವೆಲ್ಲವನ್ನೂ ಮಾಡಿಸಿಕೊಡಬೇಕು ಎಂದು ಸರಕಾರದವರನ್ನು ಕೇಳಿ ಕೊಳ್ಳುತ್ತೇನೆ. ಯಳಂದೂರು ಜಹಗೀರು ತಾಲ್ಲೂಕ್ ಎಂಬುದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಜಹಗೀರು ತಾಲ್ಲೂಕಿನಲ್ಲಿ ಕೆರೆಗಳನ್ನೂ, ನಾಲೆಗಳನ್ನು ರಿಪೇರಿ ಮಾಡಬೇಕಾಗಿದ್ದರೆ ಅವುಗಳನ್ನು ಜಹಗೀರಿ ಫಂಡಿನಿಂದ ಮಾಡಬೇಕು. ಸರ

(ಶ್ರೀ ಬಿ. ರಾಚಯ್ಯ)

ಕಾರದವರು ಯಾವರೀತಿಯಲ್ಲೂ ಮಾಡುವುದಕ್ಕಾಗುವು
ದಿಲ್ಲ ಎಂದು ಹೇಳಿದರು. ಆದಾಗ್ಯೂ ಕೂಡ ಕಳೆದವರ್ಷ
ಜಹಗೀರು ಒಂದು ಸಬ್‌ಡಿವಿಜನ್ ತೆಗೆದು ಅದಕ್ಕಾಗಿ
3 ವರ್ಷಗಳಿಂದ ಅಂದಾಜು ತಯಾರು ಮಾಡಿದ್ದಾರೆ.
ಸುಮಾರು 10 ಲಕ್ಷ ರೂಪಾಯಿಗಳು ಅಂದಾಜು ಆಗಿದೆ.
ಅಂದಾಜನ್ನು ಮಂಜೂರು ಮಾಡುತ್ತೇವೆ ಎಂದು ಇಲ್ಲಿ
ಎರಡು ಸಾರಿ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ.
ಅದರಮೇಲೆ ಒಂದು ಲಕ್ಷ ರೂಪಾಯಿಗಳನ್ನು ಕಳೆದ
ವರ್ಷ ಈ ಕೆರೆಗಳ ರಿಪೇರಿಗಾಗಿ, ನಾಲೆಗಳ ರಿಪೇರಿ
ಗಾಗಿ ಕೊಟ್ಟಿದ್ದಾರೆ. ಈಗ ಜಹಗೀರು ಫಂಡಿನಲ್ಲಿ
ದುಡ್ಡು ಇಲ್ಲದೆ, ಕೆಲಸಗಳನ್ನು ನಿಲ್ಲಿಸಿದ್ದಾರೆ, ಸಬ್
ಡಿವಿಜನ್ ತೆಗೆದು ಹಾಕುತ್ತೇವೆ ಎಂದು ಹೇಳಿದ್ದಾರೆ.
ಮೊದಲು ಸರ್ಕಾರದವರು ಮೂರು ವರ್ಷಗಳಲ್ಲಿ
ಎಲ್ಲಾ ಕೆರೆಗಳನ್ನೂ ಮತ್ತು ನಾಲೆಗಳನ್ನೂ ಜಹಗೀರು
ಫಂಡಿನಿಂದಾಗಲಿ, ಸರಕಾರದ ಫಂಡಿನಿಂದಾಗಲಿ
ರಿಪೇರಿ ಮಾಡಿಕೊಡುತ್ತೇವೆ ಎಂದು ಹೇಳಿದ್ದರು.
ಜಹಗೀರುದಾರರು ಏನು ಕರ್ತವ್ಯಮಾಡಬೇಕೋ
ಅದನ್ನು ಮಾಡದೇ ಇರುವ ಪ್ರಯುಕ್ತ, ಜಹಗೀರು
ಫಂಡಿನಿಂದ ಹೆಚ್ಚಿಗೆ ದುಡ್ಡನ್ನು ತಮ್ಮ ಸ್ವಂತ ಉಪ
ಯೋಗಕ್ಕೆ ಉಪಯೋಗಿಸಿಕೊಳ್ಳಲು ಅವಕಾಶವಾ
ಯಿತು. ಮಾನ್ಯ ಮಿತ್ರರಾದ ಶ್ರೀ ಮರಿಯಪ್ಪನವರು
ಮಂತ್ರಿಗಳಾಗಿದ್ದ ಕಾಲದಲ್ಲಿ ಈ ತಾಲ್ಲೂಕಿನಮೇಲೆ
ಅವರ ಕಣ್ಣು ಬಿದ್ದು ಇಲ್ಲಿನ ಕೆರೆಗಳ ಜೀರ್ಣೋದ್ಧಾರ
ಮತ್ತು ನಾಲೆಗಳನ್ನು ತೆಗೆಸುವ ಕೆಲಸವನ್ನುಮಾಡಲು
ಹೆಚ್ಚು ಆಹಾರ ಬೆಳೆ ಬೆಳೆಯುವ ಸ್ಕೀಂನಿಂದ ಹಣವನ್ನು
ಕೊಟ್ಟಿದ್ದರಿಂದ ಆ ಜಹಗೀರು ತಾಲ್ಲೂಕಿನಲ್ಲಿ ಕೆರೆಗಳಿವೆ,
ನಾಲೆಗಳಿವೆ ಎಂಬುದು ಸರ್ಕಾರದ ಗಮನಕ್ಕೆ ಬಂತು.
ಇದಕ್ಕಾಗಿ ಶ್ರೀ ಮರಿಯಪ್ಪನವರಿಗೆ ಈ ತಾಲ್ಲೂಕಿನ ಪರ
ವಾಗಿ ವಂದನೆಗಳನ್ನು ಸಲ್ಲಿಸಬೇಕಾಗಿದೆ, 10 ಲಕ್ಷದ
ಸ್ಕೀಮಿಗೆ ಈ ವರ್ಷ ಏನು ಹಣವನ್ನೂ ಬಜೆಟ್ಟಿನಲ್ಲಿ ಒದ
ಗಿಸಿಲ್ಲ. ಈ ಡಿವಿಜನ್ ಕೂಡ ತೆಗೆದು ಬಿಟ್ಟಿದ್ದಾರೆ
ಎಂಬ ವಿಷಯ ಮೊನ್ನೆ ತಾನೇ ತಿಳಿದು ಬಂತು. ಸರ
ಕಾರದವರು ಜಹಗೀರು ರದ್ದು ಆಗುವವರೆಗೆ ಕೂಡ,
ನಾಲೆ ರಿಪೇರಿ ಆಗ ಕೂಡದೆಂದು ಮನಸ್ಸು ಮಾಡಿದ್ದರೆ
ಅಲ್ಲಿಗೆ ರೈತರು ಅನ್ನವಿಲ್ಲದೆ ಕಷ್ಟಪಡಬೇಕಾಗುತ್ತದೆ.
ಈ ದೃಷ್ಟಿಯಿಂದ ಸರಕಾರದವರು, ಜಹಗೀರುದಾರರು
ಇನ್ನು ಮುಂದೆ ಆ ಫಂಡಿನಿಂದ ಡ್ರಾ ಮಾಡದೇ
ಇರುವಹಾಗೆ ಒಂದು ಆರ್ಡರನ್ನು ಮಾಡಬೇಕು.
ಸರ್ಕಾರದವರು ಸಾಲಕೊಟ್ಟು ಈ ಕೆಲಸಕಾರ್ಯಗಳನ್ನು
ನಡೆಸಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸು
ತ್ತೇನೆ.

*ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).--
ಸ್ವಾಮಿ, ಈ ಖೋತಾ ಸೂಚನೆಯಮೇಲೆ ಎರಡು
ಮಾತುಗಳನ್ನು ಹೇಳಲು ಮನಸ್ಸು ಮಾಡಿದ್ದೇನೆ.
ನಮ್ಮ ಮೈಸೂರು ತಾಲ್ಲೂಕಿನಲ್ಲಿ ಎಣ್ಣೆಹೊಳೆ ಅಣೆ
ಕಟ್ಟುವ ವಿಚಾರದಲ್ಲಿ ಬಹಳ ಹಿಂದಿನ ಸರ್ಕಾರ ಒಂದು
ಅಂದಾಜು ಮಾಡಿ ಅದು ಅಲ್ಲಿಗೇ ನಿಂತು ಹೋಯಿತು.
ಈಚೆಗೆ ನಾವು ಚುನಾಯಿತರಾಗಿಬಂದಾಗಿನಿಂದಲೂ
ಈ ಅಣೆಕಟ್ಟು ಕಟ್ಟಿಸಬೇಕೆಂದು ಪ್ರಯತ್ನ ಪಡುತ್ತಿ
ದ್ದೇನೆ. ನನ್ನ ಪ್ರಯತ್ನ ಎಂಥಾದ್ದು ಎಂದರೆ, ಕಟ್ಟ
ಬೇಕೆಂದು ಹೇಳುವುದಷ್ಟೇ ಅಲ್ಲ ಆ ಸ್ಥಳದ ಇಂಜಿನಿಯ
ರಿಂದ ಹಿಡಿದು ಚೀಫ್ ಇಂಜಿನಿಯರವರೆಗೆ ತಿಂಗಳಿ
ಗೊಂದು ಸಾರಿ ಎರಡು ತಿಂಗಳಿಗೊಂದು ಸಾರಿ
ಹೇಳುತ್ತಾ ಬಂದಿದ್ದೇನೆ. ಮೊದಲನೆಯ ಪಾಂಚ
ವಾರ್ಷಿಕ ಯೋಜನೆಯಲ್ಲಿ ಮಾಡುತ್ತೇವೆಂದು ಹೇಳಿ
ದರು. ಅಂದಾಜು ತಯಾರಾಗಿ, ಹೋದ ವರ್ಷ 20
ಸಾವಿರ ರೂಪಾಯಿ ಇದಕ್ಕೆ ಕೊಡಬೇಕೆಂದಿತ್ತು,
ಆದರೆ ಅಂದಾಜು ಮಂಜೂರಾಗಿರಲಿಲ್ಲ. ಆಮೇಲೆ
ಚೀಫ್ ಇಂಜಿನಿಯರಲ್ಲಿ ಹೋಗಿ ಹೇಳಿಕೊಂಡೆ. ಆ
ಪ್ರದೇಶದಲ್ಲಿ ಮಳೆ ಬೆಳೆಯಿಲ್ಲದೆ ಆ ಹೋಬಳಿಯ
ಜನಕ್ಕೆ ಅನ್ನವಿಲ್ಲ, ಹಿಟ್ಟಿಲ್ಲ, ಅಂಬಲಿಕೂಡ ಇಲ್ಲವಾಗಿದೆ
ಎಂದು ಹೇಳಿದೆ. ಎರಡನೆಯ ಪಂಚವಾರ್ಷಿಕ
ಯೋಜನೆಯಲ್ಲಿ ಖಂಡಿತ ಮಾಡುತ್ತೇವೆಂದು ಹೇಳಿದರು.
ಈ ವರ್ಷ ಸಂಬಂಧಪಟ್ಟ ಮಂತ್ರಿಗಳನ್ನು ಸ್ಥಳಕ್ಕೆ
ಕರೆದುಕೊಂಡು ಹೋಗಿ ತೋರಿಸಿ ತಕ್ಷಣ ತೆಗೆದು
ಕೊಳ್ಳಬೇಕೆಂದು ಕೇಳಿಕೊಂಡದ್ದಾಯಿತು, ಅವರೂ
ಒಪ್ಪಿದರು. ಈಗ ಏನಾಗಿದೆಯೆಂದರೆ, ಆ ಅಂದಾಜು
ಮೈಸೂರಿನಿಂದ ಬೆಂಗಳೂರಿಗೆ ಬರುತ್ತದೆ ಮತ್ತೆ
ಏನೋ ಅಬ್‌ಜೆಕ್ಷನ್ ಆಗಿ ಹಿಂದಕ್ಕೆ ಹೋಗುತ್ತದೆ.
ಅಸೆಂಬ್ಲಿ ಸಭೆಯ ಈ ಅಧಿವೇಶನದ ಕಾಲಕ್ಕೆ ಆಗಬಹು
ದೆಂದು ಸುಮ್ಮನೆ ಇದ್ದೆ. ಚೀಫ್ ಇಂಜಿನಿಯರು
ಮಾಡಿಸುತ್ತೇವೆಂದು ಹೇಳಿದರು, ಸುಮ್ಮನೆ ಇದ್ದೆ.
ಮೈಸೂರಿನಲ್ಲಿ ಅಸೆಂಬ್ಲಿ ನಡೆಯುತ್ತಿದ್ದಾಗ ನೋಡಿದೆ,
ಆಗ ಅದು ಎಗ್ಜಿಕ್ಯೂಟಿವ್ ಇಂಜಿನಿಯರ ಕಚೇರಿಯ
ಲ್ಲಿತ್ತು. ಏನೋ ಟೆಕ್ನಿಕಲ್ ಅಬ್‌ಜೆಕ್ಷನ್ ಆಗಿ ಬಂದಿದೆ
ಎಂದು ಹೇಳಿದರು. ಪುನಃ ಚೀಫ್ ಇಂಜಿನಿಯರ
ಕಚೇರಿಗೆ ಹೋಗಿದ್ದೆ, ಈಗ ಸಂಬಂಧಪಟ್ಟ ಮಂತ್ರಿ
ಗಳಿಗೆ ಹೇಳಿದ್ದೇನೆ, ನೋಡೋಣ. ಅಂದಾಜು
ತಯಾರು ಮಾಡಿ ಅದನ್ನು ಮುಂಜೂರಾತಿಗೆ ಸರ್ಕಾ
ರಕ್ಕೆ ಕಳುಹಿಸಲು ಮೂರು ವರ್ಷ ಆಗ ಬೇಕೆ ? ಇನ್ನೂ
ಸರ್ಕಾರಕ್ಕೆ ಕಳುಹಿಸಿಲ್ಲ. ಪ್ರಜಾಪ್ರಭುತ್ವಯುಗದಲ್ಲಿ
ಈಗಿರತಕ್ಕ ಮಂತ್ರಿಗಳಿಗೂ ಸದಸ್ಯರಿಗೂ, ಸಂಬಂಧ
ಪಟ್ಟ ಇಲಾಖೆಯ ಅಧಿಕಾರಿಗಳಿಗೂ ಹೊಂದಾಣಿಕೆ
ಇರಬೇಡವೆ ? ಹಿಂದೆ ಸರಿಯಾಗಿರಲಿಲ್ಲ ; ಈಗ ಒಳ್ಳೆಯ
ಸರ್ಕಾರ, ಜನಗಳ ಸರ್ಕಾರ ಬಂತು, ಪ್ರಜಾಪ್ರತಿನಿಧಿ
ಗಳು ಹೇಳಿದರೆ ಕೆಲಸಗಳು ತಕ್ಷಣ ಆಗುತ್ತವೆ ಎಂದ
ಹೇಳುವ ಕಾಲದಲ್ಲಿ ಹೀಗೆ ಮಾಡಿದರೆ ಜನ ಏನೆಂದು
ಕೊಳ್ಳುತ್ತಾರೆ ? ನನಗೆ ಓಟು ಕೊಟ್ಟು ಕಳುಹಿಸಿರುವ
ಲಕ್ಷಾಂತರ ' ಜನ ಇವನಿಗೆ ಓಟು ಕೊಟ್ಟು ಚುನಾಯಿಸಿ
ಕಳುಹಿಸಿದೆವು, ಇವನೇನು ಹೋಗಿ ಮಂಟ್ಟಾಕಿದ್ದು,
ನಾಳೆ ಇವನು ಚುನಾವಣೆಗೆ ನಿಂತರೆ ಇವನಿಗೆ ಓಟು
ಕೊಡುವುದು ಬೇಡ, ಇನ್ನೊಬ್ಬನಿಗೆ ಕೊಡಬೇಕು '
ಎಂದು ಹೇಳುತ್ತಾರೆ. ಪ್ರಜಾ ಪ್ರಭುತ್ವದಲ್ಲಿ ಹೀಗಾಗ
ಬಹುದೆ ? ಮಂತ್ರಿಗಳನ್ನಾಗಲಿ ' ಚೀಫ್ ಇಂಜನಿಯ
ರನ್ನಾಗಲೀ ನಾವು ನೋಡ್ತದೆ, ಈ ವಿಷಯ ಕೇಳದೇ
ಯಿದ್ದಿದ್ದರೆ ಆಗ ನಮ್ಮ ತಪ್ಪೆಂದು ಹೇಳಬಹುದು.
ಯಾರೋ ಹೇಳುತ್ತಿದ್ದರು ' ಈ ಗೌಡರು ಸುಮ್ಮನೆ
ಕೂಗಾಡುತ್ತಾರೆ, ಇವರಿಗೆ ಕೆಲಸ ಮಾಡಿಸಿಕೊಳ್ಳುವು
ದಕ್ಕೆ ಗೊತ್ತಿಲ್ಲ ' ಎಂದು ಹೇಳುತ್ತಿದ್ದರು. ಇದಕ್ಕೇನು
ಮಾಡುವುದು ? ಚೀಫ್ ಇಂಜಿನಿಯರು, ಎಗ್ಜಿಕ್ಯುಟಿವ್
ಇಂಜಿನಿಯರು, ಮಿನಿಸ್ಟರು ಎಲ್ಲರಿಗೂ ಹೇಳುತ್ತಿರು
ತ್ತೇನೆ ಮಂತ್ರಿಗಳಿಗೆ ಮೂರು ದಿನಕ್ಕೊಂದು ಸಾರಿ
ಹೇಳುತ್ತೇನೆ ಇಷ್ಟಾದರೂ ಕೆಲಸ ಆಗದೇ ಹೋದರೆ
ಇನ್ನೇನು ಮಾಡುವುದು ? ಹೋದ ವರ್ಷ ಈ ವರ್ಷ
ಇಪ್ಪತ್ತು ಸಾವಿರ ಖರ್ಚು ಮಾಡುತ್ತೇವೆಂದರು,
ಮಾಡಲಿಲ್ಲ. ಆಗಿಹೋಯಿತು ಇದರ ಗತಿ ! ಈಗ
ಅಂದಾಜು ಮಂಜೂರಾಗಲಿ ಮಾಡುತ್ತೇವೆಂದು ಹೇಳು
ತ್ತಾರೆ, ನೋಡೋಣ ಏನು ಮಾಡುತ್ತಾರೋ. ಒಡ
ವಿನ ಕಟ್ಟೆಯ ವಿಷಯವೂ ಹೀಗಾಗಿದೆ. ಈ ವರ್ಷ
ವೇ ಪೂರೈಸದೆ ಇದ್ದರೆ ಬಹಳ ಕಷ್ಟಕ್ಕೆ ಈಡಾಗು
ತ್ತಾರೆ. ಸಾವಿರಾರು ಎಕರೆಗಳು ಅಚ್ಚುಕಟ್ಟಾಗುವುವು
ದರಿಂದ ಜನರಿಗೆ ಸಹಾಯವಾಗುತ್ತದೆ. ಆದುದರಿಂದ
ಇದನ್ನು ಮಾಡಿಕೊಡಬೇಕು ಎಂದು ಹೇಳುತ್ತಿದ್ದೇನೆ.

ಇನ್ನೊಂದು ವಿಚಾರವೇನೆಂದರೆ ಇದೇ ತಾಲ್ಲೂಕಿಗೆ ಸಂಬಂಧಪಟ್ಟಂತೆ ಮತ್ತೂರು, ಕಲ್ಲಹಳ್ಳಿ ಗ್ರಾಮಗಳಿವೆ. ಇದು ಒಂದು ಕೊನೆಯ ಬಾರ್ಡರ್‌ನಲ್ಲಿದೆ. ಅಲ್ಲಿ ಜನರಿಗೆ ಜೀವನಕ್ಕೆ ಮಾರ್ಗವಿಲ್ಲ. ಅದರ ಬಳಿ ಬಡವಿನ ಕಟ್ಟೆ ಕೆಲಸಕ್ಕೆ ಎರಡು ಲಕ್ಷ ರೂಪಾಯಿ ಅಂದಾಜು ತಯಾರಾಗಿದೆ. ಈ ವಿಷಯವಾಗಿ ಹೋದ ಸಾರಿ ಒಂದು ಪ್ರಶ್ನೆ ಸಹ ಕೇಳಿದ್ದೆ. ಅಲ್ಲಿಗೆ ಒಬ್ಬ ಇಂಜಿನಿಯರು ಬಂದಿದ್ದಾರೆ. ಅವರಿಗೆ ಮತ್ತೂರು ಕಲ್ಲಹಳ್ಳಿ ಎನ್ನುವುದೇ ಗೊತ್ತಿಲ್ಲ. ಕೆರೆ ಕಟ್ಟಲು ಅಂದಾಜಾಗಿದೆ; ಅವರಿಗೆ ರಿಕಾರ್ಡುಗಳೇ ಸಿಕ್ಕುತ್ತಿಲ್ಲ. ನನ್ನ ಹತ್ತಿರ ಬಂದು ಮತ್ತೂರು ಕಲ್ಲಹಳ್ಳಿ ಎಲ್ಲಿದೆ ಗೌಡರೇ ಎಂದು ಕೇಳಿದರು. ನಾನು ಅವರನ್ನು ಕುರಿತು ನೀವು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಇಂಜಿನಿಯರ್ ಆಗಿದ್ದಿರಿ ನಿಮಗೆ ಗೊತ್ತಿಲ್ಲವೇ ಎಂದು ಕೇಳಿದೆ. ಅದಕ್ಕೆ ಅವರಿಂದ ಜವಾಬು ಬರಲಿಲ್ಲ.

ಹೆಗ್ಗಡದೇವನ ಕೋಟೆ ತಾಲ್ಲೂಕು, ಕಲಿಯೂರು ಗ್ರಾಮದಲ್ಲಿ 12 ಭಾವಿಗಳಿವೆ. ಒಂದರಲ್ಲೂ ಕುಡಿಯುವುದಕ್ಕೆ ನೀರಿಲ್ಲ. ಹಿಂದೆ ಅಲ್ಲಿ 700 ಮನೆಗಳಿದ್ದುದು ಈಗ 80 ಮನೆಗಳು ಮಾತ್ರ ಉಳಿದಿವೆ. ಈ ಗ್ರಾಮದ ಹತ್ತಿರ ನಂಜನ ಹಳ್ಳಿ ಕೆರೆ ಇದೆ. ಆನೆಗಳು ಬಂದು ಆ ನೀರನ್ನೆಲ್ಲ ಕಲಕಿಬಿಡುತ್ತವೆ. ನೀರು ಮಂದವಾಗಿ ಬಗ್ಗಡವಾಗಿರುತ್ತದೆ. ಕೆರೆಯಿಂದ ಈ ನೀರನ್ನು ಗಾಡಿಗಳಲ್ಲಿ ತಂದು ಕುಡಿಯುತ್ತಾರೆ. ಬೆಳಿಗ್ಗೆ 9 ಗಂಟೆಯವರೆಗೂ ಮಲಗಿದ್ದು ಬಿಸಿಲು ಬಂದಮೇಲೆ ವ್ಯವಸಾಯಕ್ಕೆ ಹೋಗುತ್ತಾರೆ. ಬಗ್ಗಡದ ನೀರನ್ನು ಕುಡಿದೂ ಕುಡಿದೂ ಜನರು ಈ ರೀತಿ ಸೋಮಾರಿಗಳಾಗಿದ್ದಾರೆ.

ಪಡುವ ಕೋಟೆ ಕೆರೆಗೆ ಒಂದು ಪಿಕ್ ಅಪ್ ನಾಲೆ ತೆಗೆದುಕೊಂಡು ಬರಬೇಕೆಂಬ ವಿಷಯದಲ್ಲಿ ರೆವೆನ್ಯೂ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಒಂದು ಮೀಟಿಂಗ್ ನಡೆಯಿತು. ಅದಕ್ಕೆ ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿ ಖರ್ಚಾಗುತ್ತದೆಂದರು. ಇಂಜಿನಿಯರ್‌ರವರು 50 ಎಕರೆ ಜಮೀನು ಅಚ್ಚುಕಟ್ಟಿಗೆ ಬಂದು ನೀರಾವರಿಯಾಗುತ್ತದೆಂದು ತಿಳಿಸಿದರು. ಈ ವಿಚಾರವನ್ನು ಸರ್ಕಾರದ ಗಮನಕ್ಕೂ ತಂದೆವು.

ನಾನು ಮೇಲೆ ಹೇಳಿರುವ ಕೆಲಸಗಳನ್ನೆಲ್ಲ ಸರ್ಕಾರದವರು ತೆಗೆದುಕೊಂಡು ಅವುಗಳನ್ನು ಈ ವರ್ಷವೇ ಮಾಡಿಕೊಟ್ಟರೆ ಬಹಳ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಈ ಕೆಲಸಗಳನ್ನು ಖಂಡಿತವಾಗಿಯೂ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

* ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ಬಡ್ಜೆಟ್ಟಿನ ವಿಷಯದಲ್ಲಿ ನಾನು ಹಿಂದೆ "ಜಗ್ಲರಿ ಫಿಗರ್ಸ್" ಎಂದು ಹೇಳುತ್ತಿದ್ದೆ. ಆ ಮಾತು ಬಹುಶಃ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟಂಥ ಅಂಕಿಗಳಿಗೆ ಹೇಳಬಹುದೆಂದು ತೋರುತ್ತದೆ. ಶ್ರೀ ದೇವರಾಜಅರಸ್ ಅವರು ರಾತ್ರಿ ಎಲ್ಲ ಕಣ್ಣಿಗೆ ಎಣ್ಣೆ ಬಿಟ್ಟು ನೋಡಿದರೂ ಸರಿಯಾಗಿ ಗೊತ್ತಾಗಲಿಲ್ಲವೆಂದು ಹೇಳಿದರು. ನಾನೇನೂ ಕಣ್ಣಿಗೆ ಎಣ್ಣೆ ಬಿಟ್ಟು ನೋಡಲಿಲ್ಲ. ಬರೀ ಕನ್ನಡಕ ಹಾಕಿಕೊಂಡು ನೋಡಿದೆ. ಆದರೆ ಯಾವಯಾವುವು ಎಲ್ಲೆಲ್ಲಿವೆ ಎಂದು ಕಂಡುಹಿಡಿಯುವುದು ಕಷ್ಟ ಮತ್ತು ಕೆಲವಕ್ಕೆ ವಿವರಗಳು ಎಲ್ಲಿವೆ ಎಂದು ಸಿಕ್ಕುವಹಾಗಿಲ್ಲ. ಮೊದಲು ಬಡ್ಜೆಟ್ಟಿನಲ್ಲಿ ಪೇಜುಗಳನ್ನು ನಮೂದಿಸುತ್ತಿದ್ದರು. ಒಟ್ಟಿಗೆ ಮೊತ್ತವನ್ನು ಹಾಕಿ, ಅದರ ಪಕ್ಕದಲ್ಲಿ ಇಂಥಿಂಥ ಪುಟಗಳಲ್ಲಿ ವಿವರಗಳು ಸಿಕ್ಕುತ್ತವೆ ಎಂದು ನಮೂದು ಮಾಡುತ್ತಿದ್ದರು. ಈವಾಗ ವಿವರಗಳನ್ನೆಲ್ಲ ಬೇರೆ ಬೇರೆ ಕಡೆ ಕೊಡುತ್ತಿದ್ದಾರೆ ಮತ್ತು ಇವನ್ನು ಹುಡುಕುವುದು ಕಷ್ಟವಾದ ಕೆಲಸ. ಈಗ 1,00,65,000 ರೂಪಾಯಿಗಳನ್ನು ಒದಗಿಸಿದ್ದಾರೆ. ಮಾಡಿದ್ದಾರೆ. ಅದರ ವಿವರಗಳು ಎಲ್ಲಿವೆ ಎಂದು ನೋಡಿದರೆ ಸುಲಭವಾಗಿ ದೊರೆಯುವುದಿಲ್ಲ. 70—80 ಲಕ್ಷ ರೂಪಾಯಿಗಳಿಗೆ ತಪಶೀಲು ಎಲ್ಲಾದರೂ ಸಿಕ್ಕುತ್ತದೆಯೇನೋ ಎಂದು ಹುಡುಕಿದರೆ ಎಲ್ಲೂ ಸಿಕ್ಕಲಿಲ್ಲ. ಹೀಗೆ ಎಷ್ಟೋ ಕೆಲಸಗಳಿಗೆ ತಪಶೀಲು ಕೊಟ್ಟಿಲ್ಲ. ಲಂಪ್‌ಸಂ ಹಣ ಒದಗಿಸಿದ್ದಾರೆ. ಇದರ ಉದ್ದೇಶವೇನು ? ಯಾರುಯಾರಿಗೆ ಬೇಕೋ ಅವರಿಗೆ ಅವರು ಕೇಳಿದಾಗ ಮಂಜೂರು ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೀಗೆ ಮಾಡಿರಬಹುದೆಂದು ನನಗೆ ತೋರುತ್ತದೆ. ತಪಶೀಲು ಪತ್ತೆಯಾದರೆ ಹಾಗೆ ಮಾಡುವುದು ಕಷ್ಟ. ಆದ್ದರಿಂದ ಹೀಗೆ ಮಾಡಿಕೊಂಡಿರಬಹುದು. ಪಕ್ಷಪಾತ ನೀತಿ ಎಂದು ಈಗೇನು ಹೇಳುತ್ತಿದ್ದೆವೋ ಅದನ್ನು ಮುಂದುವರಿಸುವುದಕ್ಕೆ ಅವಕಾಶ ಏನೇನು ಬೇಕೋ ಅದನ್ನು ಸ್ವಲ್ಪಮಟ್ಟಿಗೆ ಮಾಡಿಕೊಂಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು.

ಕಣ್ವ ರಿಸರ್ವಾಯರ್‌ನಲ್ಲಿ ನೀರು ಸಾಲುವುದಿಲ್ಲ, ಅದಕ್ಕೆ ಯಾವುದಾದರೂ ರೀತಿಯಲ್ಲಿ ಅರ್ಕಾವತಿಯಿಂದ ನೀರನ್ನೊದಗಿಸುವುದಕ್ಕೆ ಸಾಧ್ಯ, ಅಣೆಕಟ್ಟು ಕಟ್ಟಿ ಒದಗಿಸಿ ಎಂದು ಬಹಳ ದಿವಸಗಳಿಂದ ಹೇಳುತ್ತಿದ್ದೆವು. ಮುಖ್ಯ ಮಂತ್ರಿಗಳು ಹೋದ ವರ್ಷ ಲೆವಲ್ ಸ್ವಲ್ಪ ಪರ್ಮಿಟ್ ಮಾಡುವುದಿಲ್ಲ ಎಂದು ಇಂಜನಿಯರು ಹೇಳುತ್ತಾರೆ, ಅದಾಗುವುದಾದರೆ 10 ಲಕ್ಷ ರೂಪಾಯಿಗಳು ಖರ್ಚಾದರೂ ಪರವಾಗಿಲ್ಲ, ಮಾಡಿಸೋಣ ಎಂದು ಹೇಳಿದರು. ಆಮೇಲೆ ಒಂದು ಇನ್‌ವೆಸ್ಟಿಗೇಷನ್ ಮಾಡಿ ಮಾರಿಹಳ್ಳವೆಂಬ ಒಂದು ಹಳ್ಳವಿದೆ, ಅದನ್ನು ತಿರುಗಿಸಬಹುದು, ಅದು ಬಹಳ ದೊಡ್ಡದಲ್ಲ, ಸಾಮಾನ್ಯವಾದ ಹಳ್ಳ, ಆದುದರಿಂದ ಸ್ವಲ್ಪ ಹೆಚ್ಚು ಕಡಮೆ ಒಂದು ಬೆಳೆಗೆ ಎಷ್ಟು ಬೇಕೋ ಅಷ್ಟು ನೀರು 300 ಯೂನಿಟ್ಟೋ ಏನೋ ಬರುವುದಕ್ಕೆ ಅವಕಾಶವಿದೆ, ಅದರಲ್ಲಿ 100 ಯೂನಿಟ್ಟಾದರೂ ಬರುತ್ತದೆ, ಆದರಿಂದ ಸ್ವಲ್ಪ ಹೆಚ್ಚು ಕಡಮೆ ನೀರು ಬರುವುದು ಸಾಕಾಗಬಹುದು ಎಂದು ಒಂದು ರಫ್ ಎಸ್ಟಿಮೇಟ್ ಮಾಡಿ, ಅದಕ್ಕೆ 5 ಲಕ್ಷ ರೂಪಾಯಿಗಳಾಗಬಹುದೆಂದು ಹೇಳಿದರು. ಆಗಲಿ ಎಂದು ಹೇಳಿದ ಮೇಲೆ ಗೆಜೆಟ್ಟಿನಲ್ಲಿ ಈ ರೀತಿ ಕೆಲಸ ತೆಗೆದು ಕೊಂಡಿದೆ, ಇದರ ಕೆಳಗಿರುವ ರೈತರು ಹೆಚ್ಚು ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಇಷ್ಟು ಕೊಡಬೇಕು, ಇದಕ್ಕೆ ಅಕ್ಷೇಪಣೆಯೇನಾದರೂ ಇದ್ದರೆ ಹೇಳಿಕೊಳ್ಳಬಹುದು. ಇಷ್ಟು ದಿವಸ ಅವಕಾಶವಿದೆ ಎಂದು ಪಬ್ಲಿಷ್ ಮಾಡಿದರು. ರೈತರು ಕೆಲವರು ಸಂಬಂಧಪಟ್ಟ ಮಂತ್ರಿಗಳ ಬಳಿ ಹೋಗಿ ಹೆಚ್ಚು ಕಾಂಟ್ರಿಬ್ಯೂಷನ್ ಇದಕ್ಕೆ ಬೇಕಾದರೆ ಕೊಡೋಣ, ಮೊದಲು ನಾವು ಕೊಟ್ಟಿರುವುದು 150 ರೂಪಾಯಿ, ಈಗ 175ರೂಪಾಯಿ ಕೇಳುತ್ತಿದ್ದಾರೆ, ಅದು ಹೆಚ್ಚಾಗಬಹುದು, ಸ್ವಲ್ಪ ಯೋಚನೆ ಮಾಡಿ ಎಂದು ಹೇಳಿಕೊಂಡರು. ಅವರು ಇಂಜನಿಯರುಗಳನ್ನು ಎದುರಿನಲ್ಲಿಟ್ಟುಕೊಂಡು ನೀವು ಫೈನಲ್ ಎಸ್ಟಿಮೇಟ್ ಮಾಡಿದ್ದೀರಾ ಎಂದು ಕೇಳಲು ಇಲ್ಲವೆಂದು ಹೇಳಿದರು. ಮಾಡದೇನೆ ಈ ದರವನ್ನು ನಿಗದಿ ಮಾಡುವುದು ಕಷ್ಟ, ಫೈನಲ್ ಎಸ್ಟಿಮೇಟ್ ಮಾಡಿ ಕಳುಹಿಸಿ, ಸರ್ಕಾರದವರು ಎಷ್ಟು ಕೊಡಬೇಕೆಂದು ನಿರ್ಧರಿಸುತ್ತಾರೆ ಎಂದು ಹೇಳಿದರು. ಈಗ ಈ ಕೆಲಸವನ್ನು ಕೈಬಿಟ್ಟಿದ್ದಾರೆಂಬ ಸಮಾಚಾರವಿದೆ; ಇದಕ್ಕೆ ಸಂಬಂಧಪಟ್ಟಹಾಗೆ ಹಣವನ್ನೇನೂ ಒದಗಿಸಿದಂತೆ ಕಾಣುವುದಿಲ್ಲ. ಐದು ಲಕ್ಷ ರೂಪಾಯಿ ಒಂದು ಕಡೆ, ಒಂದು ಲಕ್ಷ ಚಿಲ್ಲರೆ ರೂಪಾಯಿ ಒಂದು ಕಡೆ ಅರ್ಕಾವತಿ ಪ್ರಾಜೆಕ್ಟಿಗೆ ಎಂದು ತೋರಿಸಿದ್ದಾರೆ. ತಪಶೀಲು ಸಿಕ್ಕಲಿಲ್ಲ.

(ಶ್ರೀ ವಿ. ವೆಂಕಟಪ್ಪ)

ಎರಡು ಕಡೆ ಮಾತ್ರ ಹಣ ಒದಗಿಸಿದ್ದಾರೆ. ಹೀಗೆ ಎರಡು ಕಡೆ ಏಕೆ ಹಾಕಿದರೋ ಗೊತ್ತಿಲ್ಲ. ಈ ರಿಸರ್ವಾಯರ್ ಆದಾಗಿನಿಂದ ಇದುವರೆಗೂ ರೈತರಿಗೆ ನೀರು ಸಾಕಾಗದೆ ಬಹಳವಾಗಿ ತೊಂದರೆಪಟ್ಟಿದ್ದಾರೆ. ಅನೇಕ ವೇಳೆ ನೀರು ಸಾಕಾಗುವುದಿಲ್ಲವೆಂಬುದನ್ನು ಇಂಜನಿಯರೇ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಇದು ಸರಿಯಾಗಿ ನಡೆಯಬೇಕಾದರೆ, ರೈತರಿಗೆ ಇದರಿಂದ ಉಪಕಾರವಾಗಬೇಕಾದರೆ, ಈ ಕೆಲಸವನ್ನು ಸರ್ಕಾರದವರು ಮನಸ್ಸು ಮಾಡಿ ಹೇಗಾದರೂ ಮಾಡಿಕೊಡಬೇಕು.

1 P.M.

ಈಗ ಈ ಗ್ರಾಮದ ಸುತ್ತಲೂ ನೀರು ಇರುತ್ತದೆ. ಆದುದರಿಂದ ಅಲ್ಲಿ ರಸ್ತೆಯನ್ನು ಮಾಡಿಸಿಕೊಡಬೇಕಾದುದು ಸರ್ಕಾರದವರ ಜವಾಬ್ದಾರಿ ಎನ್ನುವುದು ಗೊತ್ತಾಗಿದೆ. ಹಿಂದೆ ಶ್ರೀ ಎಲ್. ಸಿದ್ದಪ್ಪನವರು ಮಂತ್ರಿಗಳಾಗಿದ್ದ ಕಾಲದಿಂದಲೂ ಈ ಕೆಲಸ ನಡೆಯುತ್ತಲೇ ಇದೆ. ಶ್ರೀ ಎಲ್. ಸಿದ್ದಪ್ಪನವರೂ ಕೂಡ ಅಲ್ಲಿಗೆ ಒಂದಾವರ್ತಿ ಬಂದು ಹೋಗಿದ್ದಾರೆ. ಇವರಾದ ಮೇಲೆ ಮತ್ತೂ ಒಬ್ಬ ಮಂತ್ರಿಗಳು ಅಲ್ಲಿಗೆ ಬಂದು ಹೋಗಿದ್ದಾರೆ. ಆದರೆ ಅಲ್ಲಿ ಆ ರಸ್ತೆ ಮಾತ್ರ ಇನ್ನೂ ಆಗಿಲ್ಲ. ಆ ಊರು ಪಕ್ಕದಲ್ಲೇ ಆದಿಕರ್ಣಾಟಕ ಕೇರಿಯಿದೆ. ಅಲ್ಲಿ ಆಗಬೇಕಾಗಿರತಕ್ಕ ರಸ್ತೆಯೆಲ್ಲಾ ಕೇವಲ ಆರು ಫರ್ಲಾಂಗ್ ಮಾತ್ರ. ಆದರೆ ಆ ರಸ್ತೆ ಇನ್ನೂ ಆಗದೆ ಇರುವುದರಿಂದ ಆ ಊರಿನ ಜನರು ಸುತ್ತಿಕೊಂಡು, ಸಾಮಾನುಗಳನ್ನು ಹೊತ್ತುಕೊಂಡು ಓಡಾಡಬೇಕಾಗಿದೆ. ಅಲ್ಲಿ ಈ ದಿವಸ ಈ ಗಾಡಿ—ಎತ್ತುಗಳೂ ಕೂಡ ಹೋಗುವುದಕ್ಕೆ ಅವಕಾಶವಿಲ್ಲ. ಈ ಹಿಂದೆ ಈ ರಸ್ತೆಗೆ 3 ಸಾವಿರ ರೂಪಾಯಿಗಳ ಅಂದಾಜ ಆಗಿತ್ತು. ಈಗ ಅದು ಆರು ಸಾವಿರ ರೂಪಾಯಿಗಳಿಗೆ ರಿವೈಜ್ ಆಗಿದೆ. ಇದುವರೆಗಿನ್ನೂ ಆ ಕೆಲಸವನ್ನ ಮಾತ್ರ ಕೈಗೊಂಡಿಲ್ಲ. ಆದರೆ ಅಲ್ಲಿ ಈ ರಸ್ತೆಗೋಸ್ಕರವಾಗಿ ಜಮೀನನ್ನು ಬೇರೆ ಅಕ್ವಯರ್ ಮಾಡಿಕೊಂಡಿದ್ದಾರೆ. ಆದರೆ ಅವರಿಗೆ ಆ ಪರಿಹಾರ ದ್ರವ್ಯವನ್ನಿನ್ನೂ ಕೊಟ್ಟಿಲ್ಲ. ಅತ್ತಲಾಗಿ ಆ ಜಮೀನನ್ನು ಆ ಅಚ್ಚುಕಟ್ಟುದಾರರಿಗಾದರೂ ಉತ್ತುಕೊಳ್ಳಲು ಬಿಟ್ಟುಕೊಡುತ್ತಾ ಇಲ್ಲ. ಇತ್ತಲಾಗಿ ಇವರು ಅಲ್ಲಿ ರಸ್ತೆಯನ್ನೂ ಮಾಡುತ್ತಿಲ್ಲ. ಅಂತೂ ಇಂತೂ ಅಷ್ಟು ಜಮೀನು ಅಲ್ಲಿ ಈ ದಿವಸ ಪಾಳು ಬಿದ್ದಿದೆ. ರೈತರಿಗೆ ಅದರಿಂದ ಲುಕ್ಸಾನಾಗುತ್ತಿದೆ. ಇದೇ ರೀತಿಯಾಗಿ ಮತ್ತೊಂದು ಕಡೆ ಕಣ್ವಾನದಿಗೆ ಸಂಬಂಧಪಟ್ಟ ಹಾಗೆ ಜಮೀನನ್ನು ಮಾತ್ರ ಅಕ್ವಯರ್ ಮಾಡಿಕೊಂಡಿದ್ದಾರೆ. ಮಾಡಬೇಕಾಗಿದ್ದ ಕೆಲಸವನ್ನು ಮಾತ್ರ ಮಾಡಿಲ್ಲ. ರೈತರಿಗೆ ದುಡ್ಡನ್ನು ಕೊಟ್ಟಿಲ್ಲ. ಅತ್ತಲಾಗಿ ಅವರಿಗೆ ಅಲ್ಲಿ ವ್ಯವಸಾಯ ಮಾಡಲಿಕ್ಕೂ ಅವಕಾಶವಿಲ್ಲ. ಇವರು ರಸ್ತೆಯನ್ನೂ ಕೂಡ ಮಾಡಿರುವುದಿಲ್ಲ. ಈ ಇಂಜಿನಿಯರ್ ಅವರುಗಳು ತಿರುಗಾಡಲು ತಮಗೆ ಬೇಕಾದಂಥ ರಸ್ತೆಗಳನ್ನು ಮಾತ್ರ ಬೇಗ ಮಾಡಿಕೊಳ್ಳುತ್ತಿದ್ದಾರೆ. ಆದರೆ ಈ ರೈತನಿಗಾಗಿ ಮಾಡಬೇಕಾದ ರಸ್ತೆಗಳು ಪ್ರಾರಂಭವಾಗಿ ಅಲ್ಲಿಗೇ ನಿಂತುಹೋಗಿಬಿಡುತ್ತವೆ. ಇದೇ ರೀತಿಯಾಗಿ ನೇರಲೂರು ಹತ್ತಿರ ಒಂದು ಗ್ರಾಮಕ್ಕೆ ಯಾವ ನೀರಿನ ಆಸರೆಯೂ ಇಲ್ಲ. ಅಲ್ಲಿಗೆ ಒಂದಾವರ್ತಿ ಹಿಂದೆ ಮಂತ್ರಿಗಳಾಗಿದ್ದಂಥ ಶ್ರೀ ಎಚ್. ಸಿದ್ದಯ್ಯನವರು ಬಂದು ನೋಡಿಕೊಂಡು ಹೋಗಿದ್ದರು. ಅವರು ಆ ಪ್ರದೇಶಕ್ಕೆ ಅನುಕೂಲವಾಗುವಂತೆ ಒಂದು ಕೆರೆಯ ಅಂದಾಜನ್ನೇನೋ ತಯಾರಿಸುವಂತೆ ಕೆಲಸ ನಡೆಸಿದರು. ಆದರೆ ಇತ್ತೀಚೆಗೆ ಆ ಕೆರೆಯನ್ನು ಅಲ್ಲಿ ಕಟ್ಟುವುದರಿಂದ ಸರ್ಕಾರಕ್ಕೆ ನಿರೀಕ್ಷಿಸುವಷ್ಟು ಉತ್ಪತ್ತಿ ಬರುವುದಿಲ್ಲವೆಂಬ ಕಾರಣದಿಂದ ಈಚೆಗೆ ಅದರ ಮಾತೇ ನಿಂತು ಹೋಗಿದೆ. ಇನ್ನು ಶ್ರೀ ಟಿ. ಮರಿಯಪ್ಪನವರ ಕಾಲದಲ್ಲೂ ಒಂದು ವಿಚಾರ ಹೀಗೆ ಆಯಿತು. ಅಲ್ಲಿ ಕದುರುವೊಗೆ ಎಂಬ ಗ್ರಾಮದ ಕೆರೆಯಿದೆ. ಈ ದಿವಸ ಆ ಕೆರೆಗೆ ಇಟ್ಟಿರತಕ್ಕ ತೂಬನ್ನು ಇನ್ನೂ ಸ್ವಲ್ಪ ಕೆಳಕ್ಕೆ ತಗ್ಗಿಸಿ ಕೊಡಿ, ಅದರಿಂದ ವ್ಯವಸಾಯಕ್ಕೆ ಹೆಚ್ಚು ಅನುಕೂಲವಾಗುತ್ತದೆ ಎಂದು ಅಲ್ಲಿನ ರೈತರೆಲ್ಲಾ ಕೇಳಿಕೊಳ್ಳುತ್ತಿದ್ದಾರೆ. ಹೀಗೆ ತೂಬನ್ನು ಸ್ವಲ್ಪ ತಗ್ಗಿನ ಮಟ್ಟಕ್ಕೆ ಇಳಿಸಿದರೆ ಅವರಿಗೆ ಎರಡು ತಿಂಗಳು ಹೆಚ್ಚಾಗಿ ಆ ನೀರು ಸರಬರಾಯಿ ಆಗುತ್ತದೆ ಎಂದು ಶ್ರೀ ಮರಿಯಪ್ಪನವರ ಕಾಲದಿಂದಲೂ ಕೇಳುತ್ತಿದ್ದಾರೆ. ಶ್ರೀ ಮರಿಯಪ್ಪನವರು ಮಂತ್ರಿಪದವಿಯನ್ನು ಬಿಟ್ಟು ಎಷ್ಟು ವರ್ಷಗಳಾದುವು ? ಆದರೆ ಆ ಕೆಲಸವಿನ್ನೂ ಆಗಿಲ್ಲ. ಆದರೆ ಈಗ ಇರತಕ್ಕ ಆ ತೂಬಾದರೋ ಬಹಳ ಶಿಥಿಲವಾಗಿದೆ. ಅದಕ್ಕೆ 2–3 ಸಲ ಈಗಾಗಲೇ ರಿಪೇರಿ ಬೇರೆ ಆಗಿದೆ. ಆದರೆ ನೀರು ಮಾತ್ರ ಇನ್ನೂ ಧಾರಾಳವಾಗಿ ಹೋಗುತ್ತಲೇ ಇದೆ. ಅಲ್ಲಿ ಎರಡು ಬೆಳೆಗೆ ನೀರು ಕೊಡುತ್ತೇವೆಂದು ಹೇಳಿದ್ದರು. ಈಗ ಒಂದು ಬೆಳೆಗೂ ಸಹ ನೀರು ಸಾಕಾಗುತ್ತಿಲ್ಲ. ಈ ದಿವಸ ಇದೇ ರೀತಿಯಾಗಿ ಎಲ್ಲಾ ಕೆರೆಗಳ ತೂಬಿನಲ್ಲೂ ನೀರು ವೇಸ್ಟಾಗಿ ಹೋಗುತ್ತಿದೆ. ಹಿಂದಿನ ಕಾಲದಲ್ಲಿ ಈ ತೂಬುಗಳಿಗೆ ಕೊಂತ ಎಂದು ಹಾಕುತ್ತಿದ್ದರು. ಆಗ ಒಂದು ತೊಟ್ಟು ನೀರೂ ಸಹ ಪೋಲಾಗುತ್ತಿರಲಿಲ್ಲ. ಆದರೆ ಈ ದಿವಸ ಈ ವಿಧಾನ ಸರಿಯಾಗಿಲ್ಲ. ಈ ತೂಬುಗಳನ್ನು ಎಷ್ಟು ದಿವಸಗಳಾದರೂ ಕೆಟ್ಟುಹೋಗದಂತೆ ಬಹಳ ಬಂದೋಬಸ್ತಾಗಿ, ಭದ್ರವಾಗಿರುವಂತೆ, ಶಾಶ್ವತವಾಗಿರುವಂತೆ ಮಾಡುತ್ತೇವೆಂದು ಈ ತೂಬುಗಳಿಗೆಲ್ಲಾ ದೊಡ್ಡ ದೊಡ್ಡ ಗೇಟುಗಳನ್ನು ಇಡುವುದಕ್ಕೆ ಪ್ರಾರಂಭಿಸಿದ್ದಾರೆ. ಈ ವಿಧಾನದಲ್ಲಿ ವಿಶೇಷ ನೀರು ಲೀಕಾಗುತ್ತಿದೆ. ಆ ಕಣ್ವಾಕ್ಕೂ ಕೂಡ ಈಗ ಇದೇ ರೀತಿ ಗೇಟುಗಳನ್ನು ಇಟ್ಟಿದ್ದಾರೆ. ಅವುಗಳನ್ನು ಪೂರ್ತಿಯಾಗಿ ಮುಚ್ಚಿದ್ದರೂ ಒಂದು ತೂಬಿನಲ್ಲಿ ಹೋಗುವಷ್ಟು ನೀರು ಸದಾ ಹೋಗಿಯೇ ಹೋಗುತ್ತಿದೆ. . . .

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ಫೂಲ್ ಪ್ರೂಫ್ ಮೆಥೆಡ್ ಎಂದು ಕರೆಯುತ್ತಾರೆ.

ಶ್ರೀ ವಿ. ವೆಂಕಟಪ್ಪ.—ಇಲ್ಲಿಯವರೆಗೂ ನಮ್ಮ ತಾಲ್ಲೂಕಿನಲ್ಲಿ ಇಂಥಾ ಸಣ್ಣ ಪುಟ್ಟ ಕೆಲಸಗಳನ್ನಾದರೂ ಮಾಡಿಸಿಕೊಟ್ಟಿಲ್ಲ. ಬಹುಶಃ ಈಗಲಾದರೂ ಮನಸ್ಸು ಮಾಡುತ್ತಾರೆಂದು ಭಾವಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಸ್ವಾಮಿ, ನಮ್ಮ ಮಳವಳ್ಳಿ ತಾಲ್ಲೂಕಿನ ಎರಡು ಹೋಬಳಿಗಳು ಮತ್ತು ಮಾನ್ಯ ಮಿತ್ರರಾದ ಶ್ರೀನಿವಾಸ ಅಯ್ಯಂಗಾರ್ಯರ ತಾಲ್ಲೂಕಿನಲ್ಲಿ ಒಂದು ಹೋಬಳಿ ಈ ಮೂರು ಹೋಬಳಿಗಳು ವಿಶ್ವೇಶ್ವರಯ್ಯ ನಾಲಾ ಪ್ರದೇಶಕ್ಕೆ ಒಳಪಟ್ಟಿವೆ. ಆದರೆ ವಿಶ್ವೇಶ್ವರಯ್ಯ ನಾಲೆಯ ಪ್ರಯೋಜನವನ್ನು ಎಷ್ಟುಮಟ್ಟಿಗೆ ಆ ಪ್ರದೇಶದವರು ಪಡೆಯುತ್ತಾ ಇದ್ದಾರೆ ಎಂದರೆ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರ ತಾಲ್ಲೂಕಿನಲ್ಲಿ ಬರುವ ನಾಲೆಯಿಂದ ಏನೂ ಉಪಯೋಗ ಪಡೆಯುವ ಪರಿಸ್ಥಿತಿ ಇಲ್ಲ. ಮಳವಳ್ಳಿಯಲ್ಲಿ ಬರುವ ನಾಲೆಯ ನೀರು ಯಾವುದಕ್ಕೂ ಸಾಲದು. ಲಾಗಾಯ್ತಿನಿಂದ ಮಾನ್ಯ ಸಭೆಯ ಸದಸ್ಯರು ಈ ಸಭೆಯಲ್ಲೂ ಮತ್ತು ಮಾನ್ಯ ಮಂತ್ರಿಗಳು

ಆ ಪ್ರಾಂತ್ಯದಲ್ಲಿ ಸಂಚಾರ ಮಾಡಿದ ಕಾಲದಲ್ಲೂ ನಿರಂತರವಾಗಿ ಮೊರೆಯಿಟ್ಟುಕೊಂಡು ಬಂದಿದ್ದೇವೆ. ಆದಾಗ್ಯೂ ಕೂಡ, ಏನೂ ಮಾಡಿಲ್ಲ ಎಂಬ ಆಪಾದನೆಯನ್ನು ಮಾಡುತ್ತಾ ಇಲ್ಲ. ಶ್ರೀಮಾನ್ ಮರಿಯಪ್ಪನವರ ಕಾಲದಲ್ಲಿ ಹೆಬ್ಬಳ್ಳ ಪಿಕ್‌ಅಪ್ ನಾಲೆಯ ಕೆಲಸ ಪ್ರಾರಂಭ ಮಾಡಿ ಮಂಜಪ್ಪನವರ ಕಾಲದಲ್ಲಿ ಮುಕ್ತಾಯ ಮಾಡಿದ್ದಾರೆ. ಈ ಒಂದು ಪಿಕ್‌ಅಪ್ ನಾಲೆಯ ಸಹಾಯವನ್ನು ಬಿಟ್ಟರೆ ಬೇರೆ ಪ್ರದೇಶದಲ್ಲಿ ನಿರೀಕ್ಷಿಸಿದ ಮಟ್ಟದಲ್ಲಿ ಸಹಾಯ ದೊರಕಿಲ್ಲ. ಇನ್ನೂ ಕೂಡ ಅನೇಕ ಪಿಕ್‌ಅಪ್ ನಾಲೆಗಳನ್ನು ಮಾಡಿ ಸಹಾಯವನ್ನು ಕೊಡುವುದಕ್ಕೆ ಅವಕಾಶವಿದ್ದಾಗ್ಯೂ ಕೂಡ ಅದೇಕೆ ಈ ರೀತಿ ನಿಧಾನವಾಗುತ್ತಿದೆ? ಈಗ ಈ ಇಲಾಖೆಯ ಅಧಿಕಾರವನ್ನು ವಹಿಸಿಕೊಂಡಿರತಕ್ಕ ಮಾನ್ಯ ಮಂತ್ರಿಗಳೂ ಕೂಡ ಕಾಂಗ್ರೆಸ್ ಮಂತ್ರಿಗಳಾಗಿ ಆ ತಾಲ್ಲೂಕಿನಲ್ಲಿ ಸಂಚಾರ ಮಾಡಿದಾಗ ಇದನ್ನು ಅವರೇ ಖುದ್ದಾಗಿ ನೋಡಿದ್ದಾರೆ. ಎಷ್ಟುಮಟ್ಟಿಗೆ ಜನಗಳಿಗೆ ಕಷ್ಟ ಇದೆ ಎಂಬುದನ್ನು ಅವರು ಅರಿತಿದ್ದಾರೆ. ಈ ಎರಡು ಹೋಬಳಿಗಳಲ್ಲಿ ಈಗಿರತಕ್ಕ ಕಷ್ಟವನ್ನು ನಿವಾರಣೆ ಮಾಡಲು ಈಗಾಗಲೇ ಸರ್ಕಾರದ ಮುಂದೆ ಅನೇಕ ಪ್ರಪೋಸಲ್‌ಗಳು ಬಂದಿವೆ. ಅವನ್ನು ಆದಷ್ಟು ಜಾಗ್ರತೆ ನೆರವೇರಿಸಿದರೆ ಹೆಚ್ಚಿನ ಸಹಾಯವಾಗುತ್ತದೆ. ಹಲಗೂರು ಮತ್ತು ಕೊಪ್ಪಗೌಡನಪುರದ ಹೋಬಳಿಗಳಲ್ಲಿ ಮೊಟ್ಟಮೊದಲು ವಿಶ್ವೇಶ್ವರಯ್ಯ ನಾಲೆಯಿಂದ ನೀರು ಒದಗುತ್ತಿದೆ ಎಂದು ನಾವು ನಿರೀಕ್ಷಿಸಿದ್ದೆವು. ದುರಾದೃಷ್ಟವಶಾತ್ ಒಂದು ಎಕರೆಯಷ್ಟು ನೀರು ಒದಗಿಸುವುದಕ್ಕೂ ಕೂಡ ಆ ನಾಲೆಗಳಲ್ಲಿ ನೀರು ಇಲ್ಲ. ಕೃಷ್ಣರಾಜಸಾಗರದಲ್ಲಿ ನೀರಿನ ಅಭಾವವುಂಟಾಗಿರುವುದರಿಂದ ಇಲ್ಲಿಯವರೆಗೆ ನೀರು ಒದಗಿಸುವುದಕ್ಕಾಗಿಲ್ಲ ಎಂಬ ಒಂದು ಮಾತನ್ನು ಹೇಳಿಕೊಂಡು ಬರುತ್ತಾ ಇದ್ದಾರೆ. ನಾಲೆಯ ನೀರು ಒದಗಿಸುವುದಕ್ಕಾಗದಿದ್ದರೆ ಹೋಗಲಿ, ಆ ಹೋಬಳಿಗಳಲ್ಲಿ ಕೆರೆಗಳನ್ನಾದರೂ ಕಟ್ಟಿ ನೀರಾವರೀ ಸೌಕರ್ಯವನ್ನೊದಗಿಸಿ ಎಂದರೆ ಅದಕ್ಕೂ ಸಾಧ್ಯವಾಗುತ್ತದೆಯೋ ಇಲ್ಲವೋ ಎನ್ನುತ್ತಾರೆ. ಎಷ್ಟು ವಿಧವಾಗಿ ಮೊರೆ ಇಟ್ಟುಕೊಂಡರೂ ಕೂಡ ಸರ್ಕಾರ ಇದುವರೆಗೂ ಯಾವ ವಿಧವಾದ ಯೋಜನೆಯನ್ನಾಗಲೀ, ಸರ್ವೆಯನ್ನಾಗಲೀ ಮಾಡಿಲ್ಲ.

ಮತ್ತೊಂದು—ಭೀಮಾನದಿ ಪ್ರಾಜೆಕ್ಟು. ಶಿಂಷಾ ನದಿಗೆ ಗುಂಟೂರಿನ ಹತ್ತಿರ ಅಣೆ ಕಟ್ಟು ಕಟ್ಟಬೇಕೆಂದು ಒಂದು ಎಸ್ಟಿಮೇಟ್ ಮಾಡಿದ್ದಾರೆ. ದುರದೃಷ್ಟವಶಾತ್ ಇದು ಪಂಚವಾರ್ಷಿಕ ಯೋಜನೆಯಲ್ಲಿ ನಿಂತಿದೆ. ಆಮೇಲೆ ನಿಟ್ಟೂರು ಕೆರೆ, ಹಲಗೂರು ಕೆರೆ ಎಂಬ ಎರಡು ಕೆರೆಗಳಿವೆ. ಮರುಭೂಮಿಯಲ್ಲಿ ಓಯಸಿಸ್ ಇದ್ದಹಾಗೆ ಈ ಕೆರೆಗಳು ನಿಂತಿವೆ. ಹಲಗೂರು ಕೆರೆಯಲ್ಲಿ ನೀರು ಜಿನಿಗಿ ಕೋಡಿ ಒಡೆದು ನೀರೆಲ್ಲಾ ಹೋಗುತ್ತಿದೆ. ಇದನ್ನು ಸರಿಮಾಡಿಸಿಕೊಡಬೇಕೆಂದು ಎಷ್ಟು ಕೇಳಿಕೊಂಡರೂ ಪ್ರಯತ್ನ ಕೂಡ ಮಾಡಿಲ್ಲ. ನಿಟ್ಟೂರಿನ ಕೆರೆ ಕೂಡ ಒಂದು ದೊಡ್ಡ ಕೆರೆ. ಅದರ ಕೋಡಿಯನ್ನು ಎತ್ತರಿಸಿ ಹೆಚ್ಚು ನೀರನ್ನು ಒದಗಿಸುವುದಕ್ಕೆ ಅವಕಾಶ ಮಾಡಿಕೊಡಿಯೆಂದು ಎಷ್ಟು ಹೇಳಿದರೂ ಮಾಡಿಲ್ಲ. ಕೋಡಿಯನ್ನು ಎತ್ತರಿಸುವುದಕ್ಕೆ ಕಾರ್ಯಕ್ರಮವನ್ನು ಕೈಕೊಳ್ಳುವುದನ್ನು ಬಿಟ್ಟು ಅಲ್ಲಿ water spreadನ ಹೊರಗಡೆಯಿರುವ ಜಮೀನುಗಳನ್ನು ಹಂಗಾಮಿ ಸಾಗುವಳಿಗೂ ಕೊಟ್ಟು, ಅವರು ಉತ್ತು ಉತ್ತು ಕೆರೆಯನ್ನೆಲ್ಲಾ ಹಾಳುಮಾಡಿ ನೀರು ಹಾಲಿ ಇರುವ ಜಮೀನುಗಳಿಗೂ ಸಾಕಾಗುವುದಿಲ್ಲವಾಗಿದೆ. ಈ ಬಗ್ಗೆ ಯಾವಾಗ ಕೇಳಿದರೂ ಇಂಜಿನಿಯರಿಗೆ ಕಳುಹಿಸಿದ್ದೇವೆ, ಎಸ್ಟಿಮೇಟ್ ಬಂದಿಲ್ಲವೆಂದು ಉತ್ತರ ಹೇಳುತ್ತಿದ್ದಾರೆಯೇ ಹೊರತು ಯಾವ ಕಾರ್ಯಕ್ರಮವನ್ನೂ ಕೈಕೊಂಡಿಲ್ಲ. ಹಾಗೆಯೇ ಗೊಪ್ಪಗೋಡನಪುರದ ಹೋಬಳಿಯಲ್ಲಿ ಹಂದಿಹಳ್ಳ ಎಂಬ ಹಳ್ಳಕ್ಕೆ ಒಂದು ಅಣೆಕಟ್ಟನ್ನು ಕಟ್ಟಬೇಕೆಂದು ಕೇಳುತ್ತಲಿದ್ದೇವೆ. ಅದನ್ನೂ ಮಾಡಿಲ್ಲ. ಹೊನಗಳ್ಳಿ ಎಂಬಲ್ಲಿ ಒಂದು ಹಳ್ಳವಿದೆ. ಬೇಸಗೆ ಕಾಲದಲ್ಲಿ ಅಲ್ಲಿ ನೀರು ಹರಿಯುತ್ತಿರುತ್ತದೆ. ಸಂಬಂಧಪಟ್ಟ ಎಂಜಿನಿಯರುಗಳನ್ನೂ, ಅಸಿಸ್ಟೆಂಟ್ ಎಂಜಿನಿಯರುಗಳನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ ಖುದ್ದು ತೋರಿಸಿದ್ದೇವೆ. 10,000 ರೂಪಾಯಿಗಳಲ್ಲಾಗುವ ಸಣ್ಣ ಕೆಲಸ ಇದು. ಮಾಡಿದರೆ ಎಷ್ಟೋ ಸಹಾಯವಾಗುತ್ತದೆ. ಮಾಧವಮಂತ್ರಿ ಅಣೆಕಟ್ಟಿನಿಂದ ಬೆಳಕವಾಡಿಗೆ ನೀರು ಒದಗಿಸಬಹುದು. ಇದನ್ನು ಮಾಡಿ ಆ ಜನರ ಕಷ್ಟವನ್ನು ನೀಗಿಸಲೆಂದರೂ ಸರ್ಕಾರದವರಿಗೆ ಮನಸ್ಸು ಬಂದಿಲ್ಲ. ಈಗ ಹೊಸದಾಗಿ ಅಧಿಕಾರವನ್ನು ವಹಿಸಿಕೊಂಡಿರುವ ಮಾನ್ಯ ಮಂತ್ರಿಗಳಾದರೂ ತಾವೇ ಖುದ್ದಾಗಿ ನೋಡಿರುವ ಈ ಕೆಲಸಗಳನ್ನು ಉತ್ಸಾಹದಿಂದ ಮಾಡಿ ಆ ಜನರ ಕಷ್ಟವನ್ನು ಬಗೆಹರಿಸುತ್ತಾರೆಂದು ನಂಬಿದ್ದೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು, ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ಸುಮಾರು 2000 ಜೋಡಿ ಇನಾಂತಿ ಗ್ರಾಮಗಳಿವೆ. ಇವುಗಳಲ್ಲಿ ಕೇವಲ 700 ಗ್ರಾಮಗಳು ಮಾತ್ರ ಸರ್ವೆಯಾಗಿವೆ. ಸರ್ವೆಯಾಗದಿರುವ ಮಿಕ್ಕ ಗ್ರಾಮಗಳ ಸ್ಥಿತಿಯನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸರ್ಕಾರದವರು ಏನಾದರೊಂದು ಶೀಘ್ರವಾದ ಕಾರ್ಯಕ್ರಮವನ್ನು ಹಾಕಿಕೊಂಡು ಈ ಜೋಡಿ ಇನಾಂತಿಗ್ರಾಮಗಳಲ್ಲಿರತಕ್ಕ ಕೆರೆಗಳನ್ನು ದುರಸ್ತು ಮಾಡಿಸಿಕೊಡುವುದು ಬಹಳ ಅವಶ್ಯಕ.

ಆಮೇಲೆ, ಈ ಮಾನ್ಯ ಸಭೆಯ ಅನೇಕ ಸದಸ್ಯರು ಮರಾಮತ್ತು ಇಲಾಖೆಯ ಕೆಲಸ ಕಾರ್ಯಗಳ ಬಗ್ಗೆ ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಈ ಇಲಾಖೆಯಲ್ಲಿ ಕೆಲಸಕಾರ್ಯಗಳನ್ನು ನಡೆಸುತ್ತಿರುವ ಕ್ರಮ ಬಹಳ ದಿವಸಗಳಿಂದ ನಡೆಸಿಕೊಂಡು ಬಂದಿರುವ ಕ್ರಮವಾಗಿದೆ. ಇದನ್ನು ಪುನರ್ವ್ಯವಸ್ಥೆಮಾಡುವುದು ಅತ್ಯಾವಶ್ಯಕ. ಅದಕ್ಕಾಗಿ ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿ ಈ ಇಲಾಖೆಯ ಕೆಲಸ ಕಾರ್ಯಗಳು ಬೇಗ ನಡೆಯಬೇಕಾದರೆ ಏನು ಮಾಡಬೇಕೆಂಬುದನ್ನು ಕಂಡುಹಿಡಿಯುವುದು ಅವಶ್ಯಕ. ಏಕೆಂದರೆ ಈ ಇಲಾಖೆಯಲ್ಲಿ ಕೆಲಸಗಳು ಬಹಳ ನಿಧಾನವಾಗಿ ಆಗುತ್ತಾ ವರ್ಷಾನುಗಟ್ಟಲೆ ರಿಕಾರ್ಡುಗಳು ಕೊಳೆಯುತ್ತಾ ಬಿದ್ದಿರುವುದು ಸರ್ವಸಾಧಾರಣವಾಗಿಬಿಟ್ಟಿದೆ. ಯಾವ ಕೆಲಸಕ್ಕೂ ಮಧ್ಯೆಮಧ್ಯೆ Technical defects ಎಂದು ತೆಗೆದು ರಿಕಾರ್ಡುಗಳು ಹಿಂದೆ ಬಿದ್ದುಹೋಗುತ್ತವೆ. ಆದ್ದರಿಂದ ತ್ವರಿತವಾಗಿ ಕೆಲಸಗಳಾಗದಿರುವುದಕ್ಕೆ ಎಲ್ಲಿ ಏನು ತೊಂದರೆಯಿದೆಯೆಂಬುದನ್ನು ಕಂಡುಹಿಡಿಯುವುದು ಸೂಕ್ತವೆಂದು ಹೇಳಿ, ಸರ್ಕಾರದವರು ಈ ಇಲಾಖೆಗೆ ಒದಗಿಸಿರುವ ಹಣ ಬಹಳ ಸಾಲದೆಂದು ಹೇಳಬಯಸುತ್ತೇನೆ. ಕೆಲಸಗಳು ಜಾಸ್ತಿಯಾಗಿ ಬೆಳೆಯುತ್ತಲಿರುವ ಈ ಕಾಲದಲ್ಲಿ ಸಾಕಾದಷ್ಟು ಹಣವನ್ನು ಒದಗಿಸದೆ ಹೋದರೆ ಜನರ ಆಶೋತ್ತರಗಳನ್ನು ಪೂರೈಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಬಾಬಿಗೆ ಮತ್ತಷ್ಟು ಹಣವನ್ನು ಒದಗಿಸುವುದು ಅಗತ್ಯವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ (ಸೊರಬ-ಷಿಕಾರಿಪುರ).—ಸ್ವಾಮಿ, ಎಲ್ಲಾ ಚರ್ಚೆಗಳು ಜಮಾಬಂದಿ ಕಾಲದಲ್ಲಿ, ಅರ್ಜಿ ಕೊಡುವುದು ಅದಕ್ಕೆ ಉತ್ತರ ಕೊಟ್ಟ ಹಾಗೆ ವರ್ಷೇ ವರ್ಷೇ ನಾವು ಕೇಳಿದ್ದು ತಾವು ಹೇಳುವುದು ಈ ರೀತಿಯಾಗುತ್ತದೆ. ಸೊರಬ ತಾಲ್ಲೂಕಿನ ಒಂದೆರಡು ವಿಚಾರ ಮಾತ್ರ ಹೇಳುತ್ತೇನೆ. 1920ನೇ ಇಸವಿಯೊಳಗೆ ದಂಡಾವತಿ ಪ್ರಾಜೆಕ್ಟ್ ಅಂದಾಜು ಆಗಿತ್ತು. ಸೊರಬ ತಾಲ್ಲೂಕಿನಲ್ಲಿ ಸಂಸ್ಥಾನದ 1/8 ಭಾಗದಷ್ಟು ಬೆಳೆಯುತ್ತಿದ್ದಾರೆ. ಸಂಸ್ಥಾನದೊಳಗೆ 16 ಲಕ್ಷ procurement ಆದರೆ, ನಮ್ಮ ಒಂದು ತಾಲ್ಲೂಕಿನಲ್ಲಿ ಎರಡುಲಕ್ಷ ಕೊಟ್ಟಿದೆ. ಅಲ್ಲಿ Commercial crops ಬೆಳೆಯುವ ಸೌಕರ್ಯ ಬೇರೆ ಯಾವುದೂ ಇಲ್ಲ. ಈಗ ಒಂದು project ಆದರೆ, ರೈತರು ಉದ್ಧಾರವಾಗುತ್ತಾರೆ ಎಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು ಅಂತಹ ಪ್ರಾಜೆಕ್ಟು. ಇದರಿಂದ ಉಪಯೋಗವಾಗುತ್ತದೆ. ಆಕಡೆ ದೃಷ್ಟಿ ಕಮ್ಮಿ ಮಾಡಿರಬಹುದು. ಮಾನ್ಯ ಅಧ್ಯಕ್ಷರಿಗೂ, ಅಲ್ಲಿನ ವಿದ್ಯಮಾನಗಳು ಗೊತ್ತು. ಅಲ್ಲಿ ದೊಡ್ಡ ದೊಡ್ಡ ಕೆರೆಗಳ ಕಾಮಗಾರಿಗಳು ಆಗುವುದಕ್ಕೆ ಅವಕಾಶವಿಲ್ಲ. ರೈತರಿಗೆ ಬಹಳ ತೊಂದರೆ ಇದೆ. ಸರ್ವಸಾಮಾನ್ಯವಾಗಿ ಪ್ರಾಜೆಕ್ಟುನೊಳಗೆ 15 ಸಾವಿರಕ್ಕಿಂತ ಹೆಚ್ಚಿಗೆ ಬೇಕಾಗುವ ಕೆರೆಗಳು ಯಾವುದೂ ಮಾಡಿಲ್ಲವೆಂದು ತಮಗೆ ತಿಳಿಸುತ್ತೇನೆ. 2,000 ಕೆರೆಗಳಲ್ಲಿ 600 ಕೆರೆಗಳ ಕಾಮಗಾರಿಗಳು ಮಾತ್ರ ಆಗಿರಬಹುದು. ಇದು ಸಂಸ್ಥಾನದ ಕೊನೆಯ ತಾಲ್ಲೂಕು ಆಗಿದೆ. ಆದ್ದರಿಂದ ತಮ್ಮ ಗಮನಕ್ಕೆ ಬರುವ ಪರಿಸ್ಥಿತಿ ಇರುವುದಿಲ್ಲ. ಅನ್ನವಟ್ಟಿ ಹೋಬಳಿಯಲ್ಲಿ ತತ್ತಾವುಗ್ರಾಮದಲ್ಲಿ ಒಂದು ಕೆರೆ ಇದೆ. ಇದನ್ನು ರಿಪೇರಿ ಮಾಡಿಸಲು ಗ್ರಾಮವಾಸಿಗಳು ಮಂತ್ರಿಗಳಿಗೆ ಅರ್ಜಿಯನ್ನು ಕೊಟ್ಟು 20 ವರ್ಷಗಳಾಯಿತು. ಇದಕ್ಕೆ ಅಂದಾಜು ತಯಾರಾಗಿದೆ ಎಂದು ಹೇಳುತ್ತಾರೆಯೇ ಹೊರತು ಕೆಲಸ ಇನ್ನೂ ತೆಗೆದುಕೊಂಡಿಲ್ಲ. ಮೊದಲಿನಿಂದಲೂ ಇದು ಹಿಂದುಳಿದ ತಾಲ್ಲೂಕು. ಆದ್ದರಿಂದ ದಂಡಾವತಿ ಪ್ರಾಜೆಕ್ಟನ್ನು ಮುಂದಿನ ವರ್ಷವಾದರೂ ತೆಗೆದುಕೊಳ್ಳಬೇಕು. ಈಗ ಐದ್ಕೈದು ವರ್ಷಗಳಿಗೆ limit ಇಟ್ಟುಕೊಂಡು ಕೆಲಸ ಮಾಡುತ್ತಾ ಇರುವುದರಿಂದ ಇನ್ನುಮುಂದೆ 10 ವರ್ಷಗಳ limit ಬರಬಹುದು. ಈರೀತಿ 10ನೇ ವರ್ಷಕ್ಕೆ ಮುಂದೆ ಹಾಕುತ್ತಾ ಹೋದರೆ ಜನಗಳಿಗೆ ತೊಂದರೆಯಾಗುತ್ತದೆ. ಆದಕಾರಣ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಅಂಜನಾಪುರ ಕೆರೆ ಕೋಡಿಯನ್ನು ಮೂರು ಅಡಿ ಎತ್ತರಿಸಿ ನೀರನ್ನು ಸೇರಿಸಿಕೊಂಡಿದ್ದರೆ ಬೇಸಿಗೆ ಕಾಲದೊಳಗೆ ಹೆಚ್ಚಿನ ಉಪಯೋಗವಾಗುತ್ತದೆ. ಇದರಿಂದ ಯಾವ ತರಹ ಲುಕ್ಸಾನೂ ಇಲ್ಲ. ಯಾವ ಗ್ರಾಮವೂ ಮುಳುಗಡೆ ಯಾಗುವುದಿಲ್ಲ. ಅದು ಬಹಳ ಉಪಯುಕ್ತವಾದುದು. ಅಂಬಳಿಗೊಳ ಪ್ರಾಜೆಕ್ಟು ತೆಗೆದುಕೊಂಡು ಕೆಲಸ ಸಾಧ್ಯವಾದ ಮಟ್ಟಿಗೂ ನಡೆಯುತ್ತಾ ಇದೆ. ಅದರ ಏರಿ ಎತ್ತರಿಸಿ ಹೆಚ್ಚು ನೀರು ನಿಲ್ಲುವಂತೆ ಮಾಡಿದರೆ, ಹೆಚ್ಚು ಜನಗಳಿಗೆ ಅನುಕೂಲವಾಗುತ್ತದೆ. ಹೆಚ್ಚು ನೀರು ನಿಲ್ಲಬಾರದು ಎಂಬ ಉದ್ದೇಶದಿಂದ ಕೋಡಿ ತಗ್ಗಿಸುತ್ತಾರೆ. ನೀರು ಹೆಚ್ಚು ನಿಲ್ಲುವುದಕ್ಕೆ ಅವಕಾಶವಿದೆ. ಷಿಕಾರಿಪುರದಲ್ಲಿ ಒಂದು ಬೆಂಗಾಡು ಹೊಸೂರು ಹೋಬಳಿ ಇದೆ. ವರ್ಷೇ ವರ್ಷೇ ಇಲ್ಲಿ ಪೈರು ಆಗುವುದಿಲ್ಲ. ನೀರು ಇಲ್ಲಿಗೆ ಹೋಗಬಹುದು. ಕಮಿಟಿಯವರು ಹೋಗಿ ನೋಡಿದ್ದಾರೆ. ಈ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಸರಿಯಾದ ಉತ್ತರ ದೊರೆಯಲಿಲ್ಲ. ಆ ಕಮಿಟಿಯ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಏರಿಯನ್ನು ಏರಿಸಬೇಕು. ಆಗ ಅಲ್ಲಿಗೆ ನೀರು ಒದಗುತ್ತದೆ.

*ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಇಲಾಖೆಗಳ ಮಂತ್ರಿಗಳು).—ಡಿಮ್ಯಾಂಡ್ ನಂಬರ್ 39 (a) ವಿಷಯದಲ್ಲಿ ನಾಲ್ಕು ಮಾತುಗಳನ್ನು ಮಾತ್ರ ಹೇಳುತ್ತೇನೆ. Personal and Miscellaneous Inams rules final ಆಗಿ publicationಗೆ ಕೊಟ್ಟಿದೆ. Religious and Charitable Inams ವಿಷಯದಲ್ಲಿ final ಆಗಿ ರೂಲ್ಸ್ draft ಆಗುತ್ತಾ ಇದೆ. ಈ ಕಾನೂನನ್ನು ಬಹಳ ಜಾಗ್ರತೆ ಜಾರಿಗೆ ಕೊಡುವುದಕ್ಕೆ rules ಅವಶ್ಯಕ. ಅದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಜೊತೆಗೆ ಇನ್ನೂ ಕೆಲಸಗಳನ್ನು ಮುಂದುವರಿಸುವುದಕ್ಕೆ ಮತ್ತು ಅದರ ವ್ಯಾಪ್ತಿ ತೀರ್ಮಾನ ಮಾಡುವುದಕ್ಕೆ ಒಬ್ಬರು ಸ್ಪೆಷಲ್ ಡೆಪ್ಯುಟಿ ಕಮಿಷನರು, ಮೂರುಜನ ಅಮಲ್ದಾರರು ಮತ್ತು ಅದಕ್ಕೆ ತಕ್ಕ ಸಿಬ್ಬಂದಿ ಏರ್ಪಾಡು ಮಾಡಿದೆ. ಇದರ ಜೊತೆಯಲ್ಲಿ ಸರ್ವೆ ಮತ್ತು ಸೆಟಲ್‌ಮೆಂಟ್ ಮಾಡುವುದಕ್ಕೋಸ್ಕರ ಹೊಸದಾಗಿ ಅಮಲ್ದಾರರು ಮತ್ತು ಸಿಬ್ಬಂದಿಯನ್ನು 17ನೇ ತಾರೀಖಿನೊಳಗೆ ಮೊಕರೂರು ಮಾಡಿದೆ. ಎಲ್ಲೆಲ್ಲಿ ಇನಾಂ ಗ್ರಾಮಗಳು ಸರ್ವೆ ಆಗಿವೆಯೋ ಅಲ್ಲಿ ಹೋಗಿ ಕೆಲಸ ಮಾಡುವುದಕ್ಕೆ ಸೂಕ್ತಕಾರ್ಯಕ್ರಮ ತೆಗೆದುಕೊಂಡಿದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಟೆನೆಂಟ್‌ಗಳಿಗೆ ತೊಂದರೆಯಾಗಬಾರದೆಂದು Alienated Villages (Protection of Tenants and Miscellaneous Provisions Amendment) Act ಇದೇ ಡಿಸೆಂಬರಿಗೆ ಪೂರೈಸಿತು. ಆದಕಾರಣ ಅದನ್ನು ಆರ್ಡಿನೆನ್ಸ್ ಮೂಲಕ ಮುಂದುವರಿಸಿ ಈಗ ಈ ಅಧಿವೇಶನದಲ್ಲಿ ಕಾನೂನು ಮಾಡಿದ್ದೇವೆ. ಬಜೆಟ್ಟಿನಲ್ಲಿ ಈ ಬಗ್ಗೆ ಹಣವನ್ನೊದಗಿಸಿಲ್ಲವೆಂದು ಆಕ್ಷೇಪಣೆ ಬಂತು. ಈ ಕಾನೂನಿನ ಸಂಬಂಧವಾಗಿ ರೂಲ್ಸ್ ಮಾಡಬೇಕಾಗಿತ್ತು. ಅದೂ ಆಗುತ್ತಿದೆ. ಪೂರ್ತಿಯಾಗುವುದರಲ್ಲಿದೆ. ಈ ಕೆಲಸ ಮುಗಿಯುವ ಹೊತ್ತಿಗೆ, ಅಕ್ಟೋಬರ್ ತಿಂಗಳಿನಲ್ಲಿ ಎಷ್ಟುಹಣ ಬೇಕಾಗುತ್ತದೆಂಬುದನ್ನು ನೋಡಿ, ಅದಕ್ಕೆ ಮಂಜೂರಾತಿ ಪಡೆಯುತ್ತೇವೆ, ತೊಂದರೆಯೇನೂ ಇಲ್ಲ. ಆದುದರಿಂದ ಈ ಡಿಮ್ಯಾಂಡಿಗೆ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ . ಕೆ. ಪ್ರಭಾಕರ್.—ಇನಾಂ ರದ್ದಿಯಾತಿ ಕಾನೂನಿಗೆ ರೂಲ್ಸ್ ತಯಾರಾಗುತ್ತಿವೆ ಎಂದು ಬಹಳ ದಿವಸಗಳಿಂದಲೂ ಹೇಳುತ್ತಿದ್ದೀರಿ. ಅದಷ್ಟು ಬೇಗ ಅದರ ಕೆಲಸವನ್ನ ಮುಗಿಸಬೇಕೆಂದು ಸೂಚಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕೆ ಶಾಖೆಯ ಮಂತ್ರಿಗಳು).—ಏಳು ಕೋಟಿ ಚಿಲ್ಲರೆಯಷ್ಟು ಹಣವನ್ನು ಕೆರೆಗಳು ಮತ್ತು ಇತರ ನೀರಾವರಿ ಕಾಮಗಾರಿಗಳ ಬಗ್ಗೆ ಕೊಡತಕ್ಕ ವಿಷಯದಲ್ಲಿ ಬಹಳ ವಿಪುಲವಾಗಿ ಚರ್ಚೆ ನಡೆದಿದೆ. ಮಾನ್ಯಸದಸ್ಯರನೇಕರು ಬಹಳ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಅಲ್ಲದೆ, ಅನೇಕ ಕೆಲಸಕಾರ್ಯಗಳು ನಿರೀಕ್ಷಿಸಿದ ಪ್ರಮಾಣದಲ್ಲಿ ನಡೆದಿಲ್ಲವೆಂದು ಹೇಳಿ ಅತೃಪ್ತಿಯನ್ನು ಸೂಚಿಸಿದ್ದಾರೆ. ಇನ್ನು ಕೆಲವರು ಅನೇಕ ಕೆಲಸಗಳು ಚೆನ್ನಾಗಿ ನಡೆದಿರುವ ಬಗ್ಗೆ ಸಹಾನುಭೂತಿಯನ್ನೂ ಸಂತೋಷವನ್ನೂ ವ್ಯಕ್ತಪಡಿಸಿದ್ದಾರೆ. ಮಾನ್ಯ ಸದಸ್ಯರು ಹೇಳಿರತಕ್ಕ ಎಲ್ಲಾ ಅಂಶಗಳನ್ನೂ ನಾನು ಬಹಳ ಕುತೂಹಲದಿಂದ ಕೇಳಿದೆ. ಇದರಲ್ಲಿ ಕೆಲವು

ಸಣ್ಣ ಪುಟ್ಟ ಕೆರೆಗಳ ದುರಸ್ತಿನ ಸಂಬಂಧದಲ್ಲಿ, ಸ್ಥಳೀಯ ವಿಷಯಗೆಳಲ್ಲಿ ಪ್ರಸ್ತಾಪ ಮಾಡಿದರು; ಕೆಲವರು ನೀತಿಯ ವಿಷಯ ಪ್ರಸ್ತಾಪ ಮಾಡಿದರು. ಅವರು ಹೇಳಿರತಕ್ಕ ಎಲ್ಲ ವಿಷಯಗಳಿಗೂ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಕೆಲವು ಮುಖ್ಯ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುವುದು ಅವಶ್ಯಕ. ಇನ್ನು ಕೆಲವು ಸದಸ್ಯರು ಪ್ರಸ್ತಾಪ ಮಾಡಿದ ವಿಷಯಗಳ ಬಗ್ಗೆ ನಾನು ಪ್ರಸ್ತಾಪ ಮಾಡದೇ ಬಿಟ್ಟು ಹೋದರೆ, ಅಂಥ ವಿಷಯಗಳ ಬಗ್ಗೆ ಈ ಅಧಿವೇಶನ ಕಳೆದ ಹದಿನೈದು ದಿವಸಗಳಲ್ಲಿ ಅವರು ಸೂಚಿಸಿದ ವಿಷಯದಲ್ಲಿ ಸರ್ಕಾರದ ಅಭಿಪ್ರಾಯವೇನು, ಅದು ಯಾವ ಮಟ್ಟದಲ್ಲಿದೆ, ಸಾಧ್ಯವೆ ಅಥವಾ ಅಸಾಧ್ಯವೆ, ಹಾಗಿದ್ದರೆ ಏನು ಕಾರಣ ಎಂಬುದಕ್ಕೆ ಮಾನ್ಯ ಸದಸ್ಯರಿಗೆ ಉತ್ತರ ಕೊಡುವುದಕ್ಕೆ ಒಪ್ಪಿಕೊಳ್ಳುತ್ತೇನೆ. ಆದುದರಿಂದ, ಮುಖ್ಯವಾಗಿ ತಕ್ಷಣದಲ್ಲಿ ಈಗ ಜ್ಞಾಪಕಕ್ಕೆ ಬರುವ ವಿಷಯಗಳನ್ನು ಮಾತ್ರ ಪ್ರಸ್ತಾಪಿಸುತ್ತೇನೆ. ಮಾವಿನ ಹೊಳೆ ವಿಷಯದಲ್ಲಿ ಶ್ರೀ ಎಲ್. ಸಿದ್ದಪ್ಪನವರು ಹೇಳಿದರು. ಇನ್ನೊಂದು ಗಾಡಿನ ಕಟ್ಟೆಯ ವಿಷಯವನ್ನೂ ಪ್ರಸ್ತಾಪ ಮಾಡಿದರು. ಶ್ರೀ ಹುಚ್ಚೇಗೌಡರು ಹಿತ್ತಲಕೊಪ್ಪಲುಕೆರೆ ವಿಷಯ ಪ್ರಸ್ತಾಪ ಮಾಡಿದರು. ಶ್ರೀ ನಾಗರಾಜ ಮೂರ್ತಿಯವರು ಟಿ.-ನರಸೀಪುರದ ಕೊನೆಯ ಹಂತದಲ್ಲಿರುವ ಜಮೀನುಗಳಿಗೆ ನೀರು ಸರಬರಾಯಿ ಆಗದೇಯಿರುವುದಕ್ಕಾಗಿ ಅತೃಪ್ತಿಯನ್ನು ವ್ಯಕ್ತಪಡಿಸಿದರು. ಮತ್ತೆ ಮಾನ್ಯ ವೆಂಕಟಪ್ಪನವರು ಕಣ್ವ ಕೆರೆಗೆ ನೀರು ಸರಬರಾಯಿ ಆಗತಕ್ಕದ್ದಕ್ಕೆ ಕಷ್ಟವಾಗಿದೆ ಎಂದು ಹೇಳಿದರು. ನಾನು ಇವುಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ತೆಗೆದುಕೊಂಡು ತಮಗೆ ಸರ್ಕಾರದ ಅಭಿಪ್ರಾಯವೇನೆಂಬುದನ್ನು ತಿಳಿಸುತ್ತೇನೆ.

ಈ ಬಡ್ಜೆಟ್ ಅಷ್ಟು ತೃಪ್ತಿಕರವಾಗಿಲ್ಲ, ಅಂಕಿಅಂಶಗಳನ್ನು 'ಜಗ್ಲರಿ' ಮಾಡಿದ್ದಾರೆ, ಸುಲಭವಾಗಿ ತಿಳಿಯುವ ರೀತಿಯಲ್ಲಿ ಮಾಡಿಲ್ಲವೆಂದು ಮಾನ್ಯ ದೇವರಾಜ ಅರಸ್‌ರವರೂ ಮತ್ತು ಮಾನ್ಯ ವೆಂಕಟಪ್ಪನವರೂ ತಿಳಿಸಿದರು. ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈಗ ಮಾಡಿರುವ ಬಡ್ಜೆಟ್ ಬಹಳ ಸುಲಭಷಾದದ್ದು. ಅದನ್ನು ವಿವರಿಸಿದ ಮೇಲೆ ತಮಗೇ ಗೊತ್ತಾಗುತ್ತದೆ. ಈಗ ಜಾರಿಗೆ ತಂದಿರುವ ಹೊಸಪದ್ಧತಿಗೂ, ಹಿಂದಿನ ಪದ್ಧತಿಗೂ ಸ್ವಲ್ಪ ವ್ಯತ್ಯಾಸವಿದೆ. ಹೋದವರ್ಷವಿದ್ದ ಪದ್ಧತಿಗೂ, ಈ ವರ್ಷದ ಪದ್ಧತಿಗೂ ಒಂದು ವ್ಯತ್ಯಾಸವಿದೆ. I.N.E.D. 18, ಎನ್ನುವುದು, 19 ಮತ್ತು 68 ಇವೆಲ್ಲವೂ expenditure head ಅಂದರೆ ಬರೀ ಖರ್ಚು ಬಾಬು ಎಂದು ಮತ್ತು I.N.E.D. 17 ಎನ್ನುವುದು ಆದಾಯ ಬಾಬು ಎಂದೂ ತಿಳಿಯಬೇಕು. Revenue ಮತ್ತು Capital expenditure ಇರತಕ್ಕ Krishnarajasagara, Kolar Gold Fields Water Works, Chamarajasagara Water Works, Vani Vilas Water Works ಇವೆಲ್ಲವೂ ಈ ಬಾಬಿನಲ್ಲಿ ಬರುತ್ತವೆ.

ಇದುವರೆಗಿನ ಪದ್ಧತಿಯಲ್ಲಿ I.N.E.D. 18 ರಲ್ಲಿ 50 ಸಾವಿರ ರೂಪಾಯಿಗಳಿಗೆ ಕೆಳಪಟ್ಟಂಥ ಕೆಲಸ ಕಾರ್ಯಗಳಿರಬೇಕೆಂದೂ, 19 ರಲ್ಲಿ 50 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಐದು ಲಕ್ಷ ರೂಪಾಯಿಗಳಿಗೆ ಒಳಪಟ್ಟಂಥ ಕೆಲಸಕಾರ್ಯಗಳೂ, 68ರಲ್ಲಿ ಐದು ಲಕ್ಷಕ್ಕೆ ಮೇಲ್ಪಟ್ಟ ಎಲ್ಲ ಕೆಲಸಕಾರ್ಯಗಳೂ ಇರಬೇಕೆಂದೂ ವಿಧಾಯಕವಾಗಿತ್ತು. ಈಗ 19 ರಲ್ಲಿ 50 ಸಾವಿರ ರೂಪಾಯಿಗಳಿಗೆ ಮೀರಿ ಐದು ಲಕ್ಷಕ್ಕೆ ಒಳಪಟ್ಟ ಕೆಲಸಕಾರ್ಯಗಳು ಇನ್ನುಮುಂದೆ ಇದರಿಂದ ತಪ್ಪಿ it may be merged in I.N.E.D. 68 ಎಂದು ಒಂದು ಬದಲಾವಣೆ ಮಾಡಿದ್ದಾರೆ. I.N.E.D. 18 ರಲ್ಲಿ ಒಂದು ಬದಲಾವಣೆ ಮಾಡಿದ್ದಾರೆ. 20 ಸಾವಿರ ರೂಪಾಯಿಗಳಿಗೆ ಕೆಳಪಟ್ಟ ಕೆಲಸಗಳೆಲ್ಲ I.N.E.D 18 ರಲ್ಲಿಯೇ ಇರುತ್ತದೆ. 20 ಸಾವಿರಕ್ಕೆ ಮೇಲ್ಪಟ್ಟವೆಲ್ಲ I.N.E.D. 68 (A) ನಲ್ಲಿ ಅಂದರೆ 20 ಸಾವಿರಕ್ಕೆ ಮೇಲ್ಪಟ್ಟು 50 ಸಾವಿರಕ್ಕೆ ಒಳಗಿರುವ ಕೆಲಸಗಳೆಲ್ಲ ಇದರಲ್ಲಿ ಬರುತ್ತವೆ. ಈಗ ಬಹಳ ಸುಲಭವಾಗಿ ತಿಳಿಯುತ್ತದೆಂದು ಕಾಣುತ್ತದೆ. ಆದುದರಿಂದ I.N.E.D. XVII ರಲ್ಲಿ Krishnarajasagar, Kolar Gold Fields, Chamarajasagar and Vani Vilas Water Works ಬರುತ್ತವೆ. I.N.E.D. 18 ರಲ್ಲಿ ನೀರಾವರಿ ಕಾಮಗಾರಿಗಳಿಗೆ ಸಂಬಂಧಪಟ್ಟಂಥ 20 ಸಾವಿರ ರೂಪಾಯಿಗಳಿಗೆ ಕೆಳಪಟ್ಟ ಕಾರ್ಯಗಳು ಬರುತ್ತವೆ I.N.E.D. 68-A ನಲ್ಲಿ 20 ಸಾವಿರಕ್ಕೆ ಮೇಲ್ಪಟ್ಟ ಮತ್ತು 50 ಸಾವಿರ ರೂಪಾಯಿಗಳಿಗೆ ಕೆಳಪಟ್ಟ ಎಲ್ಲ ಕೆಲಸಗಳೂ ಬರುತ್ತವೆ. ಮತ್ತು I.N.E.D. ನಲ್ಲಿ 50 ಸಾವಿರಕ್ಕೆ ಮೇಲ್ಪಟ್ಟ ಕೆಲಸಗಳೆಲ್ಲ ಬರುತ್ತವೆ. ಆದುದರಿಂದ ನಿಮ್ಮಗಳಿಗೆ ಸಂಬಂಧಪಟ್ಟ ಕೆಲಸ ಯಾವುದು ಎಂದು ತಿಳಿದರೆ ಅದನ್ನು ಯಾವ 'ಹೆಡ್'ನಲ್ಲಿ ನೋಡಬೇಕು ಎನ್ನುವುದು ಸುಲಭವಾಗಿ ತಿಳಿಯುತ್ತದೆ. ಇಷ್ಟು ವಿವರಣೆಯನ್ನು ಕೊಟ್ಟಮೇಲೆ ಇದು ಜಗ್ಲರಿಯಲ್ಲವೆಂದು ಮಾನ್ಯಸ್ನೇಹಿತರು ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ.

ಇದರಲ್ಲಿ ಕೆಲವು ಮಾನ್ಯಸದಸ್ಯರು ತಾವು ಹೇಳಿದಂಥ ಕೆಲಸಕಾರ್ಯಗಳನ್ನು ಕಾರ್ಯಗತ ಮಾಡಲು ಸೇರಿಸಿಲ್ಲವೆಂದು ಟೀಕೆ ಮಾಡಿದರು. ಶ್ರೀ ಹುಚ್ಚಮಾಸ್ತಿಗೌಡರು ಮಂಗಳ ಪ್ರಾಜೆಕ್ಟ್ ಸೇರಿಸಿಲ್ಲವೆಂದರು. ಶ್ರೀ ಶಿವನಂಜೇಗೌಡರು ಮೈಸೂರಿನಲ್ಲಿ ಎಣ್ಣೆಹೊಳೆ ಪ್ರಾಜೆಕ್ಟ್ ಸೇರಿಸಿಲ್ಲವೆಂದು ಆಕ್ಷೇಪಣೆ ಮಾಡಿದರು. ಮತ್ತು ಹಂದಿಹಳ್ಳ ಪ್ರಾಜೆಕ್ಟ್ ಸೇರಲಿಲ್ಲವೆಂದು ಶ್ರೀ ಬಿ. ಪಿ. ನಾಗರಾಜಮೂರ್ತಿಗಳು ಹೇಳಿದರು. ಶ್ರೀ ನಾಗರಾಜಮೂರ್ತಿಗಳವರ ಗಮನವನ್ನು ಎರಡನೆ ವಾಲ್ಯೂಂ 107ನೆ ಪುಟಕ್ಕೆ ಸೆಳೆಯುತ್ತೇನೆ. ಅದರಲ್ಲಿ ಹಂದಿಹಳ್ಳ ಪ್ರಾಜೆಕ್ಟಿಗೆ ಹಣ ಒದಗಿಸಿರುವುದನ್ನು ಅವರು ನೋಡಬಹುದು. ಮತ್ತೆ ಶ್ರೀ ಶಿವನಂಜೇಗೌಡರು 142ನೆ ಪುಟವನ್ನು ನೋಡಿದರೆ ಅಲ್ಲಿ ಅವರ ಎಣ್ಣೆಹೊಳೆ ಪ್ರಾಜೆಕ್ಟ್‌ಗೆ ಹಣ ಒದಗಿಸಿರುವುದನ್ನು ತಾವು ನೋಡಬಹುದು. ಶ್ರೀ ಹುಚ್ಚಮಾಸ್ತಿಗೌಡರು ನಾಗಿನಿ ನದಿಗೆ ಅಡ್ಡಕಟ್ಟೆ ಹಾಕಿ ಮಂಗಳ ಪ್ರಾಜೆಕ್ಟ್ ಕೆಲಸಮಾಡುವುದನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸದಿರುವುದು ಬಹಳ ಅನ್ಯಾಯ ಮಾಡಿದ ಹಾಗಾಗಿದೆ ಎಂದು ಹೇಳಿದರು. ಅನ್ಯಾಯ ಮಾಡಕೂಡದೆಂದು ಬಡ್ಜೆಟ್ ಎಸ್ಟಿಮೇಟಿನ 143ನೆಯ ಪುಟದಲ್ಲಿ "Constructing a dam across the River Nagini at Mangala in Tumkur Taluk" ಎಂಬುದಕ್ಕೆ 1956-57ನೆಯ ಸಾಲಿನಲ್ಲಿ 5,000 ರೂಪಾಯಿಗಳನ್ನು ಒದಗಿಸಿದ್ದೇವೆ.

1-30 P.M.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇದನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏಕೆ ಸೇರಿಸಿಲ್ಲ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲೋ ಸೇರಿಸಿರಲಿ, ನಿಮಗೆ ಕೆಲಸವಾದರೆ ಸರಿ. ಮಾನ್ಯಸದಸ್ಯರು ಬಡ್ಜೆಟ್ ಅಂಕಿಅಂಶ ಎಲ್ಲಿದೆಯೆಂಬುದು ಗೊತ್ತಾಗಲಿಲ್ಲವೆಂಬ ಕಾರಣದಿಂದ ಟೀಕೆಟಿಪ್ಪಣಿಗಳನ್ನು ಮಾಡುವುದಕ್ಕೆ ಅವಕಾಶವಾಯಿತೆಂಬುದನ್ನು ಗಮನಕ್ಕೆ ತರಲು ಇದನ್ನು ಹೇಳಿದೆನೇ ಹೊರತು ಮತ್ತೇನೂ ಅಲ್ಲ. ಶ್ರೀ ಚಿಕ್ಕಲಿಂಗಯ್ಯನವರು ಪ್ರಾರಂಭದಲ್ಲಿ ಟ್ಯಾಂಕ್ ಪಂಚಾಯಿತ್ ಸಿಸ್ಟಂ ಜಾರಿಗೆ ತರಬೇಕು, ಸಾಮಾನ್ಯವಾಗಿ ನಾಲೆ ಮತ್ತು ಹಿಕ್ಕಲು ಕೆಲಸಕಾರ್ಯ ಸರ್ಕಾರವೇ ನೋಡಿಕೊಳ್ಳಬೇಕು ಎಂದು ಹೇಳಿದರು. ಟ್ಯಾಂಕ್ ಪಂಚಾಯಿತ್ ಸಿಸ್ಟಂ ಇರಬೇಕೆಂಬುದು ಟ್ಯಾಂಕ್ ಪಂಚಾಯಿತ್ ಆಕ್ಟಿನಲ್ಲೇ ವಿಧಾಯಕವಾಗಿದೆ. ಮೂಲದಲ್ಲಿ ನೋಡಿದರೆ ಹಳ್ಳಿಯ ಜನರು ಮತ್ತು ಪಂಚಾಯಿತಿಯವರು ಅದನ್ನು ಕೊಡಿ ಎಂದು ಕೇಳಿದರೆ ಸರ್ಕಾರ ವಿಧಾಯಕ ಮಾಡಬೇಕೆಂದು ಕರ್ತವ್ಯವನ್ನು ವಿಧಾಯಕ ಮಾಡಿದೆ, ಗ್ರಾಮಾಂತರಗಳಲ್ಲಿ ಕೆರೆಯ ಕೆಳಗಿರುವ ರೈತರು ಬೇಕೆಂದು ಅಭಿಪ್ರಾಯಪಟ್ಟರೆ ಆಗ ಸರ್ಕಾರದವರು ಟ್ಯಾಂಕ್ ಪಂಚಾಯಿತಿ ಮಾಡಬೇಕೆಂದು ವಿಧಾಯಕವಾಗಿದೆ. ಆಮೇಲೆ ಸಣ್ಣ ಪುಟ್ಟ ಕೈನಾಲೆಗಳ ಆಡಳಿತವನ್ನೆಲ್ಲಾ ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಸಾಮಾನ್ಯವಾಗಿ ಅನೇಕ ಸದಸ್ಯರು ಅನೇಕವೇಳೆ ಹೇಳಿದ್ದಾರೆ. ಆದರೆ ಇದು ಸಾಧ್ಯವೆ ಎಂದು ಸ್ವಲ್ಪ ಕೂಲಂಕಷವಾಗಿ ಪರಿಶೀಲಿಸಬೇಕಾದದ್ದು ಬಹಳ ಆವಶ್ಯಕ. ನಾಲೆಗಳ ಪೈಕಿ ಮೂರು ತರಹ ನಾಲೆಗಳಿವೆ. ಮೇನ್ ಅಂದರೆ ಮುಖ್ಯನಾಲೆ, ಡಿಸ್ಟ್ರಿಬ್ಯೂಟರೀಸ್ ಅಂದರೆ ಕೈನಾಲೆ, ಆಮೇಲೆ ಹಿಕ್ಕಲು—ಹೀಗೆ ಮೂರು ವಿಧವಿದೆ. ನಾಲೆಗಳು ಪ್ರಾರಂಭವಾಗುವಾಗ ಹಿಕ್ಕಲೂ ಆಗುತ್ತದೆ. ಸರ್ಕಾರದವರು ದೊಡ್ಡ ನಾಲೆ ನೋಡಿಕೊಳ್ಳಬೇಕು, ಒಂದೊಂದು ದೊಡ್ಡ ದೊಡ್ಡ ಕಾಂಗಾರಿಗಳಲ್ಲೂ ಡಿಸ್ಟ್ರಿಬ್ಯೂಟರಿ ನಾಲೆಗಳನ್ನು ಮೇಂಟೈನ್ ಮಾಡಬೇಕು ಮತ್ತು ಪ್ರತಿಯೊಬ್ಬನ ಗದ್ದೆಗೂ ಹೋಗುವ ಹಿಕ್ಕಲುಗಳನ್ನೆಲ್ಲಾ ಮೇಂಟೈನ್ ಮಾಡಬೇಕು ಎಂಬುದು ಸಾಧ್ಯವೇ ಇಲ್ಲವೆಂಬುದನ್ನು ತಾವು ಒಪ್ಪಿಕೊಳ್ಳಬೇಕು. ಆದ್ದರಿಂದ ಆ ವಿಷಯ ತಾವು ಒಪ್ಪಿಕೊಂಡಮೇಲೆ ಬಿಟ್ಟುಬಿಡೋಣ.

ಶ್ರೀ ಮೂಡಲಗಿರಿಗೌಡರು ಕೆರೆಕಾಂಗಾರಿ ಬಹಳ ತಡವಾಗುತ್ತಿದೆ, ಸರ್ಕಾರದವರು ರಿಟರ್ನ್ ನೋಡುವುದು ಅನಾವಶ್ಯಕ, ವ್ಯಾಪಾರ ದೃಷ್ಟಿಯಿಂದ ನೋಡಕೂಡದು ಎಂದು ಹೇಳಿದರು. ಇದೇ ಅಂಶವನ್ನು ಅನೇಕ ಸದಸ್ಯರು ವಾದಿಸಿದರು. ಈ ವಿಚಾರದಲ್ಲಿ ಒಂದಂಶವನ್ನು ಸಭೆಯ ಮುಂದಿಡುತ್ತೇನೆ. ಈ ಕೆಲಸ ಬಹಳ ಅಗಾಧವಾದುದು. ಈಗ ನಮ್ಮ ಮುಂದಿರುವ ಸಮಸ್ಯೆ ಏನೆಂದರೆ : ಸುಮಾರು 22,176 ಮೈನರ್ ಕೆರೆಗಳಿವೆ, 2,705 ಮೇಜರ್ ಕೆರೆಗಳಿವೆ. ಪೂರ್ವದಲ್ಲಿ ಜನರು ಉತ್ಸಾಹದಿಂದ ಕೆರೆಕಟ್ಟಿದರು. ಈಗ ಅವೆಲ್ಲವನ್ನೂ ಮೇಂಟೈನ್ ಮಾಡಿ ಜನರಿಗೆ ಸಹಾಯವನ್ನೊದಗಿಸುವುದು ನಮ್ಮ ಜವಾಬ್ದಾರಿಯಾಗಿದೆ. ಈ 22,176 ಕೆರೆಗಳನ್ನೂ ಜೀರ್ಣೋದ್ಧಾರಮಾಡಿ ಅದರಿಂದ ಜನರಿಗೆ ಅನುಕೂಲವನ್ನುಂಟುಮಾಡಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಜೊತೆಗೆ ಮೇಜರ್ ಕೆರೆಗಳಿವೆ. ಅವನ್ನು ಯಾವ ರೀತಿ ನೋಡಿಕೊಳ್ಳಬೇಕೆಂಬುದೇ ದೊಡ್ಡ ಸಮಸ್ಯೆಯಾಗಿದೆ. ಈಗ ನಮ್ಮ ಆಸೆ ಬಹಳ ವೇಗವಾಗಿ ಬೆಳೆಯುತ್ತಿದೆ. ಆದರೆ ಅದನ್ನು ಪೂರೈಸುವ ಶಕ್ತಿ ನಿರ್ದಿಷ್ಟವಾಗಿದೆ. ಇದನ್ನು ಒಪ್ಪಿ ಪರಿಶೀಲಿಸುವುದು ಅಸಾಧ್ಯವಾಗಿದೆ. ಈ 22,176 ಕೆರೆಗಳನ್ನೂ ಏಕಕಾಲದಲ್ಲಿ ಇಂಜನಿಯರುಗಳಿಂದ ಜೀರ್ಣೋದ್ಧಾರ ಮಾಡಿಸಬೇಕು, ರಿಪೇರಿ ಮಾಡಿಸಬೇಕು ಎಂದು ಯೋಚನೆ ಮಾಡಿದರೆ ಅದಕ್ಕೆ ಹಣದ ಶಕ್ತಿ ಎಷ್ಟು ಬೇಕು ಮತ್ತು ಸಿಬ್ಬಂದಿ ಶಕ್ತಿ ಎಷ್ಟು ಬೇಕು ಎಂಬುದನ್ನೆಲ್ಲಾ ನೋಡಿಕೊಂಡು ಕೆಲಸ ಮಾಡಬೇಕು. ಅದರ ಜೊತೆಗೆ ಯಾವಯಾವ ಕೆರೆಯಿಂದ ಎಷ್ಟು ಮಟ್ಟಿಗೆ ಪ್ರಯೋಜನವಾಗುತ್ತದೆಂಬುದನ್ನೂ ದೃಷ್ಟಿಯಲ್ಲಿಟ್ಟು ಮಾಡಬೇಕು. ಹಾಗೆ ಮಾಡುವಾಗ ಯಾವ ಕೆರೆ ಜೀರ್ಣೋದ್ಧಾರ ಮಾಡುವುದರಿಂದ ಹೆಚ್ಚಿನ ಸಹಾಯವಾಗುತ್ತದೆಂದು ವಿಚಾರಮಾಡಿ ಅದಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲ.

ಆದುದರಿಂದ ಈ ಒಂದು ವಿಷಯವನ್ನು ನಾನ ಒಪ್ಪಿಕೊಳ್ಳುತ್ತೇನೆ. ಆದರೆ ಯಾವ ಯಾವ ಕೆರೆಗಳನ್ನು ಮೊದಲು ಕೈಗೊಂಡರೆ ಕಡಮೆ ವೆಚ್ಚದಲ್ಲಿ ದೇಶಕ್ಕೆ ಹೆಚ್ಚು ಪ್ರಯೋಜನ ಲಭಿಸುತ್ತದೋ ಅಂಥ ಕೆರೆಗಳನ್ನು ಮೊದಲು ಜೀರ್ಣೋದ್ಧಾರ ಮಾಡತಕ್ಕದ್ದು ಉಚಿತವಾದದ್ದು ಎಂದು ಹೇಳಿದರೆ ಅದನ್ನು ತಾವೆಲ್ಲರೂ ಒಪ್ಪಿಕೊಳ್ಳುತ್ತೀರಿ ಎಂದು ನಾನು ನಂಬಿದ್ದೇನೆ. ಈ ವಿಚಾರಗಳ ಬಗ್ಗೆ ಒಂದು ಸಮಿತಿಯನ್ನೂ ಕೂಡ ಮಾಡಲಾಗಿತ್ತು. ಅವರು ದೇಶದಲ್ಲಿ ರಿಪೇರಿಯಾಗತಕ್ಕಂಥ ಕೆರೆಗಳ ಸಂಖ್ಯೆ ಎಷ್ಟಿದೆ ಆ ಕಾರ್ಯಗಳನ್ನು ಕೈಗೊಂಡರೆ ಅಲ್ಲಿ ಏನು ನೀರು ಸರದಿ ಹಾಕಬೇಕು, ಆ ಬಗ್ಗೆ ಸರ್ಕಾರದ ಭಾಗ ಎಷ್ಟು ರೈತರ ಭಾಗ ಎಷ್ಟು ಇರಬೇಕೆಂಬುದನ್ನು ತಿಳಿಸಿದ್ದಾರೆ. ನಾವು ಈಗ ಅದರ ಪ್ರಕಾರವೇ ಕೆಲಸ ನಡೆಸುತ್ತಿದ್ದೇವೆ. ಆದರೆ ಶ್ರೀ ನಾಗಪ್ಪಶೆಟ್ಟರು ಆ ನಿಯಮಗಳನ್ನು ಅಷ್ಟು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿಲ್ಲವೆಂದು ವಾದ ಮಾಡಿದರು. ಆದರೆ ಆ ಸಮಿತಿಯವರ ಶಿಫಾರ್ಸುಗಳನ್ನು ಬಿಟ್ಟು ಬಿಟ್ಟು ಕೆಲಸ ಮಾಡಬಹುದೆಂದು ಈ ಮಾನ್ಯ ಸಭೆಯು ತೀರ್ಮಾನ ಮಾಡುವ ಪಕ್ಷಕ್ಕೆ ನಾವು ಅದಕ್ಕೂ ಸಿದ್ಧರಾಗಿದ್ದೇವೆ. ಆದರೆ ಈಗ ಕೈಗೊಳ್ಳಬೇಕೆಂದಿರುವ ಸ್ಕೀಮುಗಳಲ್ಲಿ ಯಾವಯಾವವುಗಳಿಗೆ ಐವತ್ತು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಅಂದಾಜು ಆಗಿರುತ್ತವೆಯೋ ಅಂಥವುಗಳಿಂದ ಶೇಕಡಾ ಮೂರರಹಾಗೆ ಉತ್ಪತ್ತಿ ಬರಬೇಕೆಂದೂ, ಇನ್ನು ಈ ಐವತ್ತು ಸಾವಿರ ರೂಪಾಯಿಗಳಿಗೆ ಕಡಮೆ ಅಂದಾಜಾಗಿರತಕ್ಕ ಯೋಜನೆಗಳ ಬಗ್ಗೆ ಕೊನೆಯ ಪಕ್ಷ ಶೇಕಡ ಎರಡಷ್ಟಾದರೂ ಉತ್ಪತ್ತಿ ಬರಲೇಬೇಕೆಂದ ತೀರ್ಮಾನ ಮಾಡಲಾಗಿದೆ. ಆ ಸಮಿತಿಯವರ ಶಿಫಾರ್ಸು ಪ್ರಕಾರ ಐವತ್ತು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಕೆಲಸಗಳಲ್ಲಿ ಈ ಕಾಂಟ್ರಿಬ್ಯೂಷನ್ ಮೊಬಲಗಿನ ಪರಮಾವಧಿ ಆರುನೂರು ರೂಪಾಯಿಗಳಿರಬೇಕೆಂದೂ ಕನಿಷ್ಠ ಪರಿಮಿತಿ ಮುನ್ನೂರು ರೂಪಾಯಿಗಳೆಂದೂ ಐವತ್ತು ಸಾವಿರಕ್ಕೆ ಕೆಳಪಟ್ಟ ಕಾಂಗಾರಿಗಳ ಬಗ್ಗೆ ಈ ಕಂಟ್ರಿಬ್ಯೂಷನ್ ಮೊಬಲಗಿನ ಮ್ಯಾಗ್ಸಿಮಂ ಮುನ್ನೂರು ರೂಪಾಯಿಗಳು, ಮಿನಿಮಂ ಎಪ್ಪತ್ತೈದು ರೂಪಾಯಿಗಳೆಂದೂ ತಿಳಿಸಲಾಗಿದೆ. ಎರಡುಸಾವಿರದ ಐನೂರು ರೂಪಾಯಿಗಳ ಕೆಳಪಟ್ಟ ಕೆಲಸಗಳಲ್ಲಿ ಯಾವ ಕಂಟ್ರಿಬ್ಯೂಷನನ್ನೂ ತೆಗೆದುಕೊಳ್ಳಬೇಕಾಗಿಲ್ಲವೆಂದು ಶಿಫಾರ್ಸು ಮಾಡಿದ್ದಾರೆ. ನೀರು ಸರದಿ ವಿಚಾರದಲ್ಲಿ ಮ್ಯಾಗ್ಸಿಮಂ ಮೂವತ್ತು ರೂಪಾಯಿಗಳೆಂದೂ, ಮಿನಿಮಂ ಹತ್ತು ರೂಪಾಯಿಗಳೆಂದೂ ನಿಗದಿಯಾಗಿದೆ. ಈಗ ಸರ್ಕಾರದವರು ಆ ಶಿಫಾರ್ಸುಗಳನ್ನೆಲ್ಲಾ ಪರಿಶೀಲನೆ ಮಾಡುತ್ತಿದ್ದಾರೆ. ಈ ದಿವಸ ಅವರು ಹೇಳಿರತಕ್ಕ ಶಿಫಾರ್ಸುಗಳನ್ನು ಸರ್ಕಾರ ಒಪ್ಪಿಕೊಳ್ಳುವ ಪಕ್ಷಕ್ಕೆ ಶೇಕಡ ಎರಡಷ್ಟಕ್ಕಿಂತಲೂ ಕಡಮೆ ಉತ್ಪತ್ತಿ ಬರತಕ್ಕಂಥ ಕೆರೆಗಳ ಕಾಮಗಾರಿಗಳನ್ನೆಲ್ಲಾ

ನಾವು ಕೈಗೊಳ್ಳಬೇಕಾಗುತ್ತದೆ. ಇನ್ನು ಇದರ ಜೊತೆಗೆ ಆ ಕುಗ್ರಾಮವುವಿರತಕ್ಕಂಥ ಪ್ರದೇಶಗಳಲ್ಲಿ ಕೆರೆಗಳ ಕೆಲಸವನ್ನು ಬೇರೆ ಕೈಗೊಳ್ಳಬೇಕಾಗಿರುತ್ತದೆ. ಈಗ ತಾವು ಹೇಳಿರತಕ್ಕಂಥ ಉತ್ತಮ ಸಲಹೆಗಳನ್ನೆಲ್ಲಾ ಸರ್ಕಾರದವರು ತಮ್ಮ ಗಮನದಲ್ಲಿಟ್ಟುಕೊಂಡು ಸಾಧ್ಯವಾದವ`ಟ್ಟಿಗೂ ಅವುಗಳಿಗೆ ಬೆಂಬಲ ನೀಡಲು ಪ್ರಯತ್ನಪಡುತ್ತಾರೆಂದು ಭರವಸೆಯನ್ನು ತಮಗೆಲ್ಲಾ ನಾನು ಈ ಸಂದರ್ಭದಲ್ಲಿ ಕೊಡಬಲ್ಲೆನು. ಇನ್ನು ಅನೇಕ ಮಾನ್ಯ ಸದಸ್ಯರು ಈ ರೆಸ್ಟೋರೇಷನ್ ಕೆಲಸ ಕಾರ್ಯಗಳು ಬಹಳ ನಿಧಾನವಾಗುತ್ತಿವೆ ಎಂದು ಟೀಕೆ ಮಾಡಿದ್ದಾರೆ. ನಿಜ. ಈ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ನಾವೂ ಕೂಡ ಒಪ್ಪಿಕೊಳ್ಳಲೇ ಬೇಕಾಗಿದೆ. ಹೀಗೆ ನಿಧಾನವಾಗುವುದಕ್ಕೆ ಕೆಲವು ಕಡೆ ಒಳ್ಳೆಕಾರಣಗಳಿದ್ದು ಅಂಥ ಸಂದರ್ಭಗಳಲ್ಲಿ ನಿಧಾನವಾಗಿದ್ದರೆ ಅವುಗಳ ಬಗ್ಗೆ ಮಾಡತಕ್ಕ ಟೀಕೆ, ಟೀಕೆಯಾಗುವುದಿಲ್ಲ. ಆದರೆ ಎಲ್ಲಿ ಆಗಬೇಕಾದ ಕೆಲಸಗಳು ಯಾವ ಅಡ್ಡಿ ಅಡಚಣೆಗಳಿಲ್ಲದಿದ್ದರೂ, ವಿನಾಕಾರಣ ನಿಧಾನವಾಗಿದ್ದರೆ ಆಗ ತಮ್ಮ ಟೀಕೆಗಳು ಸಕಾರಣವಾಗಿರುತ್ತವೆ. ಆದರೆ ಅಂಥ ಟೀಕೆಗಳಿಗೆ ಅಷ್ಟಾಗಿ ಅವಕಾಶವಿಲ್ಲ. ಏನೋ ಅಪ್ಪಿ ತಪ್ಪಿ ಅಂಥ ಸಂದರ್ಭಗಳು ಒಂದೆರಡಿರಬಹುದು. ಆದಾಗ್ಯೂ ಅದಕ್ಕೆ ಅವಕಾಶ ಕೊಡದಂತೆ ಕೆಲಸ ನಡೆಸಬೇಕಾದದ್ದು ಸರ್ಕಾರದವರ ಕರ್ತವ್ಯ. ನಾವು ಸಾಧ್ಯವಾದ ಮಟ್ಟಿಗೂ ನಮ್ಮ ಜವಾಬ್ದಾರಿಯನ್ನು ಟೀಕೆಗಳಿಗೆ ಅವಕಾಶ ಕೊಡದಂತೆ ನಿರ್ವಹಿಸಿಕೊಂಡು ಬರಬೇಕೆಂಬ ಆಶೆ ಆಕಾಂಕ್ಷೆಗಳು ನಿಮಗಿರುವಂತೆ ನಮಗೂ ಇರುತ್ತವೆ. ಆದರೆ ತಾವು ಈ ರೀತಿ ಚರ್ಚೆ ನಡೆಸಬೇಕಾದದ್ದು ಅವಶ್ಯಕ. ಆದರೆ ನಮ್ಮ ಇಲಾಖಾ ಅಧಿಕಾರಿಗಳು ಎಲ್ಲ ಕಾಲಗಳಲ್ಲೂ, ಎಲ್ಲಾ ಕಾರ್ಯಗಳನ್ನೂ ಸರ್ವ ಸಮರ್ಪಕವಾಗಿರುವಂತೆ ಮಾಡಬೇಕೆಂದರೆ ಬಹಳ ಕಷ್ಟವಿದೆ. ಈ ಪ್ರಾಜೆಕ್ಟುಗಳ ವಿಚಾರದಲ್ಲಿ ನಮ್ಮ ಇಂಜಿನಿಯರ್ ಅವರಿಗೆ ಅನೇಕ ಸಂದರ್ಭಗಳಲ್ಲಿ ತಪ್ಪು ಅಭಿಪ್ರಾಯಗಳು ಬಂದುಬಿಡುತ್ತವೆ. ಆದಕಾರಣ ಅವರು ಈ ಕಾರ್ಯಗಳನ್ನು ಆತುರ ಆತುರವಾಗಿ ನಡೆಸಲು ಸಾಧ್ಯವಿಲ್ಲ. ಹಾಗೆ ಈ ಪ್ರಾಜೆಕ್ಟುಗಳ ವಿಚಾರದಲ್ಲಿ ಆತುರದಿಂದ ವರ್ತಿಸಿದರೆ ನಮ್ಮ ದೇಶದ ಹಣ ನಷ್ಟವಾಗುವುದಕ್ಕೆ ಅವಕಾಶವಾಗಬಹುದು. ಆದಕಾರಣ ಈ ನೀರಾವರಿ ಕಾಮಗಾರಿಗಳ ಬಗ್ಗೆ ಕೊಂಚ ನಿಧಾನವಾಗಿ ಆದರೂ ಅದನ್ನು ತಾವು ಗಮನಿಸಬಾರದು. ಇದು ದೇಶದ ಹಿತದೃಷ್ಟಿಯಿಂದ ಮಾಡತಕ್ಕದ್ದೇ ಶಿವಾಯಿ ಅನ್ಯಥಾ ದುರುದ್ದೇಶದಿಂದ ಅಲ್ಲ ಎಂಬುದಾಗಿ ಹೇಳಿದರೆ ಈ ಅಂಶವನ್ನು ಮಾನ್ಯ ಸದಸ್ಯರೆಲ್ಲರೂ ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಇನ್ನು ಈ ಕೆರೆಗಳ ಸಣ್ಣ ಪುಟ್ಟ ಕಾಂಗಾರಿಗಳು ಎಂದರೆ ಈ ಕೋಡಿ ಎತ್ತರಿಸುವುದು, ತೂಬುಗಳ ರಿಪೇರಿ ಇತ್ಯಾದಿಗಳ ಬಗ್ಗೆ ಬೇರೆ ಬೇರೆ ಅಂದಾಜು ಮಾಡಿ ಅವುಗಳನ್ನು ಪುನಃ ರಿವೈಜ್ ಮಾಡತಕ್ಕದ್ದು ಸರಿಯಲ್ಲ ಎಂದು ಹೇಳಿದರು. ಹೀಗೊಂದು ವೇಳೆ ನಾನು ಹೇಳಲ, ತಾವು ಹೇಳಲ, ಯಾರು ಹೇಳಿದರೂ ಸರಿಯೇ, ನನ್ನ ಮುಂದೆ ಅನೇಕ ದೃಷ್ಟಾಂತಗಳಿವೆ, ಆತುರ ಆತುರವಾಗಿ ಪ್ರಾಜೆಕ್ಟುಗಳನ್ನು ತಯಾರುಮಾಡಿ, ಹಣ ಖರ್ಚುಮಾಡಿ ಅಪ್ರಯೋಜಕವಾಗಿರುವುದು ಅಥವಾ ನಿರೀಕ್ಷಿಸಿದಷ್ಟು ಪ್ರಯೋಜನವಾಗದೆ ಇರುವ ನಿದರ್ಶನಗಳು ಅನೇಕವಿವೆ. ಆದ್ದರಿಂದ ಈ ವಿಷಯದಲ್ಲಿ ಸಾಧ್ಯವಾದ ಮಟ್ಟಿಗೂ ಎಲ್ಲೆಲ್ಲಿ ಕಮ್ಮಿಮಾಡಬಹುದು, ಯಾವಯಾವ ರೀತಿ ಕಮ್ಮಿಮಾಡಬಹುದು ಎಂಬುದನ್ನು ಯೋಚನೆ ಮಾಡಿ, ಮಾನ್ಯ ಸದಸ್ಯರು ಬಹಳ ಬೇಗ, ಬಹಳ ಯಶಸ್ವಿಯಾಗಿ, ದಕ್ಷತೆಯಿಂದ ನಡೆಯಬೇಕೆಂಬ ವಿಷಯದಲ್ಲಿ ಏನೇನು ಸಲಹೆ ಮಾಡಿದ್ದಾರೆಯೋ ಅವುಗಳನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಈ ಪ್ರಾಜೆಕ್ಟುಗಳನ್ನು ಆದಷ್ಟು ಕಡಮ್ಮೆ ಕಾಲದಲ್ಲಿ ಸಮಗ್ರ ದೃಷ್ಟಿಯನ್ನಿಟ್ಟುಕೊಂಡು ರಿವೈಸ್ಡ್ ಪ್ರಪೋಸಲ್ಲು, ಎಸ್ಟಿಮೇಟ್ಸು ಬರದಂತೆ ಮಾಡಿಕಳುಹಿಸಬೇಕೆಂದು ಅಧಿಕಾರಿಗಳಿಗೆ ಆಜ್ಞೆ ಮಾಡುತ್ತೇವೆ. ಅಷ್ಟೇ ಅಲ್ಲ. ಈ ಆಜ್ಞೆಯನ್ನು ಸರಿಯಾಗಿ ಜಾರಿಗೆ ತರುವ ರೀತಿಯಲ್ಲಿ ವ್ಯವಸ್ಥೆ ಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇವೆ ಎಂದು ತಮಗೆ ಭರವಸೆ ಕೊಡುತ್ತೇನೆ.

ಶ್ರೀ ವೀರಣ್ಣಗೌಡರು ಶಿಂಷಾ ಹತ್ತಿರ ಕೆಲವು ಕುಗ್ರಾಮಗಳಿವೆ, ಅವಕ್ಕೆ ನೀರಾವರಿ ಏರ್ಪಾಡು ಮಾಡಬೇಕೆಂದು ಹೇಳಿದರು. ಶಿಂಷಾ ನದಿಗೆ ಅಣೆಕಟ್ಟು ಕಟ್ಟುವುದಕ್ಕೆ ಏನಾದರೂ ಪ್ರಯತ್ನ ಪಟ್ಟರೆ ತಕ್ಷಣ ಜನರು ತಕರಾರು ಹಾಕುತ್ತಾರೆ. ಶಿಂಷಾವ್ಯಾಲಿ ಏನಿದೆ ಅದರಲ್ಲಿರತಕ್ಕ ನೀರನ್ನು ಸಂಪೂರ್ಣವಾಗಿ ದೇಶದ ಪ್ರಯೋಜನಕ್ಕೆ ಉಪಯೋಗಿಸಬೇಕೆಂಬ ವಿಷಯದಲ್ಲಿ ಸರ್ಕಾರ ಆತುರವಾಗಿದೆ. ಇದರಲ್ಲಿ ಏನಾಗಿದೆ ಎಂದರೆ ನಾವು ಅಣೆಕಟ್ಟುಹಾಕಿ, ಕೆಲಸ ಮಾಡಿ ನೀರಾವರಿ ಸೌಕರ್ಯ ಮಾಡಿಕೊಡಬೇಕೆಂದರೆ ಜನರ ತಕರಾರು ವಿಶೇಷವಾಗಿದೆ. ಏಕೆಂದರೆ ಮುಳುಗಡೆ ಪ್ರದೇಶ ವಿಪರೀತವಾಗಿ ಬರುತ್ತದೆ. ಇವೆಲ್ಲಕ್ಕಿಂತಲೂ ಹೆಚ್ಚಾಗಿ ಒಂದುವೇಳೆ ಇಂಥ ಯೋಜನೆಯಿಂದ, ವಿದ್ಯುಚ್ಛಕ್ತಿ ಉತ್ಪನ್ನವಾಗಿ ಆ ಮೂಲಕ ಜನಗಳಿಗೆ ಆಗತಕ್ಕ ಅನುಕೂಲ ಹೆಚ್ಚಾದ ಪಕ್ಷದಲ್ಲಿ ಸರ್ಕಾರದವರು ಅಂಥ ಸಲಹೆಗಳನ್ನು ಅಂಗೀಕಾರ ಮಾಡುವುದರಲ್ಲಿ ಅಭ್ಯಂತರವೇನೂ ಇಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ನಾನು ಹೇಳಿದ್ದು ಶಿಂಷಾ ನದಿಯ ಪೂರ್ವಭಾಗದಲ್ಲಿ ಕೆಲವು ಕೆರೆಗಳನ್ನು ದುರಸ್ತು ಮಾಡಿಸಬೇಕು, ಅದು ಆಗದೇ ಜನರು ಬಹಳ ಕಷ್ಟಪಡು ್ತದ್ದಾರೆ ಎಂದು. ಅಷ್ಟೇ ಹೊರತು ಮುಳುಗಡೆಗೆ ಬರುವುದೇನೂ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಶಿಂಷಾದ ಪೂರ್ವಭಾಗದಲ್ಲಿರುವ ಕೆರೆಗಳನ್ನು ದುರಸ್ತು ಮಾಡಬೇಕೆಂದು ಹೇಳಿದ್ದಾರೆ. ಆ ಬಗ್ಗೆ ನನ್ನ ಮುಂದೆ ವಿವರ ಇಲ್ಲ. ಅದನ್ನು ಪರಿಶೀಲನೆ ಮಾಡಿ ಸಾಧ್ಯಾಸಾಧ್ಯತೆಯನ್ನು ತಕ್ಷಣದಲ್ಲೇ ತಿಳಿಸುತ್ತೇನೆ. ಸಾಧ್ಯವಾದರೆ ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಮನಸ್ಸಿದ್ದರೆ ಮಾರ್ಗ ಇದ್ದೇ ಇದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮನಸ್ಸಿದ್ದರೂ ಕೆಲವು ವೇಳೆ ಮಾರ್ಗ ಇರುವುದಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ಅದನ್ನು ನಾವು ಒಪ್ಪುವುದೇ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಶ್ರೀ ಲಕ್ಕಪ್ಪನವರು ಹೇಮಾವತಿ ಅಣೆಕಟ್ಟಿನ ವಿಷಯದಲ್ಲಿ ಪ್ರಸ್ತಾಪಿಸಿ, ಏಕೆ ಅದನ್ನು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಲ್ಲ ಎಂದು ಪ್ರಶ್ನಿಸಿದರು. ಹೇಮಾವತಿ ಪ್ರಾಜೆಕ್ಟಿನಿಂದ ಮೂವತ್ತೈದು ಸಾವಿರ ಎಕರೆಯಷ್ಟು ಸಾಗುವಳಿಗೆ ಬರುತ್ತಿತ್ತು. ಎರಡು ಮೂರು ಕಾರಣಗಳಿಂದ ಇದನ್ನು ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಿಕ್ಕೆ ಸಾಧ್ಯವಾಗಲಲ್ಲ. ಒಂದನೆಯದು ಪ್ಲಾನ್-ಟಾರ್ಜೆಟ್ 252ರಿಂದ 185 ಆಯಿತು, 185 ರಿಂದ 78ಕ್ಕೆ ಇಳಿಸಿದ್ದೇವೆ. ಜೊತೆಗೆ ಈ ಪ್ರಾಜೆಕ್ಟಿನ ವಿಷಯದಲ್ಲಿ ಸ್ಥಳೀಯ ಜನರಿಂದ ವಿರೋಧವೂ ಕೂಡ ಬಂದಿತ್ತು. ಅಂದಾಕ್ಷಣಕ್ಕೇ ವಿರೋಧದ ಕಾರಣದಿಂದಲೇ ನಿಲ್ಲಿಸಿದೆವು ಎಂದು ತಿಳಿಯಬಾರದು.

(ಶ್ರೀ ಎಚ್. ಎಂ. ಚನ್ನಬಸಪ್ಪ).

ಪ್ಲಾನಿಂಗ್ ಕಮೀಷನ್ ಅವರ ಸಹಾನುಭೂತಿ ದೊರಕದೆ ಇದ್ದುದರಿಂದ ತೆಗೆದುಹಾಕಬೇಕಾಗಿ ಬಂತು. ಇದನ್ನು ಯಾವ ರೀತಿ ಮಾಡಬೇಕೆಂಬ ವಿಷಯ ಪರ್ಯಾಲೋಚನೆಯಲ್ಲಿದೆ. ಮೈನರ್ ಕೆರೆಗಳಿಗೆ ಹಣವನ್ನು ಬಹಳ ಕಡಮೆ ಒದಗಿಸಿದ್ದಾರೆಂಧು ಶ್ರೀ ದೇವರಾಜ ಅರಸ್ ರವರು ಹೇಳಿದರು. ಇದು ಸರಿಯಲ್ಲ. ಅವರು, ಈ ಅಂಶವನ್ನು ಒತ್ತಾಯವಾಗಿ ಹೇಳುತ್ತಾ ಎಣ್ಣೆ ಹಾಕಿಕೊಂಡು ಈ ಬಡ್ಜೆಟ್ಟನ್ನು ಹುಡುಕಿದರೂ ಸಿಕ್ಕಲಲ್ಲವೆಂದು ಹೇಳಿದರು. ದಯವಿಟ್ಟು ಮಾನ್ಯ ಸದಸ್ಯರು (2)ನೆಯ ವಾಲ್ಯೂಮಿನ ಆರನೆಯ ಪುಟವನ್ನು ನೋಡಲಿ, ಅಲ್ಲಿ ಹೇಳಿದೆ : Construction and restoration of minor tanks Rs. 25,00,000 ಎಂದು ಹೇಳಿದೆ.

ಶ್ರೀ ಡಿ. ದೇವರಾಜ ಅರಸ್.—ನಾನು ಹೇಳಿದ್ದು ಅದಲ್ಲ. ಅಲ್ಲಿ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ತೋರಿಸಿರುವುದನ್ನು ನಾನೂ ನೋಡಿದ್ದೇನೆ. ಹಿಂದಿನ ಸಾಲಿನಲ್ಲಿ ಇದೇ headನಲ್ಲಿ ತಾವು ಒದಗಿಸಿದ್ದ ಹಣಕ್ಕಿಂತಲೂ ಇದು ಕಡಮೆಯೆಂದು ನಾನು ಹೇಳಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಹೇಳಿದ್ದನ್ನು ನಾನಿಲ್ಲಿ ಗುರುತು ಹಚ್ಚಿಕೊಂಡಿದ್ದೇನೆ. Under development schemes we have provided Rs. 25 lakhs for minor tanks. That is a point which you cannot dispute.

ಶ್ರೀ ಡಿ. ದೇವರಾಜ ಅರಸ್.—ಹದಿನಾರು ಲಕ್ಷ ರೂಪಾಯಿಗಳನ್ನು ತಾವು provide ಮಾಡಿರುವುದು ಬೇರೊಂದು headನಲ್ಲಿ.

Sri H. M. CHANNABASAPPA.—Last year also this amount was provided. 1951-52 ರಲ್ಲಿ 12 ಲಕ್ಷ ಚಿಲ್ಲರೆ, 1952-53 ರಲ್ಲಿ 15 ಲಕ್ಷ ಚಿಲ್ಲರೆ, 1953-54 ರಲ್ಲಿ 17 ಲಕ್ಷ ಚಿಲ್ಲರೆ, 1954-55 ರಲ್ಲಿ 21 ಲಕ್ಷದ 45 ಸಾವಿರ—ಈ ರೀತಿಯಾಗಿ ಹೆಚ್ಚು ಹೆಚ್ಚಿಗೆ ವರ್ಷ ವರ್ಷವೂ ಕೊಡುತ್ತಾ ಇರುವುದನ್ನು ನೋಡಿದರೆ, ಸಣ್ಣ ಪುಟ್ಟ ಕೆರೆಗಳನ್ನು ದುರಸ್ತು ಮಾಡುವುದರಲ್ಲಿ ತಮಗೆಷ್ಟು ಆಸಕ್ತಿಯಿದೆಯೋ ಅಷ್ಟೇ ನಮಗಿದೆಯೆಂದು ಗೊತ್ತಾಗುತ್ತದೆ. ಇನ್ನೂ ಹೆಚ್ಚಿಗೆ ಏಕೆ ಕೊಡಲಿಲ್ಲವೆಂದು ಮಾನ್ಯ ಸದಸ್ಯರು ಕೇಳಿದರು. 21 ಲಕ್ಷ ರೂಪಾಯಿಗಳಿರುವುದನ್ನು 2½ ಕೋಟಿ ರೂಪಾಯಿಗಳಿಗೆ ಬೇಕಾದರೂ ಹಣ ಸಿಕ್ಕಿದರೆ ಏರಿಸುವುದಕ್ಕೆ ಸಿದ್ಧನಾಗಿದ್ದೇನೆ. ಹಣವನ್ನೊದಗಿಸುವುದು ಒಂದು ಕೆಲಸ ; ಅದನ್ನು ವಿನಿಯೋಗ ಮಾಡುವುದು ಎರಡನೆಯದು ; ಅದಕ್ಕೆ ತಕ್ಕಂಥ ಸಿಬ್ಬಂದಿಯಿರುವುದು ಮೂರನೆಯದು. ಇವಿಷ್ಟನ್ನೂ ನೋಡಿಕೊಂಡು ಈಗ ಹಣವನ್ನೊದಗಿಸಿದೆ ಯೆಂದು ಹೇಳುತ್ತೇನೆ. ಶ್ರೀ ಹುಚ್ಚೇಗೌಡರು ಹಿತ್ತಲಕೊಪ್ಪ ಕೆರೆಯ ವಿಷಯದಲ್ಲಿ ಆಕ್ಷೇಪಣೆ ಮಾಡಿದರು. ಏಪ್ರಿಲ್ ಒಂದನೇ ತಾರೀಖು 1946ರಲ್ಲಿ ಅದು ಮಂಜೂರಾಯಿತು. ಅದರ ಅಚ್ಚುಕಟ್ಟು 48 ಎಕರೆಗಳಷ್ಟು ಮಾತ್ರ ಇದೆ. ಅದಕ್ಕೆ ಎಸ್ಟಿಮೇಟು 38,000ವೆಂದಿದ್ದು ಕಂಟ್ರಾಕ್ಟರು ಕೆಲಸವನ್ನು ಷುರುಮಾಡಿ ಅರ್ಧದಲ್ಲೇ ಕೈಬಿಟ್ಟರು. ಆಮೇಲೆ ಪೀಸ್ ವರ್ಕ್ಸ್‌ಮೇಲೆ ಆ ಕೆಲಸವನ್ನು ಕೊಟ್ಟಿದ್ದಾಯಿತು. ಕೊನೆಗೆ ಅದೂ ಕೈಬಿಡಲ್ಪಟ್ಟು, ಆ ಕೆಲಸವನ್ನು ಬಿಟ್ಟುಬಿಡಬೇಕೆಂದು ಹೇಳಿ ಡಿಸೆಂಬರ್ 15ನೇ ತಾರೀಖು 1946ರಲ್ಲಿ ಆಜ್ಞೆಯಾಯಿತು. ಅದುವರೆಗೆ ಆಗಿದ್ದ ಖರ್ಚು 9,700 ರೂಪಾಯಿಗಳು. ಈಗ 1954ನೆಯ ಇಸವಿಯಲ್ಲಿ ಪರಿಸ್ಥಿತಿಗಳು ಉತ್ತಮವಾಗಿವೆ, ಈ ಕೆಲಸವನ್ನು ಮಾಡಿಸಿ ಎಂದು ಹೇಳಿದರೂ ಆತುರದಲ್ಲಿ ಮಾಡಬೇಕೆಂದು ಸರ್ಕಾರದವರೂ ಹೇಳಿರಬಹುದು. ಆದರೆ ಅದನ್ನು ಎಸ್ಟಿಮೇಟ್ ಮಾಡಿಸಿದ್ದರಲ್ಲಿ ಒಂದು ಎಕರೆಗೆ 1,187 ರೂಪಾಯಿ ಖರ್ಚು ಬೀಳುತ್ತದೆಂದು ಗೊತ್ತಾಯಿತು. ಬಹುಶಃ ಅಲ್ಲಿರತಕ್ಕ ಜಮೀನುಗಳಿಗೇ ಅಷ್ಟು ಬೆಲೆಯಿದೆಯೋ ಇಲ್ಲವೋ ಗೊತ್ತಿಲ್ಲ. ಈ ಕಾರಣದಿಂದಾಗಿ ಅದು ನಿಂತಿದೆ.

ಶ್ರೀ ಬಿ. ಹುಚ್ಚೇಗೌಡ.—ಮೊದಲೇ ಅದನ್ನೇಕೆ ಯೋಚನೆಮಾಡಲಿಲ್ಲ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದೆಲ್ಲಾ ಹೇಗೆ ಸಾಧ್ಯ ? ತಾವು ಹೆಕ್ಕತ್ತಿನಮೇಲೆ ಕುಳಿತಿರುತ್ತೀರಿ. ಇದನ್ನೆಲ್ಲಾ ಪರಿಶೀಲಿಸುವುದಕ್ಕೆ ಕನಿಷ್ಠ ಪ್ರಮಾಣದ ಕಾಲವನ್ನೂ ಕೊಡುವುದಕ್ಕೆ ತಾವು ಸಿದ್ಧರಾಗಿರುವುದಿಲ್ಲ. ಅನಾವಶ್ಯಕವಾಗಿ ಒತ್ತಾಯಮಾಡಿದರೆ ಆ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಲೇ ಬೇಕಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಅರ್ಧ ಖರ್ಚುಮಾಡಿ ಕೈ ಬಿಟ್ಟರೆ ಗತಿ ಏನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಏಳು ಸಾವಿರ, ಒಂಬತ್ತು ಸಾವಿರ ಹೋದರೆ ಹೋಗಲಿ. ಇನ್ನು 40 ಸಾವಿರ ಹೋದರೆ ಅಪ್ರಯೋಜಕವಾಗುವ ಪಕ್ಷದಲ್ಲಿ ಏಳು ಸಾವಿರಕ್ಕೆ ನಿಲ್ಲಿಸೋಣ ಎಂದಿದ್ದೇವೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಅದನ್ನು revive ಮಾಡಿದರೆ ಏಳು ಸಾವಿರ ಲೆಖ್ಖಕ್ಕೆ ಬರುವುದಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಹೋಗಿಬಿಟ್ಟಿತು. K.R. ಸಾಗರ ಕೆಳಗೆ ಬಹಳ ಕಡಮೆ ಉತ್ಪತ್ತಿ ಬರುತ್ತದೆ, ಅದಕ್ಕೆ ತಕ್ಕ water rate ಹಾಕಿಲ್ಲ, ಬಾಕೀ ಕಡೆ ಹೆಚ್ಚಾಗಿ ಹಾಕಿದೆ. ನನ್ನ ಉತ್ತರದಲ್ಲಿ ಎಷ್ಟು ಉತ್ಪತ್ತಿ ಬರುತ್ತದೆ, ತಿಳಿಸಬೇಕು ಎಂದು ಹೇಳಿದರು. ವಿದ್ಯುಚ್ಛಕ್ತಿಗೆ ವಿಶೇಷವಾಗಿ ನೀರು ಸರಬರಾಯಿ ಮಾಡುವುದು ಸೇರಿ ಶೇಕಡ 5·26 ಉತ್ಪತ್ತಿ ಬರುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಮೊದಲು ಅಂದಾಜು ಮಾಡಿದಾಗ ಶೇಕಡ 4ಕ್ಕಿಂತ ಹೆಚ್ಚಾಗಿ ಬೇಕಿಲ್ಲ ಎಂದು ಮಾಡಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರಾವರಿ ಮಾತ್ರ ತೆಗೆದುಕೊಂಡು ಎಷ್ಟು ಖರ್ಚುಮಾಡಿದ್ದೇವೆ ಎಂದು ಲೆಖ್ಖ ಹಾಕಿದರೆ ಶೇಕಡ ·15 ಉತ್ಪತ್ತಿ ಬರುತ್ತದೆ. 483 ಲಕ್ಷ ರೂಪಾಯಿಗಳು ನೀರಾವರಿಗೆ ಸಂಬಂಧಪಟ್ಟದ್ದು. ಇದರ ಬಗ್ಗೆ ಶ್ರೀ ದೇವರಾಜ್ ಅರಸ್‌ರವರು ಕೆಲವು ಅಂಕಿ ಅಂಶಗಳನ್ನು ಕೊಟ್ಟರು. 1954-55ನೇ ಸಾಲಿನಲ್ಲಿ ಇದರ ಬಗ್ಗೆ 8,81,150 ರೂಪಾಯಿಗಳು ಉತ್ಪತ್ತಿ, 9,61,742 ರೂಪಾಯಿಗಳು ವೆಚ್ಚ. ಖರ್ಚು ಉತ್ಪತ್ತಿಗಿಂತ ಹೆಚ್ಚಾಗಿದೆ ಎಂದು ಹೇಳಿದರು. Maintenance of the Channels and Maintenance of the Reservoirs—ಇವೆಲ್ಲವನ್ನೂ ಒಟ್ಟಾಗಿ ತೆಗೆದುಕೊಂಡರೆ, ಉತ್ಪತ್ತಿ ತೆಗೆದುಕೊಂಡು ಲೆಖ್ಖ ಹಾಕಿದರೆ 15 ಬರುತ್ತದೆ ಎಂದು ಇಟ್ಟುಕೊಂಡಿದ್ದೇನೆ. 15 ಬಂದರೂ ಕೂಡ ಸಮರ್ಪಕವಾಗಿ ಉತ್ಪತ್ತಿ ಇಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಖರ್ಚು ಮಾಡಬೇಡಿ ಎಂದು ಹೇಳಲಿಲ್ಲ. It is a question of comparison. Minor tanks ವಿಚಾರ ಈಗ ತಾನೇ ಅಪ್ಪಣೆ ಕೊಡಿಸಿದ್ದೀರಿ, ಶೇಕಡ 2½ ಆಗುತ್ತದೆ.

Sri H. M. CHANNABASAPPA.—I am coming to that point. Minor ಶೇಕಡ 2½ ಉತ್ಪತ್ತಿ ಬರಬೇಕು. ಆದರೆ ·15 ಉತ್ಪತ್ತಿ ಕೃಷ್ಣರಾಜ ಸಾಗರದಿಂದ ಬರುವುದಕ್ಕೆ ಸಾಧ್ಯವಿದೆ. ಆದ್ದರಿಂದ ಮೈನರ್ ಕೆರೆಗಳಿಗೂ ಶೇಕಡ .15 ಉತ್ಪತ್ತಿ ಬರುವಂತೆ ಮಾಡಿಕೊಡಬೇಕೇ ಅಥವಾ ಶೇಕಡ ·15, ಶೇಕಡ 2 ಅಥವಾ 3ಕ್ಕೆ ಹೆಚ್ಚಿಸಬೇಕೇ ? ಎರಡರಲ್ಲಿ ಯಾವುದು ಸರಿ ಎಂದು ಹೇಳಿದರೆ ಅದನ್ನು ಒಪ್ಪಿಕೊಳ್ಳುತ್ತೇನೆ. ಶೇಕಡ ·15 ಉತ್ಪತ್ತಿ ಬರುವ ಕೆರೆಗಳನ್ನು ದುರಸ್ತು ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಒಪ್ಪಬೇಕು. ಉಳಿಯುವುದು ಒಂದೇ ಮಾರ್ಗ. ಬರಬೇಕಾದ ವರಮಾನವನ್ನು ಹೆಚ್ಚಿಗೆ ಮಾಡಬೇಕು ಎಂದು ಅನೇಕ ಸದಸ್ಯರು ಒತ್ತಾಯಪಡಿಸಿರುವುದನ್ನು ಸರ್ಕಾರದವರು ಖಂಡಿತವಾಗಿ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಾರೆ. ಯಾವ ಪ್ರಮಾಣದಲ್ಲಿ ಭತ್ತದ ಬೆಳೆಗೆ ಮತ್ತು ಕಬ್ಬಿನ ಬೆಳೆಗೆ ಹೆಚ್ಚುಮಾಡಬೇಕೆಂಬ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ನಾವು ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಶ್ರೀ ನಾಗರಾಜ ಮೂರ್ತಿಯವರು ಟೀ.-ನರಸೀಪುರದಲ್ಲಿ ಕೆಲವು ಜಮೀನುಗಳಿಗೆ ನೀರನ್ನು ಕೊಡಲಿಲ್ಲವೆಂದು ಹೇಳಿದರು, ಅದು ನಿಜ. ಮೊಟ್ಟಮೊದಲು ಈ ಜಲಾಶಯದಿಂದ 90 ಸಾವಿರ ಎಕರೆ ನೀರಾವರಿಯಾಗಿತ್ತು. ಅನಂತರ ಇದಕ್ಕೆ 15 ಸಾವಿರ ಸೇರಿತು. ಒಟ್ಟು 1,05,000 ಎಕರೆ ತರಿಯಾಯಿತು. 1,20,000 ಎಕರೆ ಆಬಾದಾಗಬೇಕಾಗಿತ್ತು. ಇದರ ಪೈಕಿ 40 ಸಾವಿರ ಎಕರೆಗೆ ಕಬ್ಬು, ಇನ್ನು ನಲವತ್ತು ಸಾವಿರ ಎಕರೆಗೆ ಭತ್ತ ಹಾಕಬೇಕೆಂದು ನೀರನ್ನು ಈರೀತಿ ಉಪಯೋಗಿಸಿಕೊಳ್ಳಬೇಕೆಂದೂ ಏರ್ಪಾಡಾಗಿತ್ತು. 1931ನೆಯ ಇಸವಿಯಲ್ಲಿ ಕಾವೇರಿ ಬ್ರಾಂಚ್ ನಾಲೆಯನ್ನು ತೆಗೆಯುವುದನ್ನೂ ನಿಲ್ಲಿಸಿದರು. ಇನ್ನು ಬೇರೆ ಕಾಲುವೆಗಳಲ್ಲಿರತಕ್ಕ ನೀರನ್ನು ಸದ್ವಿನಿಯೋಗ ಮಾಡುವುದಕ್ಕೆ ಪ್ರಾರಂಭಿಸಿದರು. ಆದರೆ ಆಮೇಲೆ ಮೊದಲೇ ಗೊತ್ತಾಗಿದ್ದಂತೆ 40 ಸಾವಿರ ಎಕರೆಯಲ್ಲಿ ಕಬ್ಬನ್ನೂ 40 ಸಾವಿರ ಎಕರೆಯಲ್ಲಿ ಭತ್ತವನ್ನೂ ಹಾಕುವ ಮೊದಲ ಪ್ರೋಗ್ರಾಂ ಅನುಸರಿಸಲಿಲ್ಲ. ನೀರನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಿಕೊಳ್ಳುವುದಕ್ಕೆ ಪ್ರಾರಂಭವಮಾಡಿದರು. ಟಿ.-ನರಸೀಪುರದ ಕೊನೆಯ ಜಮೀನುಗಳಿಗೆ ನೀರು ಸಾಲದೇಯಿರುವುದಕ್ಕೆ ಇದೊಂದು ಕಾರಣವಲ್ಲದೆ ಇನ್ನೂ ಅನೇಕ ಕಾರಣಗಳಿಂದ ಕೊನೆಯಲ್ಲಿರುವ ಜನರಿಗೆ ನೀರಿನ ಅಭಾವವುಂಟಾಗಿರುವುದು ನಿಜ.

ಈಚೆಗೆ ಈ ವಿಷಯವನ್ನು ಪರಿಶೀಲಿಸಲು ಒಂದು ಸಬ್ ಕಮಿಟಿಯನ್ನು ನೇಮಕಮಾಡಿದ್ದರು. ಅವರು ಕೊಟ್ಟಿರುವ ವರದಿಯನ್ನು ಕೃಷ್ಣರಾಜಸಾಗರ ಕಮಿಟಿಯವರು ಪರಿಶೀಲನೆಮಾಡಿ ಅವರ ಅಭಿಪ್ರಾಯವನ್ನು ಕಳುಹಿಸಿದ್ದಾರೆ. ಇದರಮೇಲೆ ನಾಳೆ ನಾಳಿದ್ದು ಸಾಯಂಕಾಲದೊಳಗೆ ಆಖೈರು ತೀರ್ಮಾನವನ್ನು ಸರ್ಕಾರದವರು ಕೊಡುತ್ತಾರೆ. ಆಮೇಲೆ ಪರಿಸ್ಥಿತಿ ಉತ್ತಮವಾಗುತ್ತದೆಂದು ನಂಬಿಕೆಯಿದೆ. ಕ್ರಮೇಣ tail end ಜಮೀನುಗಳಿಗೂ ಆದಷ್ಟು ನೀರು ಒದಗಬಹುದೆಂದು ನಿರೀಕ್ಷಿಸಬಹುದು. ಮುಂದೆ ಕಪಿನಿ ಯೋಜನೆಯಾದಮೇಲೆ ಈ ಕೊರತೆ ನಿವಾರಣೆಯಾಗುತ್ತದೆಂದು ಕಾಣುತ್ತದೆ.

ಇನ್ನು ದಂಡಾವತಿ ಯೋಜನೆ ಉತ್ತಮ ಯೋಜನೆ. ನಾನೂ ನೋಡಿದ್ದೇನೆ, 42 ಲಕ್ಷ ರೂಪಾಯಿಗೆ ಅಂದಾಜಾಗಿದೆ. ಇದು ಬಹಳ ಲಾಭದಾಯಕವಾಗಿದೆ, ತೆಗೆದುಕೊಳ್ಳುವುದು ಅವಶ್ಯಕವೆಂದು ಇಂಜಿನಿಯರ ಅಭಿಪ್ರಾಯ. ಸರ್ಕಾರಕ್ಕೂ ಇಷ್ಟವಿದೆ. ಹಣದ ಅಭಾವದಿಂದ ಎರಡನೆಯ ಯೋಜನೆಯಲ್ಲಿ ಅದನ್ನು ಸೇರಿಸಲು ಸಾಧ್ಯವಾಗಲಿಲ್ಲ. ಆದುದರಿಂದ ಮೂರನೆಯ ಯೋಜನೆಯಲ್ಲಿ ತೆಗೆದುಕೊಳ್ಳಬೇಕೆಂಬ ಇಚ್ಛೆ ಇದೆ . . . .

ಶ್ರೀ ಎಲ್. ಸಿದ್ದಪ್ಪ.—ಎರಡನೆಯ ಯೋಜನೆ elastic ಎಂದು ಹೇಳಿರುವುದರಿಂದ ಇದರಲ್ಲೇ ಸೇರಿಸಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಡೋಣ. ಮಾವಿನ ಹೊಳೆ ವಿಷಯ ಹೇಳಿದರು. ಅದು ಆಗಸ್ಟ್ 1ನೇ ತಾರೀಖು 1942ರಲ್ಲಿ 4,68,000 ರೂಪಾಯಿಗಳಿಗೆ ಮಂಜೂರಾಯಿತು. ಹೋದ ಏಪ್ರಿಲ್‌ನಲ್ಲಿ, ಸುಮಾರು ಒಂದು ವರ್ಷದ ಹಿಂದೆ ಕಾಂಟ್ರಿಬ್ಯೂಷನ್ ವಾಟರ್‌ರೇಟಿನ ವಿಷಯದಲ್ಲಿ ರೈತರ ಒಪ್ಪಿಗೆ ಪಡೆಯುವ ವಿಷಯದಲ್ಲಿ ಕಾಗದ ಕೂಡ ಬರೆದಿದ್ದೇವೆ. ಈಗ ಇದನ್ನು fresh enquiry ಮಾಡುವುದಕ್ಕೆ ಇಂಜಿನಿಯರನ್ನು ಕಳುಹಿಸಿ, ಎಕರೆಗೆ 15 ರೂಪಾಯಿ ವಾಟರ್ ರೇಟ್ ಮತ್ತು 300 ರೂಪಾಯಿ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಸಾಧ್ಯವೆ ಎಂಬುದನ್ನು ತಿಳಿದು ವರದಿ ಮಾಡುವಂತೆ ಸೂಚನೆ ಕೊಟ್ಟಿದ್ದೇವೆ. ಅವರಿಂದ ವರದಿ ಬಂದ ಮೇಲೆ ಏನು ಮಾಡಬೇಕೆಂಬ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

2 P.M.

ಪಾಲಾರ್ ನೀರಿನ ವಿಷಯ ಬಹಳ ಪ್ರಾಮುಖ್ಯವಾದದ್ದು. ಆ ಬಗ್ಗೆ ನಾನು ಇರತಕ್ಕ ಅಂಕಿಅಂಶಗಳನ್ನು ಮತ್ತು ವಿಷಯಗಳನ್ನು ಒದಗಿಸುತ್ತೇನೆಯೇ ವಿನಾ ಅಭಿಪ್ರಾಯವನ್ನು ತಿಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಶ್ರೀ ನಾಗಯ್ಯರೆಡ್ಡಿಯವರು ಮಾತನಾಡುತ್ತ ನಮ್ಮ ಸರ್ಕಾರದವರು ಬಹಳ ಅನಾದರಣೆಯನ್ನು ಮಾಡಿದ್ದಾರೆ, ತಪ್ಪು ಮಾಡಿದ್ದಾರೆಂದು ಆಪಾದನೆ ಮಾಡಿದರು. ಅದರ ಬಗ್ಗೆ ಒಂದೆರಡು ವಿಷಯಗಳನ್ನು ತಿಳಿಸಬೇಕಾದದ್ದು ಅವಶ್ಯಕ. ಈ ಬಗ್ಗೆ 1892ನೇ ಇಸವಿಯಲ್ಲಿ ಮೈಸೂರು ಸರ್ಕಾರಕ್ಕೂ ಮತ್ತು ಮದರಾಸು ಸರ್ಕಾರಕ್ಕೂ ಒಂದು ಒಪ್ಪಂದವಾಗಿದೆ. ಅದರ ಪ್ರಕಾರವಾಗಿ ನಾವು ಹೆಚ್ಚು ನೀರನ್ನು ಅವರ ಅನುಮತಿ ಇಲ್ಲದೆ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ. 'ಎ' ಷೆಡ್ಯೂಲಿನಲ್ಲಿ ಯಾವ ಯಾವ ಹಳ್ಳಗಳು ಈ ಒಪ್ಪಂದಕ್ಕೆ ಬರುತ್ತವೆ ಎಂಬುದನ್ನೂ 'ಬಿ' ಷೆಡ್ಯೂಲಿನಲ್ಲಿ ಒಂದು specific limit ಅನ್ನು ತೋರಿಸಿದ್ದಾರೆ. "Within which no reservoirs should be constructed without the express permission from the Madras Government" ಎಂದು. ಅದರಿಂದ ಕೆಳಕ್ಕೆ ಯಾವ ಹೊಸ ರಿಸರ್ವಾಯರ್‌ಗಳನ್ನೂ ಕಟ್ಟುವುದಕ್ಕೆ ಸಾಧ್ಯವಿಲ್ಲ. 'ಸಿ' ಷೆಡ್ಯೂಲಿನಲ್ಲಿ "list of works that have been under progress and to be completed though it may be a breach of this agreement". ಒಪ್ಪಂದವಾಗತಕ್ಕಂಥ ಕಾಲದಲ್ಲಿ ಕೆಲವು ಕೆಲಸಗಳನ್ನು ನಡೆಸುತ್ತಿದ್ದರು. ಆ ಕೆಲಸಗಳನ್ನು ಮಾತ್ರ ಒಪ್ಪಂದಕ್ಕೆ ವಿರೋಧವಾಗಿದ್ದರೂ ಕೂಡ ಪೂರೈಸಿಕೊಂಡು ಹೋಗತಕ್ಕದ್ದು. ಇಂಥ ಕೆಲಸಗಳು ಯಾವುವು ಎಂದು ಇದರಲ್ಲಿ ಕೊಟ್ಟಿದ್ದಾರೆ. ಯಾವ ಹೊಸ ಕೆಲಸ ಕಾರ್ಯಗಳನ್ನೂ ತೆಗೆದುಕೊಳ್ಳಕೂಡದೆಂದು ನಿಧಾಯಕವಾಗಿದೆ. ಈ ಹೊಸ ಕೆಲಸಗಳಲ್ಲಿ ರಾಮಸಾಗರ ಕೆರೆ ಮತ್ತು ಇನ್ನೂ ಇತರಕೆರೆಗಳು ಇರುತ್ತವೆ. ಆ ಕೆರೆಗಳ ಪೂರ್ತಿ capacity ಯನ್ನು maintain ಮಾಡಿಕೊಂಡು

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಹೋಗಲು ಅಡ್ಡಿ ಇಲ್ಲ. ಅವುಗಳ capacity ಕಡಿಮೆ ಯಾಗಿರುವ ಪಕ್ಷದಲ್ಲಿ ಅವುಗಳ ಕಟ್ಟೆಯನ್ನು ಎತ್ತರಿಸಿ ಎಷ್ಟು ನೀರು ಅವುಗಳಲ್ಲಿ ಇರಬೇಕೆಂದು ವಿಧಾಯಕವಾಗಿತ್ತೋ ಅಷ್ಟು ನೀರನ್ನು impound ಮಾಡಿಕೊಳ್ಳುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಆದುದರಿಂದ ನಾವು ಒಂದು ವೇಳೆ impound ಮಾಡುತ್ತಿರತಕ್ಕ ನೀರು ಅವುಗಳ capacity ಗೆ ತಕ್ಕಷ್ಟಿಲ್ಲವೆಂದರೆ ಅದನ್ನು ಪರೀಕ್ಷೆ ಮಾಡಿ, ಅಂಥ ಕೆರೆಗಳ ಕಟ್ಟೆಯನ್ನು ಎತ್ತರಿಸಿ ಎಷ್ಟು ನೀರನ್ನು impound ಮಾಡುವುದಕ್ಕೆ ಅಧಿಕಾರವಿದೆಯೋ ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ. ಹೀಗೆ ಮಾಡುವಾಗ ಎರಡು ಭಾಗಗಳಿವೆ. ಒಂದನೆಯದು ಕೋಡಿ ಎತ್ತರ ಕಡಿಮೆಯಾಗಿ ಕೋಡಿಯಲ್ಲಿ ನೀರು ಹರಿದು ಹೋಗತಕ್ಕದ್ದು ಮತ್ತು ಎರಡನೆಯದು ಹೂಳು ತುಂಬಿ capacity ಕಡಮೆ ಯಾಗತಕ್ಕದ್ದು. ಆದುದರಿಂದ ಈಗ ಆ ಕೆರೆಗಳನ್ನು desilt ಮಾಡಿಸುವುದು ಉತ್ತಮವೇ, ಅಥವಾ ಕಟ್ಟೆಯನ್ನು ಎತ್ತರಿಸುವುದು ಉತ್ತಮವೇ ಎಂದು ಆಯಾ ಸ್ಥಳಗಳಲ್ಲಿರುವ ಪರಿಸ್ಥಿತಿಯನ್ನು ನೋಡಿಕೊಂಡು ವ್ಯವಸ್ಥೆ ಮಾಡಬೇಕು. ಯಾವ ರೀತಿ ಮಾಡಿದರೆ ಕಡಿಮೆ ಖರ್ಚಿನಿಂದ ಹೆಚ್ಚು ಪ್ರಯೋಜನವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದಕ್ಕೆ ತಕ್ಕ ವ್ಯವಸ್ಥೆಯನ್ನು ಏರ್ಪಾಡು ಮಾಡುತ್ತೇವೆ. ಈ ಬಗ್ಗೆ ಅವರು ಮಾಡಿದ್ದಾರೆ, ಇವರು ಮಾಡಲಿಲ್ಲ ಎಂಬ ಅವರ ವಾದ ಸರಿಯಾದದ್ದಲ್ಲವೆಂದು ಹೇಳುತ್ತೇನೆ.

ಒಟ್ಟಿನಲ್ಲಿ ಹೇಳುವುದಾದರೆ, ಈ ವಿಷಯ ಭಾರತ ಸರ್ಕಾರಕ್ಕೆ ಹೋಗಿದೆ. ಅವರ ಪರ ಒಬ್ಬರು, ನಮ್ಮ ಇಂಜಿನಿಯರೊಬ್ಬರು, ಮತ್ತು ಮದರಾಸು ಇಂಜಿನಿಯರೊಬ್ಬರು, ಈ ಮೂರು ಜನರೂ ಸೇರಿ ಅಂಕಿಅಂಶಗಳನ್ನು ಪರಿಶೀಲನೆಮಾಡಿ ರಿಪೋರ್ಟ್ ಮಾಡಬೇಕೆಂದು ತಿಳಿಸಿದ್ದಾರೆ. ಈಗ ಎರಡು ಮೀಟಿಂಗುಗಳಾಗಿವೆ. ಮೂರನೆಯ ಮೀಟಿಂಗ್ ನಡೆಯಬೇಕು. ಮೂರನೆಯ ಮೀಟಿಂಗ್ ನಡೆಯುವುದರ ಮುನ್ನ ಕೆಲವು ಅಂಕಿ ಅಂಶಗಳನ್ನು ಮೈಸೂರಿನವರು ಒದಗಿಸುತ್ತಿದ್ದಾರೆ. ಇವರುಗಳೆಲ್ಲ ಮೂರನೆಯ ಮೀಟಿಂಗ್‌ನಲ್ಲಿ ಸೇರಿ ಮೈಸೂರಿನ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ಸೂಕ್ತ ಕಾರ್ಯಕ್ರಮವನ್ನು ಸಕಾಲದಲ್ಲಿ ತೆಗೆದುಕೊಳ್ಳುತ್ತಾರೆಂದು ಹೇಳಿದರೆ ನಮ್ಮ ಮಾನ್ಯ ಶ್ರೀ ನಾಗಯ್ಯರೆಡ್ಡಿಯವರು ಒಪ್ಪುತ್ತಾರೆಂದು ತಿಳಿದಿದ್ದೇನೆ. ಪತ್ರಿಕೆಗಳಲ್ಲಿ ಅನೇಕ ಟೀಕೆಗಳು ಬರುತ್ತವೆ. ಆದರೆ ಆ ಪತ್ರಿಕೆಗಳವರಲ್ಲಿಗೆ ಹೋಗಿ ನಮ್ಮ ಅಭಿಪ್ರಾಯ ತಿಳಿಸುವುದಕ್ಕೆ ಬದಲಾಗಿ ಕಾನೂನು ಬದ್ಧವಾಗಿ ಕೆಲಸ ಮಾಡುವುದು ಸೂಕ್ತ. ಒಂದು ವೇಳೆ ಇನ್ನೊಬ್ಬರು ತಪ್ಪುಮಾಡಿದರೆ ಮಾಡಲಿ, ನಾವು ಮಾತ್ರ ತಪ್ಪು ಮಾಡಬಾರದು ಎಂಬುದೇ ಸರ್ಕಾರದ ಆಶಯ. ಈ ವಿಷಯದಲ್ಲಿ ಒಪ್ಪಂದದಂತೆ ನಡೆಯದೆ ಹೆಚ್ಚು ಕಡಮೆ ಯಾಗಿದ್ದರೆ ಕೇಂದ್ರ ಸರ್ಕಾರಕ್ಕೆ ರೆಫರ್ ಮಾಡಬಹುದು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಅವರು ಕಟ್ಟೆ ಕಟ್ಟಿಕೊಳ್ಳಲಿ, ನೀವು ಕಾಗದ ಬರೆಯುತ್ತಿರಿ. Is this the policy of your Government ? Is this the way you do things ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇನ್ನೊಬ್ಬರು ದುಂಡಾವರ್ತಿ ಮಾಡಿ ತಪ್ಪುದಾರಿಗೆ ಹೋದರೆ ಆ ಬಗ್ಗೆ ಕಾನ್‌ಸ್ಟಿಟ್ಯೂಷನಲ್ಲಾಗಿ ಕಾರ್ಯಕ್ರಮ ತೆಗೆದುಕೊಳ್ಳುವುದು ಒಳ್ಳೆಯದೆ ಅಥವಾ ನಾವೂ ಅದೇ ತಪ್ಪು ದಾರಿಗೆ ಹೋಗಬೇಕೆ ಎಂಬುದನ್ನು ಮಾನ್ಯ ಸದಸ್ಯರೇ ಹೇಳಲಿ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ನಮಗೆ ಕೊಟ್ಟಿದ್ದ ಅವಕಾಶದ ಪ್ರಕಾರ 13 ಅಣೆಗಳನ್ನು ಕಟ್ಟಬೇಕಾಗಿತ್ತು. ಆದರೆ ಒಂದು ಯೂನಿಟ್ ನೀರನ್ನೂ ಸಹ ಉಪಯೋಗಿಸಿಕೊಂಡಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗ್ರಿಮೆಂಟಿನ ಪ್ರಕಾರ ಎಷ್ಟು ನೀರನ್ನು ಎಲ್ಲ ಕೆರೆಗಳಿಗೂ ಇಂಪೌಂಡ್ ಮಾಡುವುದಕ್ಕೆ ಅವಕಾಶವಿದೆಯೋ ಅಷ್ಟನ್ನು ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರ ಹಿಂತೆಗೆಯುವುದಿಲ್ಲ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಅಗ್ರಿಮೆಂಟ್ ರಿವೈಸ್ ಮಾಡಿದ್ದಾರೆ.

Sri H. M. CHANNABASAPPA.—I have no objection to do a work which is within the four corners of the Agreement to which we are bound and they are bound. We cannot go on doing things against the provisions of the Agreement and it would not be correct also.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಸಧ್ಯದ ಪರಿಸ್ಥಿತಿಯನ್ನು ನೀವು ತಿಳಿದುಕೊಂಡಿಲ್ಲ. ಅವರು ಬೇಕಾದ್ದನ್ನು ಮಾಡಿಕೊಂಡು ನೀರನ್ನು ಉಪಯೋಗಿಸಿಕೊಂಡರು. ನಾವು ನೀರನ್ನು ಉಪಯೋಗಿಸಿಕೊಳ್ಳದಿದ್ದರೆ, ಅಣೆಕಟ್ಟು ಕಟ್ಟದಿದ್ದರೆ, ಕೆರೆಗಳಿಗೆ ನೀರು ಬಾರದೆ ನಮಗೇ ತೊಂದರೆ.

Sri H. M. CHANNABASAPPA.—Whatever suggestion that the Hon'ble Member makes, I will take personal interest and take action. Whatever that is possible within the four corners of the Agreement will be certainly done.

Sir, I hope I have met all the points raised by Hon'ble Members. If I have not replied to any point raised by any Hon'ble member, I will take every care to see that that point is looked into and intimate the member of the feasibility or otherwise of that particular project. If I have not made mention of all the points, it is merely for want of time and nothing else. I certainly welcome all criticisms and see that the desires of all the members are fulfilled as far as possible.

Mr. SPEAKER.—The question is:

"That a sum not exceeding Rs. 77,96,000 be granted to the Government to defray the charges which will come in course of payment during the year ending 31st

day of March 1957, in respect of 'Other Revenue Expenditure financed from Ordinary Revenue'."

The motion was adopted.

Mr. SPEAKER.—I will put the rest of the demands. The question is:

"That the respective sums not exceeding the amounts shown in the list of Demands circulated to members be granted to Government to defray the charges which will come in course of payment during the yeare nding 31st day of March 1957 in respect of Demands Nos. 37, 39A and 40."

The motion was adopted.

(As directed by the Speaker, the motions for demands for Grants which were adopted by the House are reproduced below.)

DEMAND No. 37—WORKING EXPENSES—IRRIGATION WORKS.

XVII. I.N.E. AND D. WORKS (COMMERCIAL)—WORKING EXPENSES.

"That a sum not exceeding Rs. 40,74,000 be granted to the Government to defray the charges which will come in course of payment during the year ending 31st day of March 1957, in respect of 'I.N.E.D. Works (Commercial)—Working Expenses'."

DEMAND No. 39-A—COMPENSATION TO ZAMINDARS.

65. PAYMENT OF COMPENSATION TO LANDHOLDERS, ETC.

"That a sum not exceeding Rs. 26,000 be granted to the Government to defray the charges which will come in course of payment during the year ending 31st day of March 1957, in respect of 'Payment of Compensation to Landholders, etc.'."

DEMAND No. 40—IRRIGATION.

68. CONSTRUCTION OF IRRIGATION, NAVIGATION, EMBANKMENT AND DRAINAGE WORKS—COMMERCIAL.

68A. CONSTRUCTION OF IRRIGATION, NAVIGATION, EMBANKMENT AND DRAINAGE WORKS-NON-COMMERCIAL.

"That a sum not exceeding Rs. 6,35,37,300 be granted to the Government to defray the charges which will come in course of payment during the year ending 31st day of March 1957, in respect of 'Construction of Irrigation, Navigation, Embankment, and Drainage Works—Commercial and Non-Commercial'."

Mr. SPEAKER.—The House will now adjourn to meet at Twelve of the Clock tomorrow.

The House adjourned at Ten Minutes past Two of the Clock to meet at Twelve of the Clock on Tuesday, 27th March 1956.

WD 2896—GPB—550—17.7.56